ಖಾಸಗಿ ಪ್ರಸಾರಕ್ಕಾಗಿ

# ನವ ಮಾನವ ಮಾಸಿಕ

ಆಗಸ್ಟ್, ೨೦೧೧

**ಸಂಪಾದಕ: ಡಿ.ಎಸ್.ನಾಗಭೂಷಣ**
**ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ- ೫೭೭ ೨೦೪**
**ದೂ: ೦೮೧೮೨-೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್:** dsnagabhushana@gmail.com

---

## ಸಂಪಾದಕರ ಟಿಪ್ಪಣಿಗಳು:

ಪ್ರಿಯ ಓದುಗರೇ,

ಸಮಾಜವಾದ ಎಂಬ ಶಬ್ದವೇ ನಮ್ಮ ರಾಜಕೀಯ ಚರ್ಚೆಗಳಿಂದ ಬಹಿಷ್ಕೃತವಾಗುತ್ತಿರುವ ದಿನಗಳಲ್ಲಿ ನಾವು 'ಮಾನವ' ಪತ್ರಿಕೆಯನ್ನು ಪುನಾರಂಭಿಸುವ ಸಾಹಸಕ್ಕೆ ಕೈಹಾಕಿದ್ದೇವೆ. ಈ 'ಮಾನವ' ಎಪ್ಪತ್ತರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಸಮಾಜವಾದಿ ಚಳುವಳಿಯ, ವಿಶೇಷವಾಗಿ ಸಮಾಜವಾದಿ ಯುವಜನ ಸಭಾದ ಮುಖವಾಣಿಯಾಗಿತ್ತು. ಹಾಗೆ ಮುಖವಾಣಿ ಎಂದರೆ ತಪ್ಪಾಗುತ್ತದೇನೋ. ಲೋಹಿಯಾ ಅವರು ಇಂಗ್ಲಿಷ್‌ನಲ್ಲಿ ಆರಂಭಿಸಿದ್ದ 'Mankind'ನಂತೆ ಈ ಪತ್ರಿಕೆಯೂ ಮಾನವನ ಪೂರ್ಣತೆಯ ಅನ್ವೇಷಣೆಯ ಪ್ರಯತ್ನದಲ್ಲಿ, ವೈವಿಧ್ಯಮಯ ಆಸಕ್ತಿಗಳ ಬಗೆಗಿನ ಲೇಖನ-ವರದಿ-ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿತ್ತು. ಜೆಪಿ ಚಳುವಳಿಯ ಅಂತಿಮ ಪರಿಣಾಮವಾಗಿ ಸಮಾಜವಾದಿ ಚಳುವಳಿ ಹಿನ್ನೆಲೆಗೆ ಸರಿಯುತ್ತಿದ್ದಂತೆ, ಈ ಪತ್ರಿಕೆಯೂ ಕಣ್ಮರೆಯಾಯಿತು. ಆದರೆ ಎಪ್ಪತ್ತರ ದಶಕದ ಕೊನೆಯ ಹೊತ್ತಿಗೆ ನಾವು ಕೆಲವು ಗೆಳೆಯರು-ನಾನು, ನೆಲಮನೆ ದೇವೇಗೌಡ, ದೇವನೂರ ಮಹದೇವ ಮುಂತಾದವರು-ಈ ಪತ್ರಿಕೆಯನ್ನು ಪುನಃಶ್ಚೇತನಗೊಳಿಸುವ ಪ್ರಯತ್ನ ಮಾಡಿದ್ದೆವು. ನಾನೇ ಅದರ ಸಂಪಾದಕನಾಗಿದ್ದೆ. ಹೆಚ್ಚೂಕಡಿಮೆ ಒಂದು ವರ್ಷ ನಡೆದ ಈ ಮಾಸಿಕವನ್ನು 'ಲಂಕೇಶ್ ಪತ್ರಿಕೆ' ಆರಂಭವಾಗುತ್ತಿದ್ದಂತೆ, ಅದೇ ಸಮಾಜವಾದಿ ರಾಜಕಾರಣದ ವೈಚಾರಿಕ ವೇದಿಕೆಯಾಗಲಿದೆ ಎಂಬ ನಂಬಿಕೆಯಲ್ಲಿ ನಿಲ್ಲಿಸಲಾಯಿತು!

ಈಗ ಕಾಲ ಬದಲಾಗಿದೆ. ಸಮಾಜವಾದದ ಪರಿಕಲ್ಪನೆ ಅನೇಕ ಗೊಂದಲಗಳಿಗೆ ಸಿಕ್ಕಿ ಅನುಮಾನಸ್ಪದವೆನಿಸಿ, ಹಿನ್ನೆಲೆಗೆ ಸರಿದಿದೆ. ಇಂತಹ ಸಂದರ್ಭದಲ್ಲಿ 'ಮಾನವ'ದ ಪುನರುಜ್ಜೀವನ ಏಕೆ ಎಂಬ ಪ್ರಶ್ನೆ ಏಳಬಹುದು. ಆದರೆ ಸಮಾಜವಾದವನ್ನು ಹೀಗಳೆದು-ಅದಕ್ಕೆ ಲೋಹಿಯೋತ್ತರ ಸಮಾಜವಾದ ಮತ್ತು ಸಮಾಜವಾದಿಗಳ ಜಡತೆಯೂ  ಆಸ್ಪದ ನೀಡಿತು ಎಂಬುದು ನಿಜವಾದರೂ-ಬಂದ ಮುಕ್ತ ಮಾರುಕಟ್ಟೆ ಆರ್ಥಿಕತೆ, ಕಳೆದ ಇಪ್ಪತ್ತು ವರ್ಷಗಳ ತನ್ನ ಆಟಾಟೋಪದಲ್ಲಿ ಸೃಷ್ಟಿಸಿರುವ ಜೀವನ ಕ್ರಮವನ್ನು ನೋಡಿದರೆ, ಕಾಲ ಮತ್ತೆ ಬದಲಾಗುವ;ಅಷ್ಟೇ ಅಲ್ಲ, ಬದಲಾಗಲೇ ಬೇಕಾದ ಅನಿವಾರ್ಯತೆ ಸನ್ನಿಹಿತವಾದಂತೆ ಕಾಣುತ್ತದೆ.

ಈ ಮುಕ್ತ ಮಾರುಕಟ್ಟೆ ನೀತಿ, ದೇಶ ಕನಸಿನಲ್ಲಿಯೂ ನಿರೀಕ್ಷಿಸದಿದ್ದಂತಹ ಪ್ರಮಾಣ ಮತ್ತು ವೇಗದಲ್ಲಿ ಸಂಪತ್ತನ್ನು ಸೃಷ್ಟಿಸಿದೆಯಾದರೂ, ಅದರ ಗುಣಾತ್ಮಕತೆಯ ಪರಿಣಾಮಗಳನ್ನು ನಾವಿಂದು ಗಾಬರಿಯಿಂದ ನೋಡುವಂತಾಗಿದೆ. ಬಡತನ ನೀಗುವ ಅದರ ಘೋಷಿತ ಗುರಿ, ಎಂದೂ ಮುಗಿಯಲಾರದ ಬಡತನದ ಕಲ್ಪನೆಯನ್ನು ಬಡವ-ಶ್ರೀಮಂತರೆನ್ನದೆ ಜನಸಾಮಾನ್ಯರಲ್ಲಿ ಬಿತ್ತಿ ತನ್ನ ಆಟ ಮುಂದುವರೆಸಿದೆ. ಈ ಆಟ ಅದು ಸೃಷ್ಟಿಸುತ್ತಿರುವ ಸಂಪತ್ತಿನ ಪ್ರಮಾಣದಷ್ಟೇ ಅಸಮಾನತೆ, ದಾಹ ಮತ್ತು ಇವುಗಳ ಫಲವಾಗಿ ವೈವಿಧ್ಯಮಯ ಭ್ರಷ್ಟಾಚಾರ, ಹಿಂಸಾಚಾರ, ಆತ್ಮಹತ್ಯೆಗಳ ಸರಣಿಯನ್ನೇ ಸೃಷ್ಟಿಸಿ ಅಂತಿಮವಾಗಿ ಇಲ್ಲಿನ ಬದುಕಿನ ಅಧ್ಯಾತ್ಮಿಕತೆಯನ್ನೂ ವಿಕ್ಷಿಪ್ತಗೊಳಿಸಿಬಿಟ್ಟಿದೆ. ಈ ದೇಶ ತನ್ನ ಪಾರಂಪರಿಕ ವಿವೇಕದ ಮೂಲಕ ಕಂಡುಕೊಂಡಿದ್ದ ಮಿತಿಗಳುಳ್ಳ ಬದುಕಿನ ಮೂಲ ನಂಬಿಕೆ, ಮೌಲ್ಯ ಮತ್ತು ಆದ್ಯತೆಗಳನ್ನೇ ಬುಡಮೇಲುಗೊಳಿಸಿದೆ. ಆಧುನಿಕತೆ ಕಟ್ಟಿಕೊಟ್ಟ ಹೊಸ ಸಮಾನತೆಯ ಮತ್ತು ಘನತೆಯ ಕನಸು ಇಂದು ದುಃಸ್ವಪ್ನವಾಗಿ ಪರಿವರ್ತಿತವಾಗಿದೆ.

ಇದಕ್ಕೇನು ಉತ್ತರ? Back to basics ಎಂಬುದೇ ಉತ್ತರ! ಈ ಸರಕು ಕೇಂದ್ರಿತ ಆರ್ಥಿಕತೆಗೆ ಆದಷ್ಟು ಬೇಗ ವಿದಾಯ ಹೇಳಿ, ಮನುಷ್ಯ ಕೇಂದ್ರಿತ ಆರ್ಥಿಕತೆಗೆ ಮರಳುವುದೊಂದೇ ಉತ್ತರ. ಅಂದರೆ. ವಿಶ್ವಾಸಾರ್ಹತೆ ಕಳೆದುಕೊಂಡಿರುವ ಹಳೆಯ ಸಮಾಜವಾದದ  ಮೂಲಾಧಾರಗಳನ್ನು ಪುನಾರಚಿಸಿ, ಕಾಲದ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾದ  ಹೊಸ ಸಮಾಜವಾದದ ಅನ್ವೇಷಣೆಯನ್ನು ನಾವಿಂದು ಮಾಡಬೇಕಿದೆ. ಅದಕ್ಕೊಂದು ಪುಟ್ಟ ವೇದಿಕೆ ಒದಗಿಸುವ ಪ್ರಯತ್ನವಾಗಿ ಈ 'ಮಾನವ'ದ ಪುನರುಜ್ಜೀವನಕ್ಕೆ ನಾವು ಕೆಲವು ಗೆಳೆಯರು ಕೈ ಹಾಕಿದ್ದೇವೆ. ಹಳೆಯ ಸಮಾಜವಾದಿ ಗೆಳೆಯ ರಾಜಶೇಖರ ಕೋಟಿ ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಹಾಗೇ ಹಲವು ಎಳೆಯ ಉತ್ಸಾಹಿ ಗೆಳೆಯರೂ ನಮ್ಮೊಂದಿಗೆ ಕೈಜೋಡಿಸಲು ಮುಂದಾಗಿದ್ದಾರೆ. ನೀವೂ ಕೈಜೋಡಿಸುವಂತಾದರೆ, ನಿಮ್ಮ ಕೈಲಾದ ಹಣಕಾಸು ಮತ್ತು ವಿಚಾರ-ಚರ್ಚೆಗಳ ರೂಪದ ನೆರವು ನೀಡುವುದಾದರೆ, ನಮ್ಮ ಈ ಪ್ರಯತ್ನ ಸಾರ್ಥಕವಾದೀತು.

ಈ ಸಂಚಿಕೆಯನ್ನು, ಮಾಡಬೇಕೆನಿಸಿದ್ದನ್ನು ಕೂಡಲೇ ಮಾಡಿಬಿಡುವ ಈ ಸಂಪಾದಕನ (ಸುಟ್ಟರೂ ಹೋಗದ)ಹುಟ್ಟು ಗುಣಕ್ಕನುಸಾರವಾಗಿ, ಒಂದು ವಾರದಲ್ಲಿ ಸಿದ್ಧಪಡಿಸಲಾಗಿದೆ. ಇದಕ್ಕೆ ಪೂರಕವಾಗಿ, ಎಷ್ಟೋ ವರ್ಷಗಳ ನಂತರ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ 'ಜಾತಿ ವಿರೋಧಿ ಸಮ್ಮೇಳನ'ದ ನಡಾವಳಿಯೂ ನೆರವಿಗೆ ಬಂದು, ಈ ಅವಸರದಲ್ಲಿಯೂ ನಮ್ಮ ಘೋಷಿತ ಉದ್ದೇಶ ಸ್ವಲ್ಪಮಟ್ಟಿಗಾದರೂ ಈಡೇರಿದೆಯೆಂದು ಭಾವಿಸುವೆ. ಜೊತೆಗೆ ಇನ್ನಷ್ಟು ವಿಷಯ ವೈವಿಧ್ಯ ನಿಮ್ಮ ಸಹಕಾರದಿಂದ 'ಮುಂದಿನ ಸಂಚಿಕೆಗಳಲ್ಲಿ ಕಾಣಿಸಿಕೊಳ್ಳುವುದು ಎಂದು ಆಶಿಸುವೆ.

ಈ ಸಂಚಿಕೆಯಲ್ಲಿ ಚಿಂತನೆಗೆ ಮತ್ತು ಚರ್ಚೆಗೆ ಸಾಕಷ್ಟು ಆಹಾರವಿದೆ. ವಿಶೇಷವಾಗಿ ಸಾಮಾಜಿಕ ನ್ಯಾಯದ ಕಲ್ಪನೆ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ಸ್ವರೂಪದ ಬಗ್ಗೆ. ನಿಮ್ಮ ಟೀಕೆ-ಟಿಪ್ಪಣಿ-ಸಲಹೆ-ಸೂಚನೆಗಳನ್ನು ಎದುರು ನೋಡುತ್ತೇನೆ.

**-ಸಂಪಾದಕ**

# ಶಿವಮೊಗ್ಗದಲ್ಲಿ ಜಾತಿ ವಿರೋಧಿ ಸಮ್ಮೇಳನ ಹಾಗೂ ಅಂತರ್ಜಾತಿ ವಿವಾಹಿತರ ಸಮಾವೇಶ

ಇದೇ ಜೂನ್ ೧೯ರಂದು ಸಾಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ, ವಿವಿಧ ಸಮಾನ ಮನಸ್ಕ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಶಿವಮೊಗ್ಗದ ಕರ್ನಾಟಕ ಸಂಘ ಭವನದಲ್ಲಿ 'ಜಾತಿ ವಿರೋಧಿ ಸಮ್ಮೇಳನ' ಹಾಗೂ ಅದರ ಅಂಗವಾಗಿ 'ಅಂತರ್ಜಾತಿ ವಿವಾಹಿತರ ಸಮಾವೇಶ'ವೊಂದನ್ನು ಆಯೋಜಿಸಿತ್ತು.



ಕರ್ನಾಟಕದ ರಾಜಕಾರಣ ದಿನೇ ದಿನೇ ಜಾತಿ ಕೇಂದ್ರಿತವಾಗುತ್ತಿದ್ದು, ರಾಜಕೀಯ ಭ್ರಷ್ಟಾಚಾರವು ಜಾತಿ ಶಕ್ತಿಗಳ ರಕ್ಷಣೆ ಪಡೆಯುವ ಹಂತ ತಲುಪಿದೆ. ಹೀಗಾಗಿ ರಾಜಕಾರಣ ತನ್ನೆಲ್ಲ ತಾತ್ವಿಕ ಬೇರುಗಳನ್ನು ಕಳೆದುಕೊಂಡು ಒಂದು ಸ್ಪರ್ಧಾತ್ಮಕ ಹಣಕಾಸಿನ ದಂಧೆಯಾಗಿ ಹೋಗಿದ್ದು, ಸಾರ್ವಜನಿಕ ಜೀವನ ಎಲ್ಲ ಘನತೆಯನ್ನೂ ಕಳೆದುಕೊಂಡಿದೆ. ಈ ಪ್ರವೃತ್ತಿಯ ವಿರುದ್ಧ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಒಂದು ಸಣ್ಣ ಪ್ರಯತ್ನವಾಗಿ ಈ ಸಮ್ಮೇಳನವನ್ನು ಸದ್ಯದ ಇಂತಹ ರಾಜಕಾರಣದ ರಾಜಧಾನಿ ಎನಿಸಿರುವ ಶಿವಮೊಗ್ಗದಲ್ಲಿ ಆಯೋಜಿಸಿರುವುದಾಗಿ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಹೇಳಿದರು.

ಕನ್ನಡದ ಖ್ಯಾತ ಲೇಖಕ ದಿ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಪತ್ನಿ ಶ್ರೀಮತಿ ರಾಜೇಶ್ವರಿ ತೇಜಸ್ವಿಯವರು ಸಮ್ಮೇಳನವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಅವರು ಸುಮಾರು ಐವತ್ತು ವರ್ಷಗಳ ಹಿಂದೆ ತಮ್ಮ ಮತ್ತು ತೇಜಸ್ವಿಯವರ ಮದುವೆಗಾಗಿ ಕುವೆಂಪು ಅವರು ರೂಪಿಸಿದ 'ಮಂತ್ರ ಮಾಂಗಲ್ಯ'ವು ಹೇಗೆ ಒಂದು ವರದಕ್ಷಿಣೆ ವಿರೋಧಿ ಸರಳ ವಿವಾಹದ ಆಂದೋಲನಕ್ಕೇ ಕಾರಣವಾಯಿತೆಂಬುದನ್ನು ಆ ಸಂದರ್ಭದ ಕುವೆಂಪು ಅವರ ಕೆಲವು ಮಾತುಗಳನ್ನು ಉಲ್ಲೇಖಿಸಿ ವಿವರಿಸಿದರು. ಹಾಗೇ ಕಳೆದ ೬೦–೭೦ರ ದಶಕಗಳಲ್ಲಿ ಸಮಾಜವಾದಿ ಯುವಜನ ಸಭಾದ ಗೆಳೆಯರು ನಡೆಸಿದ 'ಜಾತಿ ವಿನಾಶ' ಸಮ್ಮೇಳನ ಮತ್ತು ಕಾರ್ಯಕ್ರಮಗಳು ಹಾಗೂ ಅವುಗಳ ರಚನಾತ್ಮಕ ಪರಿಣಾಮಗಳನ್ನು ನೆನಪು ಮಾಡಿಕೊಟ್ಟರು

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ದೆಹಲಿಯ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವಿದ್ವಾಂಸ ಹಾಗೂ ಖ್ಯಾತ ಸಮಾಜವಾದಿ ಚಿಂತಕ ಯೋಗೇಂದ್ರ ಯಾದವ್ ಅವರು, ಬದಲಾದ ಸಂದರ್ಭದಲ್ಲಿ ಜಾತಿ ವಿರೋಧಿ ಕಾರ್ಯಕ್ರಮಗಳೂ ಬದಲಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದರು

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಚಿವ, ಕಾರ್ಮಿಕ ಮುಖಂಡ ಹಾಗೂ ಹಿರಿಯ ಸಮಾಜವಾದಿ ಎಸ್.ಕೆ. ಕಾಂತಾ ಅವರು, ಇಂದು ರಾಜ್ಯದಲ್ಲಿ ಭ್ರಷ್ಟ ರಾಜಕಾರಣದ ಹಿಂದೆ ಜಾತಿ ರಾಜಕಾರಣದ ಕರಾಳ ಛಾಯೆಯಿದ್ದು, ಜಾತಿ ವ್ಯವಸ್ಥೆ ವಿರುದ್ಧ ಹೋರಾಡದ ಹೊರತು ರಾಜಕೀಯ ಸ್ವಚ್ಛೀಕರಣ ಸಾಧ್ಯವಾಗದು ಎಂದರು.

ನಂತರ ನಡೆದ 'ಜಾತಿ ವ್ಯವಸ್ಥೆ: ಏಕೆ ಬೇಡ?' ಗೋಷ್ಠೀಯಲ್ಲಿ ಡಿ.ಎಸ್.ನಾಗಭೂಷಣ, ಕೆ.ಪಿ.ನಟರಾಜ್, ಸ.ಉಷಾ ಮತ್ತು ಮಹೇಶ್ವ ಹರವೆ ಮಾತನಾಡಿ, ಜಾತಿ ಪದ್ಧತಿಯ ಹುಟ್ಟು, ಬೆಳವಣಿಗೆ, ಅದು ತಳೆದ ರೂಪಾಂತರಗಳು, ಅದರ ವಿರುದ್ಧ ಇತಿಹಾಸದುದ್ದಕ್ಕೂ ನಡೆದ ಆಂದೋಲನಗಳು ಮತ್ತು ಅದರ ಇತಿಮಿತಿಗಳ ಪರಿಚಯ ಮಾಡಿಕೊಟ್ಟರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ರಾಜೇಂದ್ರ ಚೆನ್ನಿಯವರು, ಇಂದು ಭಾರತದಲ್ಲಿ ಕಟ್ಟಲ್ಪಡುತ್ತಿರುವ ಫ್ಯಾಸಿಸ್ಟ್ ರಾಜಕಾರಣಕ್ಕೂ ಜಾತಿ ವ್ಯವಸ್ಥೆಗೂ ಇರುವ ಸಂಬಂಧವನ್ನು ವಿಶ್ಲೇಷಿಸುತ್ತಾ, ಭವಿಷ್ಯ ಭಾರತವನ್ನು ನಿರ್ಮಿಸುವ ವಿಶ್ವವಿದ್ಯಾಲಯಗಳಲ್ಲಿ ಇಂದು ಹೇಗೆ ಜಾತಿ ಕುರಿತ ಚರ್ಚೆಯನ್ನು ಶೈಕ್ಷಣಿಕ ನಿಯಮಾಔಳಿ ಮತ್ತು ಪಠ್ಯಕ್ರಮಗಳ ಮೂಲಕ ನಿಷೇಧಿಸಲಾಗುತ್ತಿದೆ ಎಂಬುದನ್ನು ವಿವರಿಸಿದರು.

ಮಧ್ಯಾಹ್ನ ಊಟದ ನಂತರ 'ಒಲವು–ಗೆಲುವು' ಎಂಬ ಅಂತರ್ಜಾತಿ ವಿವಾಹಿತರ ಅನುಭವ ಕಥನ ಗೋಷ್ಠಿಯಲ್ಲಿ ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹವಾದ ೧೩ ಜೋಡಿಗಳು ತಮ್ಮ ಪ್ರೇಮ, ವಿವಾಹ ಮತ್ತು ವಿವಾಹೋತ್ತರ ಬದುಕಿನ ಕಷ್ಟ–ಸುಖಗಳ ರೋಮಾಂಚನದ ಕ್ಷಣಗಳನ್ನು ಸ್ವಾರಸ್ಯಕರ ಶೈಲಿಗಳಲ್ಲಿ ನಿರೂಪಿಸುತ್ತಾ, ಸಭಿಕರಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಇಂದಿರಾ ಬಿ.ಕೃಷ್ಣಪ್ಪ ರಾಜ್ಯದಲ್ಲಿ ಜಾತಿ ವಿರೋಧಿ ಆಂದೋಲನ ದೀರ್ಘ ಪರಂಪರೆಯನ್ನು ನೆನೆಯುತ್ತಾ, ಇದರಿಂದಾಗಿಯೇ 'ಮಾಯಾದಾ ಹತ್ಯೆ'ಯಂತಹ ಹೀನ ಕೃತ್ಯಗಳು ಇಲ್ಲಿ ನಡೆಯಲಾರವು ಎಂದು ಅಭಿಪ್ರಾಯಪಟ್ಟರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಹಿರಿಯ ನ್ಯಾಯವಾದಿ ಹಾಗೂ ಸಮಾಜವಾದಿ ಪ್ರೊ. ರವಿವರ್ಮ ಕುಮಾರ್ ಅವರು, ಸತ್ಯ ಸಾಯಿಬಾಬಾ ಆಶ್ರಮದ ಹಣ–ಆಸ್ತಿಗಳಿಗ್ಕೆ ಸಂಬಂಧಿಸಿದಂತೆ ಬಹಿರಂಗವಾಗುತ್ತಿರುವ ವ್ಯವಹಾರಗಳ ಚುಂಗು ಹಿಡಿದು ಮಾತನಾಡುತ್ತಾ, ಇಂದು ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಒಂದು ದಂಧೆಯನ್ನಾಗಿ ಪರಿವರ್ತಿಸಿರುವ ಮಠಗಳೇ ಸ್ಥಳೀಯ ಸ್ವಿಸ್ ಬ್ಯಾಂಕುಗಳಂತೆ ಅಪಾರ ಕಪ್ಪು ಹಣದ ಕೇಂದ್ರಗಳಾಗಿದ್ದು, ಮೊದಲು ಅವುಗಳ ಆಸ್ತಿಯನ್ನು ಮುಟ್ಟುಗೋಳು ಹಾಕಿಕೊಂಡು ಅವನ್ನು ರಾಷ್ಟ್ರೀಕರಿಸಬೇಕೆಂದು ಕರೆಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ರೈತ ನಾಯಕ ಹಾಗೂ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣನವರು, ಆಣೆ–ಪ್ರಮಾಣದ ರಾಜಕಾರಣವು ಇಂದು ರಾಜಕಾರಣದ ಅವನತಿಯ ಯಾವ ಘಟ್ಟಕ್ಕೆ ಬಂದು ಮುಟ್ಟಿದೆ ಎಂಬುದರ ದ್ಯೋತಕವಾಗಿದೆ;ಇದರ ವಿರುದ್ಧ ಹೋರಾಡಲು ಈ ಸಮ್ಮೇಳನ ಸ್ಫೂರ್ತಿ ನೀಡಲಿ ಎಂದು ಹಾರೈಸಿದರು.

ಸಮ್ಮೇಳನದ ಸಂಘಟಕರಲ್ಲಿ ಒಬ್ಬರಾದ ಪ್ರೊ. ಎಂ.ಬಿ.ನಟರಾಜ್ ಜಾತಿರಹಿತ ಸಮಾಜ ನಿರ್ಮಾಣಕ್ಕೆ ಒತ್ತಾಸೆಯಾಗುವ ೧೦ ನಿರ್ಣಯಗಳನ್ನು ಮಂಡಿಸಿದರು. ಸಮ್ಮೇಳನ ಕರತಾಡನದ ಮೂಲಕ ಅವನ್ನು ಅಂಗೀಕರಿಸಿತು

. ಸಮ್ಮೇಳನದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ೩೫೦ಕ್ಕೂ ಹೆಚ್ಚು ಜನ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಲೋಹಿಯಾ ಪ್ರತಿಷ್ಠಾನದ ಪದಾಧಿಕಾರಿಗಳಲ್ಲದೆ ನಿಸಾರ್ ಅಹಮದ್, ಎಂ.ರಾಜು, ಮಂಜುಳಾ ಎಂ.ರಾಜು, ಮತ್ತಿತತರು ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದರು. *

(ವರದಿ: **ಸವಿತಾ ನಾಗಭೂಷಣ**)

# 'ಜಾತಿ ವಿರೋಧಿ ಸಮ್ಮೇಳನ"ದಲ್ಲಿ ಅಂಗೀಕರಿಸಿದ ನಿರ್ಣಯಗಳು

೧. ಜಾತಿ ರಹಿತ ಸಮಾಜ ನಿರ್ಮಾಣ ತನ್ನ ಮೂಲ ಉದ್ದೇಶಗಳಲ್ಲಿ ಒಂದು ಎಂದು ' ಸ್ಪಷ್ಟವಾಗಿ ಹಾಗೂ ಪ್ರತ್ಯೇಕವಾಗಿ ಘೋಷಣೆ ಆಗುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಲು ಈ ಸಮ್ಮೇಳನ ಜನ ಪ್ರತಿನಿಧಿಗಳಿಗೆ ಕರೆ ಕೊಡುತ್ತದೆ.

೨. ಒಂದೇ ಜಾತಿಯ ಪದಾಧಿಕಾರಿಗಳನ್ನು ಹೊಂದಿದ ಜಾತಿ ಆಧಾರಿತ ಸಂಘ ಸಂಸ್ಥೆಗಳಿಗೆ, ಸರ್ಕಾರದ ನೆರವು ಪಡೆಯಲು ಅವಕಾಶವಿರುವಂತಹ ಅಧಿಕೃತ ಮಾನ್ಯತೆ ಮತ್ತು ನೋಂದಣಿಯ ಸೌಲಭ್ಯವನ್ನು ಸರ್ಕಾರ ರದ್ದುಪಡಿಸಬೇಕು.

೩. ಅಸ್ಪೃಶ್ಯತೆ, ಜಾತಿ ನಿಂದನೆ ಮತ್ತು ಜಾತಿ ಬಹಿಷ್ಕಾರಗಳಂತಹ ಆಚರಣೆಗಳ ಬಗ್ಗೆ ಕ್ಷಿಪ್ರ ವಿಚಾರಣೆ ನಡೆಸಿ ಅಂತಹ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಮಾಡಿಕೊಡುವ ಕಾನೂನನ್ನು ರಚಿಸಬೇಕು.

೪. ರಾಜ್ಯದ ಜನಸಂಖ್ಯೆಯ ಶೇಕಡಾ ಅರ್ಧಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಜಾತಿ-ಬುಡಕಟ್ಟುಗಳ ಪಟ್ಟಿ ತಯಾರಿಸಿ, ಅವುಗಳಲ್ಲಿ ಸೂಕ್ತ ಸಾರ್ವಜನಿಕ ಪ್ರಾತಿನಿಧ್ಯವಿಲ್ಲದ ಜಾತಿ-ಬುಡಕಟ್ಟುಗಳಿಗೆ ವಿಶೇಷ ಪ್ರೋತ್ಸಾಹದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಈ ಸಮ್ಮೇಳನ ಕರೆ ಕೊಡುತ್ತದೆ.

೫. ಯಾವುದೇ ಜಾತಿ ಅಥವಾ ಬುಡಕಟ್ಟುಗಳ ಸಂಘಟನಾ ಸಮಾವೇಶಗಳಲ್ಲಿ ಸಚಿವರೂ ಸೇರಿದಂತೆ ಜನಪ್ರತಿನಿಧಿಗಳು ಮತ್ತು ಸರ್ಕಾರಿ ನೌಕರರು ಭಾಗವಹಿಸುವುದನ್ನು ಕಾನೂನಿನ ಮೂಲಕ ನಿಷೇಧಿಸಬೇಕು.

೬. ಜಾತಿ ಮತ್ತು ಮತ ಮೂಲವಾದ ಮಠ-ಮಂದಿರಗಳು ಮತ್ತು ಸಂಸ್ಥೆಗಳಿಗೆ ಸರ್ಕಾರ ಅನುದಾನ ಅಥವಾ ಯಾವುದೇ ರೀತಿಯ ಸಹಾಯ ನೀಡುವುದನ್ನು ಈ ಸಮ್ಮೇಳನ ಖಂಡಿಸುತ್ತದೆ ಹಾಗೂ ಇದನ್ನು ನಿಷೇಧಿಸಲು ಸೂಕ್ತ ಕಾನೂನನ್ನು ರಚಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ.

೭. ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹಗಳನ್ನು ಕಾನೂನಿನ ಪರಿಭಾಷೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿ, ಅಂತಹವುಗಳನ್ನು ಸಾಮಾಜಿಕ ಅಭಿವೃದ್ಧಿಯ ಕಾರ್ಯಕ್ರಮವೆಂದು ಪರಿಗಣಿಬೇಕು. ಹಾಗೂ ಅವುಗಳಿಗೆ ವಿಶೇಷ ಮಾನ್ಯತೆ ಮತ್ತು ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಬೇಕು.

೮. ಅಂತರ್ಜಾತಿ ಮತ್ತು ಅಂತರ್ಮತೀಯ ವಿವಾಹವಾದವರ ಮೇಲೆ ನಡೆಯಬಹುದಾದ ಎಲ್ಲ ರೀತಿಯ ಹಿಂಸೆ ಮತ್ತು ದೌರ್ಜನ್ಯಗಳನ್ನು ತಡೆಗಟ್ಟುವ ವಿಶೇಷ ಕಾಯಿದೆಯೊಂದನ್ನು ರಚಿಸಬೇಕು.

೯. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹಗಳನ್ನು ಸಾಮೂಹಿಕವಾಗಿ ಸಂಘಟಿಸಲು ಮುಂದೆ ಬರಬೇಕೆಂದು ಈ ಸಮ್ಮೇಳನ ಕರೆ ಕೊಡುತ್ತದೆ.

೧೦. ಸರ್ಕಾರಿ ಅರ್ಜಿ ನಮೂನೆಗಳಲ್ಲಿ ಜಾತಿ ಮತ್ತು ಮತದ ಕಾಲಂನಲ್ಲಿ ಇಚ್ಛೆಪಟ್ಟವರು ಜಾತಿ ರಹಿತ ಅಥವಾ ಜಾತಿ ಇಲ್ಲ ಮತ್ತು ಮತಾತೀತ ಅಥವಾ ಮತ ಇಲ್ಲ ಎಂದು ನಮೂದಿಸಲು ಅಧಿಕೃತವಾಗಿ ಅವಕಾಶ ಮಾಡಿಕೊಡುವ ಕಾನೂನೊಂದನ್ನು ಜಾರಿಗೆ ತರಬೇಕು. *

---

# 'ಒಲವು-ಗೆಲವು': ಅಂತರ್ಜಾತಿ ವಿವಾಹಿತರ ಅನುಭವ ಕಥನದಿಂದ ಆಯ್ದ ಭಾಗಗಳು...

**ಕೊ**ಂಕಣಿ ಜನಾಂಗಕ್ಕೆ ಸೇರಿದ ನಾನು ಒಕ್ಕಲಿಗ ಜನಾಂಗಕ್ಕೆ ಸೇರಿದ ಹುಡುಗನನ್ನು ಮದುವೆಯಾದಾಗ ನನ್ನ ಹಳ್ಳಿಯಲ್ಲಿ ಒಂದು ಬಾಂಬ್ ಬಿದ್ದ ಹಾಗಾಗಿತ್ತು. ನನ್ನ ಮೈದುನ ಬಂದೂಕು ಹಿಡಿದು ಓಡಾಡುತ್ತಿದ್ದ. ಆದರೆ ಇಂದು ನಮ್ಮ ಕುಟುಂಬ ಚೆನ್ನಾಗಿ ಬಾಳಿ ಬದುಕುತ್ತಿದೆ. ನಮ್ಮ ಮಕ್ಕಳು ಜಾತ್ಯತೀತವಾಗಿ ಬೆಳೆದು ವಿಶ್ವ ಮಾನವರಂತೆ ಬದುಕುತ್ತಿದ್ದಾರೆ... ಅದೇ ನನ್ನ ಬದುಕಿನ ದೊಡ್ಡ ಸಂತೋಷ. ಅಂತರ್ಜಾತಿ ಮದುವೆಗಳು ಬೇಗ ಕುಸಿದು ಬೀಳ್ತವೆ ಅಂತ ಹೇಳ್ತಾರೆ. ಹಾಗೇನಿಲ್ಲ. ಎಷ್ಟೊಂದು ಜನ ಇಲ್ಲಿ ಸೇರಿ ಸಂತೋಷ-ಸಂಭ್ರಮಪಡ್ತಿದ್ದೀವಿ! ಆದ್ರೆ ಒಂದು ಮಾತು: ಪರಸ್ಪರ ತಿಳುವಳಿಕೆಗೆ ಅವಕಾಶ ಮಾಡಿಕೊಳ್ಳದೆ ಮತ್ತು ಆರ್ಥಿಕ ಸದೃಢತೆ ಬಗ್ಗೆ ಯೋಚಿಸದೇ ಮದುವೆ ಆಗಬಾರದು.

**-ಶೈಲಾಕುಮಾರಿ, ಹುಂಚದಕಟ್ಟೆ**

**ನಾ**ನು ಸಂಪ್ರದಾಯಸ್ಥ ವಿಶ್ವಕರ್ಮ ಕುಟುಂಬದಿಂದ ಬಂದವನು. ಆದರೆ ಕುವೆಂಪು ವಿಚಾರಗಳಿಗೆ ಒಲಿದವನು. ನಮ್ಮ ಮೇಷ್ಟ್ರು ಶ್ರೀಕಂಠ ಕೂಡಿಗೆಯವರು ಪಾಠಗಳ ಜೊತೆ ಹೇಳುತ್ತಿದ್ದ ಬಂಡಾಯದ ಆದರ್ಶಗಳಿಂದ ಪ್ರೇರಿತನಾಗಿ ನಾನು ಅಂತರ್ಜಾತಿಯಷ್ಟೇ ಅಲ್ಲ, ಲಿಂಗಾಯ್ತ ಜಾತಿಗೆ ಸೇರಿದ ವಿಧವೆಯನ್ನು ಮದುವೆ ಆದೆ. ಇದರಿಂದ ನನ್ನ ಮನೆಯಲ್ಲಿ ಕೆಲವು ಕಿರಿಕಿರಿಗಳಾದವು. ಆದರೆ ಈಗ ಎಲ್ಲವನ್ನೂ ಸುಧಾರಿಸಿಕೊಂಡು ಸಂತೋಷದ ಬದುಕು ನಡೆಸುತ್ತಿರುವೆವು.

**-ಡಾ.ಬಿ.ಜಿ. ಚನ್ನೇಶ್, ಹೊನ್ನಾಳಿ**

**ಕು**ಂಚಿಟಿಗ ಜಾತಿಗೆ ಸೇರಿದ ನಾನು ದಲಿತರ ಹುಡುಗನನ್ನು ಮದುವೆಯಾಗಿ ಕಷ್ಟ ಸುಖ ಎರಡನ್ನೂ ಅನುಭವಿಸಿದ್ದೀನಿ. ನನಗೆ ಮೊದಲ ಮಗುವಾದ ಮೇಲೂ ನನ್ನ ಗಂಡನ ಕಡೆಯವರು ಅವರಿಗೆ ಎರಡನೇ ಮದುವೆ ಮಾಡುವ ಮಾತನ್ನಾಡುತ್ತಿದ್ದರು! ನನ್ನಪ್ಪ ೧೮ವರ್ಷಗಳ ನಂತರ ನನ್ನ ಮನೆಗೆ ಬಂದರು... ಇದನ್ನೆಲ್ಲ ನಾನು ಸಹಿಸಿ ಗೆದ್ದಿರುವುದೇ ನನಗೊಂದು ಸಂತೋಷ ಮತ್ತು ಹೆಮ್ಮೆ. ಅದಕ್ಕೆ ನನ್ನ ಗಂಡ, ಮಕ್ಕಳ ಪ್ರೀತಿ ಮತ್ತು ನಮ್ಮ ಸ್ನೇಹಿತರ ಬೆಂಬಲ ಕಾರಣ. ನಾನು ಮೊದಲು ಗರ್ಭಿಣಿಯಾದಾಗ ನಮ್ಮೆಲ್ಲ ಸ್ನೇಹಿತರೂ ಜಾತಿ ಬೇಧವಿಲ್ಲದೆ ಸೇರಿ ನನ್ನ 'ಶ್ರೀಮಂತ' ಮಾಡಿದರು ಇದಕ್ಕಿಂತ ಸಂತೋಷ ಇನ್ನಾವುದಿದೆ?

**-ಮಲ್ಲಿಕಾ ಡಾ.ಬಸವರಾಜು, ತುಮಕೂರು**

**ಚಿ**ಕ್ಕಂದಿನಿಂದಲೇ ನಾನು ಸ್ವಾಭಾವಿಕವಾಗಿ ಬದುಕಬೇಕು ಎನ್ನುವ ಸಂಕಲ್ಪ ಮಾಡಿದವನು. ಎಲ್ಲ ರೀತಿಯ ಅಸ್ವಾಭಾವಿಕತೆಯನ್ನೂ ವಿರೋಧಿಸುತ್ತಾ ಉಲ್ಲಂಘಿಸುತ್ತಾ ಬಂದವನು. ಮದುವೆಯೂ ಈ ಉಲ್ಲಂಘನೆಯ ಒಂದು ಭಾಗವೇ. ಹಂದಿ ಜೋಗಿ ಜಾತಿಯಲ್ಲಿ ಹುಟ್ಟಿದ ನಾನು ಮಾದಿಗರ ಹುಡುಗಿಯನ್ನು ಮದುವೆಯಾಗಿ ಬೌದ್ಧ ಧರ್ಮವನ್ನು ಒಪ್ಪಿಕೊಂಡು ಬದುಕು ನಡೆಸುತ್ತಿರುವೆ. ನಾನು ಆರಿಸಿಕೊಂಡಿರುವ ಬದುಕಿನ ಮಾದರಿ ಬಗ್ಗೆ ನನಗೆ ಹೆಮ್ಮೆಯಿದೆ. ನಿಜ, ನಮ್ಮಂತಹವರ ಮುಂದೆ ಕೆಲವು ಪ್ರಶ್ನೆಗಳಿವೆ. ಅವನ್ನು ಎದುರಿಸುವ ವಿಶ್ವಾಸ ನನಗಿದೆ.

**-ಡಾ. ಆರ್.ಬಿ.ರಂಗಸ್ವಾಮಿ, ತುಮಕೂರು**

**ನಾ**ನು ಸುಮಾರು ಮುವ್ವತ್ತೈದು ವರ್ಷಗಳ ಹಿಂದೆ ಸಮಾಜವಾದಿ ಚಳುವಳಿ, ಸಿದ್ಧಾಂತಗಳಿಂದ ಪ್ರಭಾವಿತಳಾಗಿ ಅಂತಹ ಹೋರಾಟಗಳಲ್ಲಿ ತೊಡಗಿದ್ದ ನಿಸಾರ್ ಅಹಮದ್‌ರನ್ನು ಇಷ್ಟಪಟ್ಟು ಮದುವೆ ಆದವಳು. ಅದು ತೇಜಸ್ವಿ, ಎಂಡಿಎನ್, ಎಸ್.ಡಿ.ಸುಂದರೇಶ್, ಕಡಿದಾಳು ಶಾಮಣ್ಣ ಇತ್ಯಾದಿ ಹಿರಿಯ ಸಮಾಜವಾದಿಗಳ ಸಮ್ಮುಖದಲ್ಲಿ ನಡೆದ ಸರಳ ಮಂತ್ರ ಮಾಂಗಲ್ಯ ವಿವಾಹ. ಅದರಲ್ಲಿ ನಾವು ಯಾವ ಜಾತಿ-

ಧರ್ಮಗಳ ಸಂಕೋಲೆಗಳಿಲ್ಲದೆ ಬದುಕ್ತೀವಿ ಅಂತ ಪ್ರತಿಜ್ಞೆ ಮಾಡಿದೆವು. ಹಾಗೇ ಈಗಲೂ ಬದುಕ್ತಾ ಇದೀವಿ. ಈ ಆದರ್ಶದ ಬದುಕೇ ನಮಗೊಂದು ಸಂತೋಷ ತಂದುಕೊಟ್ಟಿದೆ. ಒಂದೇ ಬೇಸರವೆಂದರೆ, ಈ ಕಾಲದ ಯುವಜನ ಸಾಹಿತ್ಯ ಓದುವುದನ್ನು ನಿಲ್ಲಿಸಿ, ಆದರ್ಶಗಳನ್ನು ಕೈಬಿಟ್ಟಿರುವುದು.

**–ಮನೋರಮಾ ನಿಸಾರ್ ಅಹಮದ್,ಶಿವಮೊಗ್ಗ**

**ನ**ಮ್ಮೂರಲ್ಲಿ ಶ್ರೀನಿವಾಸ ಕುಮಾರ್ ಅನ್ನೋರು ನಮ್ಮನ್ನೆಲ್ಲ ಸೇರಿಸ್ಕೊಂಡು ಸಮಾಜವಾದಿ ಅಧ್ಯಯನ ಕೇಂದ್ರ ಶುರು ಮಾಡಿ ವಿಚಾರಕ್ಕೆ ಹಚ್ದಾಗ ನಾನು ಬೇರೆ ಜಾತೀಲಿ ಮದುವೆ ಆಗಿ ಈ ಜಾತಿಗೀತಿನೆಲ್ಲ ಒಂದೇ ಸಲಕ್ಕೆ ಯಾಕೆ ಕಿತ್ತಾಂಕಬಾರ್ದು ಅನ್ನಿಸಿ ಕಾಯ್ತಾ ಇದ್ದೆ. ಸಾಹಿತ್ಯ ನನ್ನ ನೆರವಿಗೆ ಬಂತು. ಆಕಾಶವಾಣೀಲಿ ಕಥೆ ಓದಿದ್ದು, ನಮ್ಮ ಅಧ್ಯಯನ ಕೇಂದ್ರದ ವೇದಿಕೆಯಿಂದ ಕುವೆಂಪು ಬಗ್ಗೆ ಮಾತನಾಡಿದ್ದು, ಲಿಂಗಾಯ್ತರ ಹುಡುಗಿಯೊಬ್ಬಳಲ್ಲಿ ಕುತೂಹಲ ಮತ್ತು ಪ್ರೇಮ ಹುಟ್ಟಿಸ್ತು. ಸ್ನೇಹಿತರ ಸಹಾಯದಿಂದ ಹೇಗೋ ಅವಳ ಅಪ್ಪ ಅಮ್ಮನ ಕಣ್ಣು ತಪ್ಪಿ ಮದುವೆ ಆದ್ವಿ. ಆದರೆ ನಾನು ಕುರುಬನಾದ್ರಿಂದ ಊರಲ್ಲಿ ಗಲಾಟೆ ಆಗಿ ಮನೆಗಳಿಗೆ ಬೆಂಕಿ ಹಚ್ಚೋವರ್ಗೆ ಪರಿಸ್ಥಿತಿ ಕೈಮೀರಿ ಹೋಗಿ, ಮೀಸಲು ಪೋಲೀಸ್ ಬರಬೇಕಾಯ್ತು. ಆದರೆ ನಾವು ಬೆಂಗಳೂರಿಗೆ ಬಂದು ಐದು ವರ್ಷ ಚೆನ್ನಾಗಿ ಬದುಕಿ ಬಾಳಿ ತೋರಿಸಿದ ನಂತರ ಎಲ್ಲಾ ಈಗ ಸರಿ ಹೋಗಿದೆ. ನಮ್ಮ ಮದುವೆಯನ್ನ ಕಟುವಾಗಿ ವಿರೋಧಿಸಿದ್ದ ನಮ್ಮತ್ತೆಗೆ ಈಗ ನಮ್ಮ ಮದುವೆಯನ್ನು ಈಗಲೂ ವಿರೋಧಿಸುತ್ತಿರುವ ತಮ್ಮ ನೆಂಟರಿಗೆ ನನಗೆ ನನ್ನ ಮಗಳು–ಅಳಿಯ ಮುಖ್ಯ, ನಿಮ್ಮ ಜಾತಿ ಅಲ್ಲ ಅಂತ ಹೇಳುವ ಧೈರ್ಯ ಬಂದಿದೆ. 'ಸಂಬಂಜ ಅನ್ನೋದು ದೊಡ್ಡದು ಕನಾ!' ಅನ್ನೋ ದೇವನೂರರ ಮಾತು ನಮ್ಮ ಬಾಳಿನಲ್ಲಿ ನಿಜ ಆಗಿದೆ.

**–ಆರ್.ರವಿಚಂದ್ರನ್, ಚಾಮರಾಜನಗರ**

**ನಾ**ನು ಬಂಟರ ಹುಡುಗಿ. ಬ್ರಾಹ್ಮಣ ಹುಡುಗನನ್ನು ಮದುವೆಯಾದೆ. ಆಶ್ಚರ್ಯ ಅಂದ್ರೆ ಈ ಮದುವೆಗೆ ವಿದ್ಯೆ ಅಷ್ಟೇನೂ ಇಲ್ಲದ ನನ್ನ ತಂದೆ ತಾಯಿಗಳಿಂದಾಗಲೀ ಅಥವಾಅವರ ತಾಯಿಯಿಂದಾಗಲೀ ಬರಲಿಲ್ಲ. ಬಂದದ್ದು ವಿದ್ಯಾವಂತನಾದ ನನ್ನ ಭಾವನಿಂದ! ಆತ. ನಾನು ಒಂಬತ್ತು ತಿಂಗಳು ಗರ್ಭಿಣಿಯಾಗಿ ನನ್ನ ತಾಯಿಯ ಮನೆಯಲ್ಲದ್ದಾಗ, ನನ್ನನ್ನು ಹೊರ ಕಳಿಸಿದರೆ ಮಾತ್ರ ಒಳಗೆ ಬರುವೆನೆಂದು ನನ್ನ ತಾಯಿಗೆ ಹೇಳಿದ ಭೂಪ! ಇನ್ನು ಅಂತರ್ಜಾತಿ ವಿವಾಹವಾದ ನನ್ನ ದಲಿತ ಪ್ರಾಧ್ಯಾಪಕರೊಬ್ಬರು ನಾನು ನನ್ನ ಹೆಸರಿನ ಜೊತೆ ಗಂಡನ ಹೆಸರು ಹಾಕಿಕೊಳ್ಳದಿರುವುದನ್ನು ಟೀಕಿಸಿ, ಅದಕ್ಕೆ ಸ್ತ್ರೀವಾದವೇ ಕಾರಣ ಎಂದು ದೂರುತ್ತಾರೆ! ಈಗ ಹೇಳಿ ಇದು ಎಂತಹ ವಿದ್ಯೆ, ಎಂತಹ ಅರಿವು?

**–ಡಾ.ಸಬಿತಾ ಬನ್ನಾಡಿ, ಭದ್ರಾವತಿ**

**ನಾ**ನು ಮದುವೆ ಆಗಬಾರದು; ಆಗುವುದಿದ್ದರೆ ಒಬ್ಬ ವಿಧವೆಯನ್ನೋ ಅಥವಾ ಕಟ್ಟ ಕಡೆಯ ಜಾತಿಗೆ ಸೇರಿದ ಹುಡುಗಿಯನ್ನೋ ಮದುವೆ ಆಗಬೇಕೆಂದಿದ್ದೆ. ಇದು ನಮ್ಮ ತಂದೆಗೂ ತಿಳಿದು ಇವನು ಹೇಗೂ ಕೈತಪ್ಪಿಹೋದವನು ಎಂದು ನನ್ನ ಚಿಂತೆ ಬಿಟ್ಟಿದ್ದರು.ದಿತ್ತು. ನಾನು ತುಮಕೂರಿನ ಎಚ್‌ಎಂಟಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ, ನನ್ನ ಸ್ನೇಹಿತನ ಕೊಠಡಿಯಲ್ಲಿ ವಾಸ ಮಾಡುತ್ತಿದ್ದಾಗ, ಎದುರು ಮನೆಯ ಹುಡುಗಿಯನ್ನು ಇಷ್ಟಪಟ್ಟೆ. ಅವಳು ಮೇಲ್ಜಾತಿಯ ಹುಡುಗಿಯಾದರೂ ಅಪ್ಪ ಅಮ್ಮ ಇಲ್ಲದವಳೆಂದು ತಿಳಿದು ಮದುವೆಯಾಗಲು ನಿಶ್ಚಯಿಸಿದೆ. ದೇವಸ್ಥಾನದಲ್ಲಿ ಮದುವೆಯಾಯಿತು. ಯಾರೂ ಅಡ್ಡಿ ಬರಲಿಲ್ಲ ಈಗ ನಾವು ಸುಖವಾಗಿದ್ದೇವೆ.

**–ನಾಗಾರ್ಜುನ, ಸಾಗ್ಗೆರೆ**

**ಇ**ವೊತ್ತಿಗ್ತೆ ನಮ್ಮ ತಂದೆ ಕೆ.ರಾಮದಾಸ್ ನಮ್ಮನ್ನಗಲಿ ನಾಲ್ಕು ವರ್ಷವಾಗ್ತಾ ಇದೆ. ಈ ಸಂದರ್ಭದಲ್ಲಿ ಇಂತಹ ಸಮ್ಮೇಳನ ನಡೆತಿರೋದು ಮತ್ತು ಈ ಗೋಷ್ಠಿಯಲ್ಲಿ ನಾನು ಭಾಗವಹಿಸ್ತಾ ಇರೋದು ಅವರ ನೆನಪಿಗೆ ಸಲ್ಲುವ ನಿಜವಾದ ಶ್ರದ್ಧಾಂಜಲಿ ಅಂತ ನಾನು ಭಾವಿಸ್ತೇನೆ. ನನ್ನನ್ನ ನಮ್ಮ ತಂದೆ ಜಾತ್ಯತೀತ ವಾತಾವರಣದಲ್ಲೇ ಬೆಳೆಸಿದ್ದರಿಂದ, ನನಗೆ ಕಾಲೇಜು ಸೇರುವವರಿಗೆ ಜಾತಿ ಅನ್ನೋದು ನಮ್ಮ ಸಮಾಜದಲ್ಲಿ ಇಷ್ಟು ಸಂಕೀರ್ಣವಾಗಿ ಕೆಲಸ ಮಾಡಿ ಸಮಸ್ಯೆಗಳನ್ನು ಉಂಟು ಮಾಡುತ್ತೆ ಅನ್ನುವ ಅನುಭವವೇ ಆಗಿರಲಿಲ್ಲ. ಮದುವೆ ಮಾಡಿಕೊಳ್ಳಬೇಕಾದಾಗಲೂ ಕೂಡಾ ಜಾತಿ ಸಮಸ್ಯೆಯಾಗಲಿಲ್ಲ. ಸಮಸ್ಯೆ ಆಗಿದ್ದು ಅಂದ್ರೆ ನಮ್ಮ ತಂದೆಯ ಉಗ್ರ ಕೋಪಿಷ್ಠತನವನ್ನ ಎದುರಿಸುವಂತಹ ಹುಡುಗ ಸಿಕ್ತಾನಾ ಅನ್ನೋದು! ಅಂತಹ ಓಂಕಾರ್ ಸಿಕ್ರು. ಮದುವೆಯಾದೆ. ಈಗ ನಮ್ಮ ಮುಂದಿರುವ ನಿಜವಾದ ಸವಾಲು ಅಂದ್ರೆ, ಜಾತಿವಾದ ಉಲ್ಬಣಗೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ ನನ್ನ ಮಗಳನ್ನ ನಮ್ಮ ತಂದೆ ನನ್ನನ್ನ ಬೆಳೆಸಿದ ಹಾಗೆ ಹೇಗೆ ಜಾತ್ಯಾತೀತವಾಗಿ ಬೆಳೆಸುವುದು ಅನ್ನುವುದು. ಈ ಸಮ್ಮೇಳನ ಈ ದಿಶೆಯಲ್ಲಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಹಾಗೇ ನಿಮ್ಮೆಲ್ಲರ ಸಹಕಾರದಿಂದ ಇದರಲ್ಲಿ ಯಶಸ್ವಿಯಾಗುವೆ ಎಂಬ ನಂಬಿಕೆ ಹುಟ್ಟಿದೆ.

**–ಸ್ನೇಹಾ ಓಂಕಾರ್, ಮೈಸೂರು**

**ನಾ**ನು ಮತ್ತು ಭಾರತಿ ಒಂದು ಸಮಾರಂಭದಲ್ಲಿ ಭೇಟಿಯಾಗಿ ಮನಸ್ಸಿಗೆ ಮನಸ್ಸು ಕೊಟ್ವಿ. ಅಂದೇ ನಾವು ಗಂಡ ಹೆಂಡತಿ ಅಂದುಕೊಂಡ್ವಿ. ಆಗ ಪ್ರಕಟವಾದ ನನ್ನ ಕವನ ಸಂಕಲನದಲ್ಲಿ ಅದರ ಹಕ್ಕುಗಳನ್ನು ಅವಳ ಹೆಸರಲ್ಲಿ ನಮೂದಿಸಿದಾಗ, ನನ್ನ ಕವನಗಳಿಗಿಂತ ಹೆಚ್ಚಾಗಿ ಇದರ ಬಗ್ಗೆಯೇ ಚರ್ಚೆಯಾಗಿ, ನನ್ನ ಎಡಪಂಥೀಯ ಮತ್ತು ಸಾಹಿತಿ ಗೆಳೆಯರು ನನ್ನನ್ನು ದೂರ ಮಾಡಿದರು. ಕಾರಣ, ಇವರ ಅರ್ಥದಲ್ಲಿ ನಾನು ಮದುವೆ ಆಗಿಲ್ಲ ಅಂಬೂದು! ಜೊತೆಗೆ ಮನೆ ಕಡೆಯವರಿಂದ ಅಗಸರು–ಹೊಲೆಯರು ಅಣ್ಣ ತಮ್ಮಂದಿರಾದ್ದರಿಂದ ಮದುವೆ ಆಗಂಗಿಲ್ಲ ಎನ್ನುವ ಸಾಂಪ್ರದಾಯಿಕ ನಂಬಿಕೆಯ ಅಡ್ಡಿ. ಇದನ್ನೆಲ್ಲ ಪರಿಹರಿಸಿಕೊಳ್ಳಲು ನಾವು 'ಮಾನವ ಮಂಟಪ'ದವರ ಬಳಿ ಹೋಗಿ ಮದುವೆ ಆದ್ವಿ. ಆದರೂ ಎರಡೂ ಕಡೆಯ ಜಾತ್ಯಸ್ಥರು ಮತ್ತು ಪ್ರಗತಿಪರ ಗೆಳೆಯರು ನಮ್ಮ ಬೆನ್ನು ಬಿಡಲಿಲ್ಲ;ಬಿಟ್ಟಿಲ್ಲ! ಅದಕ್ಕೆ ಕಾರಣ, ಪ್ರಗತಿಪರ ಲೇಖಕಿ ಎಂದು ಹೇಳಿಕೊಳ್ಳುವ ನನ್ನ ಹೆಂಡತಿಯ ಅಕ್ಕ ಎಂದರೆ ನಿಮಗೆ ಆಶ್ಚರ್ಯವಾಗಬಹುದು! ಜಾತಿ ಲೆಕ್ಕಿಸದೆ ಪ್ರೀತಿಸಿ ಮದುವೆ ಆಗುವವರಿಗೆ ಅವರಿಗೆ ನೈತಿಕ ಬೆಂಬಲದ ನಾಲ್ಕು ಮಾತು ಆಡಿ ಸ್ಥೈರ್ಯ ತುಂಬಲ್ಲ ಒಂದು ಬಳಗ ರೂಪುಗೊಳ್ಳದಿದ್ದರೆ, ನಮ್ಮ ಜಿಲ್ಲೆಯಲ್ಲಿ ಗೋಕಾಕ್ ಜಲಪಾತಕ್ಕೆ ಬಿದ್ದು ಸಾಯುವ ಮುಗ್ಧ ಜೋಡಿಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ಇಲ್ಲಿ ತಿಳಿಸಬಯಸುವೆ.

**–ವೀರಣ್ಣ ಮಡಿವಾಳರ, ಕೇರೂರು, ಚಿಕ್ಕೋಡಿ**

**ಮ**ಂಡ್ಯ ಜಿಲ್ಲೆಯ ಗೌಡರಿಗೆ ಶ ಸ ಷ ವ್ಯತ್ಯಾಸ ಗೊತ್ತಿಲ್ಲ, ಪ್ರೇಮ, ಪ್ರೀತಿ ಬೆಲೆ ತಿಳಿದಿಲ್ಲ, ಪ್ರೇಮಿಸಿವದವರ ಕಣ್ಣು ಕಿತ್ತಾಕ್ತಾರೆ ಅನ್ನುವ ಪ್ರಚಲಿತ ಅಭಿಪ್ರಾಯ ಸುಳ್ಳು ಅನ್ನೋದಕ್ಕೆ ನಾನೇ ಉದಾಹರಣೆ. ನನಗೆ ಸರಿಯಾಗಿ ಕೆಲಸವಿಲ್ಲದಾಗ, ನನ್ನ ಕಪ್ಪು ಬಣ್ಣದ ಬಗ್ಗೆ ಕೀಳರಿಮೆ ಇದ್ದಾಗ ಕೆಲಸದಲ್ಲಿದ್ದ ಹಾವೇರಿ ಕಡೆಯ ತಳವಾರ ಜಾತಿಯ ಬಿಳಿ ಹುಡುಗಿಯನ್ನು ಅಳುಕಿನಿಂದಲೇ ಪ್ರೇಮಿಸಿದೆ. ಅವಳೂ ಬಣ್ಣ ಲೆಕ್ಕಿಸದೆ ಒಪ್ಪಿದಳು! ಕೆಲಸ ಸಿಕ್ಕ ಮೇಲೆ ಎರಡೂ ಕಡೆಯ ಹಿರಿಯರಿಗೆ ತಿಳಿಸಿ ಮದುವೆಯಾದೆ. ಒಂದೇ ಬೇಜಾರೆಂದರೆ ನನ್ನ ಮದುವೆಗೆ ಈ ಹಿರಿಯರು ಮುಕ್ತ ಮನಸ್ಸಿನಿಂದ ಒಪ್ಪಿದರೆ, ವಿರೋಧ, ಅಸಮಾಧಾನ ಎದುರಾದದ್ದು ಕಿರಿಯ ವಯಸ್ಸಿನ ವಿದ್ಯಾವಂತರಿಂದ. ಶಿಕ್ಷಣ ಸಚಿವರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಹೊರಟ ಮತ್ತು ಅರಣ್ಯ ಸಚಿವರು ಮರ ಕಡಿಯುವವರ ಪರ ಮಾತನಾಡತೊಡಗಿರುವ ಈ ಕಾಲದಲ್ಲಿ ಇನ್ನೇನು ಆಗಲು ಸಾಧ್ಯ?

**–ರೋಹಿತ್, ಮಡಿಕೇರಿ** *

# ಸಾಮಾಜಿಕ ನ್ಯಾಯ ರಾಜಕಾರಣ ದಾರಿ ತಪ್ಪಿದೆ: ಯೋಗೇಂದ್ರ ಯಾದವ್

'ಜಾತಿ ವಿರೋಧಿ' ಸಮ್ಮೇಳನದಲ್ಲಿ ಯೋಗೇಂದ್ರ ಯಾದವ್ ಮಾಡಿದ ಭಾಷಣದ ಕನ್ನಡ ಅವತರಣಿಕೆ

**ಈ ಸಾಮಾಜಿಕ ನ್ಯಾಯ ನೀತಿ ಮತ್ತು ರಾಜಕಾರಣದ ಸದ್ಯದ ಲಕ್ಷಣಗಳನ್ನು ನೋಡಿ. ಅದು ಇತರೆಲ್ಲ ಆಯಾಮಗಳನ್ನೂ ಕಳೆದುಕೊಂಡು ಮೀಸಲಾತಿ ಕುರಿತ ಮಂಡಲ್‌ವಾದವೇ ಆಗಿಹೋಗಿಬಿಟ್ಟಿದೆ. ಅಂದರೆ ಅದರ ಬೆಂಬಲಿಗರು ಮತ್ತು ವಿರೋಧಿಗಳಿಬ್ಬರೂ, ಈವರೆಗೇನೂ ಆಗಿಯೇ ಇಲ್ಲವೆಂಬಂತೆ ಇಪ್ಪತ್ತು ಮುವ್ವತ್ತು ವರ್ಷಗಳ ಹಿಂದೆ ಆಡುತ್ತಿದ್ದ ಮಾತುಗಳನ್ನೇ ಈಗಲೂ ಆಡುತ್ತಿದ್ದಾರೆ. ಹಾಗೆ ನೋಡಿದರೆ, ಮಂಡಲ್ ವಿರೋಧಿಗಳಿಗೆ ಹೊಸ ಭಾಷೆ ಸಿಕ್ಕಿಬಿಟ್ಟಿದೆ. ಅವರು ಈಗ ಸಮಾನತೆಯ ಮಾತನಾಡಲು ತೊಡಗಿದ್ದಾರೆ! 'ಸಮಾನತಾ ವೇದಿಕೆ' ಎಂಬುದೊಂದನ್ನು ರಚಿಸಿಕೊಂಡಿದ್ದಾರೆ. ಆ ಮೂಲಕ ಅವರು ಜನಬೆಂಬಲ ಸಂಘಟಿಸಿಕೊಂಡು ಆಕ್ರಾಮಕ ನೀತಿಯನ್ನು ಅಳವಡಿಸಿಕೊಂಡಿದ್ದಾರೆ ಈ ಮಂಡಲ್‌ವಾದಿಗಳನ್ನು ನೋಡಿ, ಅವರು ಹೇಗೆ ರಕ್ಷಣಾತ್ಮಕ'ವಾಗಿ ವಾದಿಸುವ ದುಸ್ಥಿತಿಗೆ ಈಡಾಗಿಬಿಟ್ಟಿದ್ದಾರೆ!**

**ಈ** ಜಾತಿ ವಿರೋಧಿ ಸಮ್ಮೇಳನದ ಅಧ್ಯಕ್ಷತೆ ಹಿಸಿರುವ ಕಾಂತಾ ಅವರೇ, ಇದನ್ನು ಉದ್ಘಾಟಿಸಿದ ರಾಜೇಶ್ವರಿ ತೇಜಸ್ವಿಯವರೇ, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷರಾದ ನಾಗಭೂಷಣ್ ಅವರೇ,

ಈ ಸಮ್ಮೇಳನಕ್ಕೆ ಅನಿರೀಕ್ಷಿತವಾಗಿ ಬಂದ ನನಗೆ ತುಂಬಾ ಸಂತೋಷವಾಗಿದೆ. ಇದಕ್ಕೆ ಒಂದು ಕಾರಣ ಎಂದರೆ, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ಲೋಹಿಯಾ ಹೆಸರಿನ ಪಠಣ ನಡೆಯದೆ, ಲೋಹಿಯಾ ಹೇಳಿದ ಕೆಲಸ ನಡೆದಿದೆ ಎಂಬುದು. ಇದಕ್ಕಾಗಿ ನಿಮಗೆ ಮೊದಲ ಅಭಿನಂದನೆಗಳು ಇನ್ನೊಂದು ಕಾರಣವೆಂದರೆ, ಜಾತಿ ವಿನಾಶ ಅಥವಾ ಜಾತಿ ವಿರೋಧದ ಮಾತೇ ಈಗ ಎಲ್ಲೂ ಕೇಳಿ ಬರುತ್ತಿಲ್ಲ. ಈ ತರಹದ ಕಾರ್ಯಕ್ರಮಗಳು ಇಪ್ಪತ್ತು ವರ್ಷಗಳ ಹಿಂದೆ ನಡೆಯುತ್ತಿದ್ದವು. ತಮಿಳ್ನಾಡಲ್ಲಿ ನಡೆಯುತ್ತಿತ್ತು. ಉತ್ತರ ಭಾರತದಲ್ಲಿ ಅಲ್ಲಲ್ಲಿ ನಡೆಯುತ್ತಿತ್ತು. ಈಗ ಅಲ್ಲಿ ಅದರ ಸುಳಿವಿಲ್ಲ. ಇಂತಹ ಸಂದರ್ಭದಲ್ಲಿ ನೀವು ಈ ಮಹಾನ್ ಪರಂಪರೆಯನ್ನು ಜೀವಂತವಾಗಿ ಇಟ್ಟಿದ್ದೀರಿ. ಅದಕ್ಕಾಗಿ ನಿಮಗೆ ದೊಡ್ಡ ಸಲಾಂ ಹೇಳಲೇಬೇಕು.

ಶಿವಮೊಗ್ಗಕ್ಕೆ ನಾನು ಬರುತ್ತಿರುವುದು ಇದೇ ಮೊದಲ ಸಲ. ಶಿವಮೊಗ್ಗದ ಬಗ್ಗೆ ನಾನು ಅಲ್ಪ ಸ್ವಲ್ಪ ತಿಳಿದಿದ್ದೆ. ಇದು ಗೋಪಾಲ ಗೌಡರ ಕರ್ಮಭೂಮಿ, ಕರ್ನಾಟಕದ ಸಮಾಜವಾದಿ ಆಂದೋಲನದ ತವರು ಎಂದು ಕೇಳಿದ್ದೆ. ಅನಂತಮೂರ್ತಿಯವರ ಕಾದಂಬರಿಗಳನ್ನು ಓದಿ ನಾನು ಶಿವಮೊಗ್ಗ ಜಿಲ್ಲೆ ಬಗ್ಗೆ ಕುತೂಹಲ ತಾಳಿದ್ದೆ. ಈ ಜಿಲ್ಲೆಯಲ್ಲಿ ಸಮಾಜವಾದಿ ರಾಜಕೀಯ ಚೇತನವೊಂದು ಇನ್ನೂ ಜೀವಂತವಾಗಿದೆ ಎಂದು ಗೆಳೆಯ ರಾಜಾರಾಂ ತೋಳ್ಪಾಡಿ ನನಗೆ ಹೇಳುತ್ತಿದ್ದರು. ಇಂತಹ ಜಿಲ್ಲೆಗೆ ಬಂದು ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ನಿಮಗೆಲ್ಲ ನನ್ನ ಧನ್ಯವಾದಗಳು.

ಈ ಸಮ್ಮೇಳನಕ್ಕೆ ನನ್ನನ್ನು ಯಾಕೆ ಮುಖ್ಯ ಅತಿಥಿಯನ್ನಾಗಿ ಕರೆಯಲಾಗಿದೆ ಎಂಬುದು ನನಗೆ ಗೊತ್ತಿಲ್ಲ! ಅಂತಹ ಯಾವ ವಿಶೇಷ ಅರ್ಹತೆಯೂ ನನಗಿಲ್ಲ. ನಿಮ್ಮಲ್ಲಿ ಬಹಳ ಜನರಂತೆ ನಾನೂ ಅಂತರ್ಜಾತಿ ವಿವಾಹವಾದವನು, ನಿಜ. ಆದರೆ ಅದೇ ಅರ್ಹತೆಯಾಗಿದ್ದಲ್ಲಿ, ನಿಮ್ಮಲ್ಲಿ ಬಹಳ ಜನ ನನ್ನ ಈ ಜಾಗದಲ್ಲಿ ಕೂರಬೇಕಿತ್ತು! ಇರಲಿ, ಈ ಅವಕಾಶವನ್ನು ನಾನು ಬಳಸಿಕೊಂಡು ಇಂದು ನಾನು ಕೆಲವು ದೊಡ್ಡ ವಿಷಯಗಳ ಬಗ್ಗೆ ನನ್ನ ಸಣ್ಣ ಪುಟ್ಟ ವಿಚಾರಗಳನ್ನು ಮಂಡಿಸ ಬಯಸುವೆ. ನಿಜ, ಇಂತಹ ಸಂದರ್ಭಗಳಲ್ಲಿ ಜಾತಿ ವ್ಯವಸ್ಥೆ ಎಷ್ಟು ಕೆಟ್ಟದು, ಏಕೆ ಮತ್ತು ಹೇಗೆ ಅದನ್ನು ವಿರೋಧಿಸಬೇಕು ಎಂದು ಮಾತಾಡಬಲ್ಲವರು ಸಾಕಷ್ಟು ಜನರಿದ್ದಾರೆ. ಆದರೆ ಇಂದು ಜಾತಿ ವಿರೋಧಿ ಆಂದೋಲನ ಎದುರಿಸುತ್ತಿರುವ ಜಟಿಲ ಪ್ರಶ್ನೆಗಳ ಬಗ್ಗೆ, ಕಠಿಣ ಸವಾಲುಗಳ ಬಗ್ಗೆ ಆಲೋಚನೆ ಮಾಡುವವರು ಕಡಿಮೆಯಾಗಿದ್ದಾರೆ. ಹಾಗಾಗಿ ನನ್ನನ್ನು ಇಂದು ನೀವು ಸ್ವಲ್ಪ ಕಟು ಎಂದರೂ ಸರಿಯೇ, ನಾನಿಂದು ಈ ಕೆಲವು ಕಠಿಣ ಪ್ರಶ್ನೆಗಳ ಬಗ್ಗೆ ಮಾತಾಡಲೇಬೇಕಾಗಿದೆ.

ಇಂದಿನ ಮುಖ್ಯ ಪ್ರಶ್ನೆ ಎಂದರೆ, ಈ ಸಾಮಾಜಿಕ ನ್ಯಾಯ ಆಂದೋಲನ ಅಥವಾ ಜಾತಿ ವಿರೋಧಿ ಆಂದೋಲನ ಏನಿದೆ, ಯಾವುದನ್ನು ಕಳೆದ ನೂರೈವತ್ತು ವರ್ಷಗಳಿಂದ ನಾರಾಯಣ ಗುರು, ಪೆರಿಯಾರ್, ಫುಲೆ-ಅಂಬೇಡ್ಕರ್ದರ ಮತ್ತು ಲೋಹಿಯಾ ಧಾರೆಗಳು ಬೇರೆ ಬೇರೆ ಹೆಸರುಗಳಲ್ಲಿ ಕಟ್ಟುತ್ತಾ ಬಂದವು, ಅದು ಇಂದು ಯಾವ ಸ್ಥಿತಿಯಲ್ಲಿದೆ, ಅದರ ಮುಂದಿನ ಗುರಿ ಏನೆಂಬುದು. ಏಕೆಂದರೆ ಈ ಆಂದೋಲನ ೨೦ನೇ ಶತಮಾನದಲ್ಲಿ 'ದಿಗ್ವಿಜಯ' ಎಂದೇ ಹೇಳಬಹುದಾದ ಯಶಸ್ಸನ್ನು ಸಾಧಿಸಿ ೨೧ ಶತಮಾನದ ಹೊಸ್ತಿಲಿನಲ್ಲಿ ಬಂದು ನಿಂತಿದೆ. ದಕ್ಷಿಣದಲ್ಲಿ ಆರಂಭವಾದ ಈ ರಾಜಕಾರಣ ಈಗ ಉತ್ತರದಲ್ಲಿ ತನ್ನ ತಾರ್ಕಿಕ ಅಂತ್ಯ ಮುಟ್ಟಿದೆ ಎಂದು ಹೇಳಲಾಗುತ್ತಿದೆ. ಉದಾಹರಣೆಗೆ ತಮಿಳ್ನಾಡು ನೋಡಿ, ಕಳೆದ ನಾಲ್ಕು ದಶಕಗಳಿಂದ ಅಧಿಕಾರದಲ್ಲಿರುವ ಅಲ್ಲಿನ ಎರಡು ಪ್ರಮುಖ ಪಕ್ಷಗಳೂ ಜಾತಿ ವಿರೋದಿ ಆಂದೋಲನದ ಉತ್ಪನ್ನಗಳೇ. ಕರ್ನಾಟಕದಲ್ಲಿ ಎಪ್ಪತ್ತರ ದಶಕದ ನಂತರ ಸಾಮಾಜಿಕ ನ್ಯಾಯವನ್ನು ನಿರ್ಲಕ್ಷಿಸಿ ರಾಜಕಾರಣ ಮಾಡಲು ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ಉಂಟಾಗಿದೆ. ಕೇರಳದಲ್ಲಿ ಬಹು ಹಿಂದೆಯೇ ಈ ಬೆಳವಣಿಗೆ ಆಗಿ ಹೋಗಿದೆ. ಆಂಧ್ರ-ಮಹಾರಾಷ್ಟ್ರಗಳಲ್ಲಿ ಬ್ರಾಹ್ಮಣರ ರಾಜಕೀಯ ಪ್ರಭುತ್ವ ಹಿನ್ನೆಲೆಗೆ ಸರಿದು ಹೋಗಿ ಬಹಳ ಕಾಲವೇ ಆಯಿತು! ಉಳಿದಿದ್ದ ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಮುಲಾಯಂ-ಲಲ್ಲೂ ಪ್ರಸಾದ್, ಮತ್ತೀಗ ನಿತೀಶರ ವಿಜಯದೊಂದಿಗೆ; ಅದಕ್ಕಿಂತ ಹೆಚ್ಚಾಗಿ ಇನ್ನೂ ಮುಂದಿನ ಹೆಜ್ಜೆಯೆಂಬಂತೆ, ಕಳೆದ ಹತ್ತು ವರ್ಷಗಳಲ್ಲಿನ ಮಾಯಾವತಿ ರಾಜಕಾರಣದ ಉದಯದೊಂದಿಗೆ ಈ ದಿಗ್ವಿಜಯ ಸಂಪೂರ್ಣಗೊಂಡಿದೆ ಎಂದೇ ಹೇಳಬೇಕು.

ಆದರೆ ಈ ದಿಗ್ವಿಜಯವನ್ನು ಆಚರಿಸುವ ಸಂಭ್ರಮದ ಸಮಯದಲ್ಲೇ ಅದು ಒಂದು ಬಿಕ್ಕಟ್ಟನ್ನೂ ಎದುರಿಸುವಂತಾಗಿದೆ ಎಂದೆನಿಸುತ್ತದೆ. ಏಕೆಂದರೆ ಈ ಆಂದೋಲನ ತನ್ನ ನೀತಿ ಮತ್ತು ರಾಜಕಾರಣದ ನೆಲೆಯಲ್ಲಿ ಈಗ ಒಂದು ಸ್ಥಗಿತತೆಯ ಹಂತ ತಲುಪಿಬಿಟ್ಟಿರುವುದನ್ನು ನಾವು ಕಾಣುತ್ತಿದ್ದೇವೆ. ಈ ವಿಜಯ ಅಥವಾ ದಿಗ್ವಿಜಯ ಎನ್ನುವುದು ನಿಜವಾದ ವಿಜಯವಲ್ಲವೇನೋ, ಇದು ಒಂದು ಖೋಟಾ, ಟೊಳ್ಳು ವಿಜಯವೇನೋ ಎಂಬ ಅನುಮಾನ ನಮ್ಮಂತಹವರಲ್ಲಿ ಈಗ ಆರಂಭವಾಗಿದೆ. ಈ ಸಾಮಾಜಿಕ ನ್ಯಾಯ ನೀತಿ ಮತ್ತು ರಾಜಕಾರಣದ ಸದ್ಯದ ಲಕ್ಷಣಗಳನ್ನು ನೋಡಿ. ಅದು ಇತರೆಲ್ಲ ಆಯಾಮಗಳನ್ನೂ ಕಳೆದುಕೊಂಡು ಮೀಸಲಾತಿ ಕುರಿತ ಮಂಡಲ್‌ವಾದವೇ ಆಗಿಹೋಗಿಟ್ಟಿದೆ. ಅಂದರೆ ಅದರ ಬೆಂಬಲಿಗರು ಮತ್ತು ವಿರೋಧಿಗಳಿಬ್ಬರೂ, ಈವರೆಗೇನೂ ಆಗಿಯೇ ಇಲ್ಲವೆಂಬಂತೆ, ಇಪ್ಪತ್ತು ಮುವ್ವತ್ತು ವರ್ಷಗಳ ಹಿಂದೆ ಆಡುತ್ತಿದ್ದ ಮಾತುಗಳನ್ನೇ ಈಗಲೂ ಆಡುತ್ತಿದ್ದಾರೆ. ಹಾಗೆ ನೋಡಿದರೆ, ಮಂಡಲ್ ವಿರೋಧಿಗಳಿಗೆ ಹೊಸ ಭಾಷೆ ಸಿಕ್ಕಿಬಿಟ್ಟಿದೆ. ಅವರು ಈಗ ಸಮಾನತೆಯ ಮಾತನಾಡತೊಡಗಿದ್ದಾರೆ! 'ಸಮಾನತಾ ವೇದಿಕೆ' ಎಂಬುದೊಂದನ್ನು ರಚಿಸಿಕೊಂಡಿದ್ದಾರೆ. ಆ ಮೂಲಕ ಅವರು ಜನಬೆಂಬಲ ಸಂಘಟಿಸಿಕೊಂಡು ಆಕ್ರಾಮಕ ನೀತಿಯನ್ನು ಅಳವಡಿಸಿಕೊಂಡಿದ್ದಾರೆ. ಈ ಮಂಡಲ್‌ವಾದಿಗಳನ್ನು ನೋಡಿ, ಅವರು ಹೇಗೆ ರಕ್ಷಣಾತ್ಮಕವಾಗಿ ವಾದಿಸುವ ದುಸ್ಥಿತಿಗೆ ಈಡಾಗಿದ್ದಾರೆ!

ಏಕೆ ಹೀಗಾಯಿತು? ಏಕೆಂದರೆ ಇವರು ಜಾತಿ ಜಾತಿಗಳಾಗಿ ಒಡೆದು ಹೋಗಿ, ವಿವಿಧ ತರಂಗಾತಂರಗಳಲ್ಲಿ ಮಾತನಾಡತೊಡಗಿದ್ದಾರೆ. ದಲಿತರದ್ದೇ ಒಂದು ದನಿ, ಮುಸ್ಲಿಮರದ್ದೇ ಒಂದು ದನಿ, ಆದಿವಾಸಿಗಳದ್ದೇ ಒಂದು ದನಿ, ಹಿಂದುಳಿದ ವರ್ಗಗಳದ್ದೇ ಒಂದು ದನಿ! ಇದರಲ್ಲೂ ಒಡಕು! ಇದರಿಂದ ಯಾರಿಗೆ ಏನು ಲಾಭವಾಯಿತು? ಏನೂ ಇಲ್ಲ! ಮುಂಬಾಲಿಗಿನಿಂದ ಕೊಟ್ಟ ಮೀಸಲಾತಿಯನ್ನು ಈಗ ಹಿಂಬಾಲಿಗಿನಿಂದ ನಿರಾಕರಿಸಲಾಗುತ್ತಿದೆ! ಹಿಂದುಳಿದ ವರ್ಗಗಳಿಗೆ ಕೊಟ್ಟದೆಯೆಂದು ಹೇಳಲಾದ ಮೀಸಲಾತಿ ವ್ಯಾವಹಾರಿಕ ಮಟ್ಟದಲ್ಲಿ ಎಷ್ಟರ ಮಟ್ಟಿಗೆ ಜಾರಿಯಾಗಿ, ಯಾರ್‍ಯಾರಿಗೆ ಏನೇನು ಪ್ರಯೋಜನವಾಗಿದೆ ಎಂಬುದನ್ನು ಯಾರಾದರೂ ಅಧ್ಯಯನ ಮಾಡಿದರೆ ನನ್ನ ಮಾತಿನ ಸತ್ಯ ಗೊತ್ತಾದೀತು. ಏಕೆ ಹೀಗಾಯಿತು? ಏಕೆಂದರೆ ಹೊಸ ಕಾಲದ ಸವಾಲುಗಳನ್ನು ಗುರುತಿಸುವಲ್ಲಿ, ಅವನ್ನು ಅರ್ಥ ಮಾಡಿಕೊಂಡು ಎದುರಿಸುವಲ್ಲಿ, ಸಕಾಲಿಕ ನೀತಿ ರೂಪಿಸಿ ಅದಕ್ಕೆ ತಕ್ಕನಾದ ರಾಜಕಾರಣ ಮಾಡುವಲ್ಲಿ ಈ ಮಂಡಲ್‌ವಾದಿಗಳು ಸೋತಿದ್ದಾರೆ. ಭೂತಕಾಲದ ಗೂಡಿನಿಂದ ಹೊರಬರಲು ಅವರು ನಿರಾಕರಿಸುತ್ತಿದ್ದಾರೆ. ಇವರು ಇನ್ನೂ ಬರೀ ಮಂಡಲ್ ವಾದಿಗಳಾಗಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ! ಹಾಗಾಗಿ ನಾವು, ಈ ಜಾತಿ ವಿರೋಧಿ ಮತ್ತು ಅಂತರ್ಜಾತಿ ವಿವಾಹಿತರ ಸಮ್ಮೇಳನದಲ್ಲಿ ಭಾಗವಹಿಸಿರುವವರು, ಈ ಸಾಮಾಜಿಕ ನ್ಯಾಯದ ನೀತಿ ಮತ್ತು ರಾಜಕಾರಣವು ದೀರ್ಘಕಾಲಿಕ ದೃಷ್ಟಿ ಹೊಂದಿ ಬೆಳೆಯಲು, ಮುಂದಿನ ಫಲ ನೀಡಲು ಏನು ಮಾಡಬೇಕು ಎಂದು ಯೋಚಿಸಬೇಕಾಗಿದೆ. ಇದಕ್ಕಾಗಿ ಈ ಆಂದೋಲನ ಇಟ್ಟ ತಪ್ಪು ಹೆಜ್ಜೆಗಳನ್ನು ಮೊದಲು ಗುರುತಿಸಬೇಕಾಗಿದೆ.

ಸಾಮಾಜಿಕ ನ್ಯಾಯ ಆಂದೋಲನ ಮಂಡಲ್‌ವಾದವಾಗಿ ಸಂಕುಚಿತಗೊಂಡು ಕುಬ್ಜಗೊಳ್ಳಲು ನನ್ನ ಪ್ರಕಾರ ಐದು ಮೋಹಗಳು ಕಾರಣ. ಒಂದು ರಾಜ್ಯ ಮೋಹ. ರಾಜ್ಯಾಧಿಕಾರದ ಬಗೆಗಿನ ವ್ಯಸನವೆಂದೂ ಇದನ್ನು ಕರೆಯಬಹುದು. ನಿಜ, ಸಾಮಾಜಿಕ ನ್ಯಾಯಕ್ಕೆ ಪ್ರಭುತ್ವದ ಬೆಂಬಲ ಬೇಕು. ಆದರೆ ರಾಜ್ಯ ಪ್ರಭುತ್ವವೆಂಬುದು ಜನ ಪ್ರಭುತ್ವದ ಒಂದು ಭಾಗ ಮಾತ್ರ; ಸರ್ಕಾರದೊಡನೆಯ ಕೊಡು–ಕೊಳೆಯ ವ್ಯವಹಾರದಾಚೆಗೂ, ತಾನು ಪರಿವರ್ತನೆಯ ರಾಜಕಾರಣ ಮಾಡಬೇಕಾದ ವಿಶಾಲ ವ್ಯಾಪ್ತಿಯ ಪ್ರಭುತ್ವವಿದೆ ಎಂಬುದನ್ನು ಅದು ಮರೆಯಿತು. ಎರಡನೆಯದು ಜಾತಿ ಮೋಹ. ಇದರಿಂದಾಗಿ, ನಾವು ಸಾಮಾಜಿಕ ನ್ಯಾಯದ ಮಾತನಾಡುತ್ತಲೇ, ಜಾತಿವಾದಿ ರಾಜಕಾರಣ ಮಾಡುವ ಪಕ್ಷಗಳ ಬೆನ್ನ ಹಿಂದೆ ಹೋದೆವು. ನಾವಿಂದು ಈ ಸಮ್ಮೇಳನವನ್ನು ಲೋಹಿಯಾ ಹೆಸರಿನ ಸ್ಫೂರ್ತಿಯೊಂದಿಗೆ ಆಯೋಜಿಸಿದ್ದೇವೆ. ಆದ ಕಾರಣ, ಲೋಹಿಯಾ ರಾಜಕೀಯ ಪರಿವರ್ತನೆಯ ಮಾತನಾಡುವಾಗ ಎಂದೂ ಜಾತಿಯೊಂದರ ಬಗ್ಗೆಯೇ ಮಾತನಾಡತ್ತಿರಲಿಲ್ಲ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಅವರು ಯವಾಗಲೂ ಒಟ್ಟಿಗೇ ಜಾತಿ, ವರ್ಗ ಮತ್ತು ಲಿಂಗ ವಿಷಮತೆ ಅಥವಾ ತಾರತಮ್ಯಗಳ ಬಗ್ಗೆ ಮಾತನಾಡುತ್ತಿದ್ದರು. ಅವೆಲ್ಲವೂ ಜೊತೆ ಜೊತೆಯಲ್ಲೇ ಕ್ರಿಯಾಶೀಲವಾಗಿ ಸಾಮಾಜಿಕ ವಿಷಮತೆಗೆ ಕಾರಣವಾಗಿದೆ ಎಂಬುದು ಅವರ ವಾದವಾಗಿತ್ತು. ಆದರೆ ಲೋಹಿಯಾ ಅನುಯಾಯಿಗಳು, ಸಾಮಾಜಿಕ ನ್ಯಾಯದ ರಾಜಕೀಯ ನಾಯಕರು ಅದನ್ನು ಜಾತಿಯೊಂದಕ್ಕೇ ಸೀಮಿತಗೊಳಿಸಿದರು. ಜಾತಿಯೊಳಗಿನ ಮತ್ತು ಹೊರಗಿನ ಲಿಂಗ ಮತ್ತು ವರ್ಗ ಅಸಮಾನತೆಗಳನ್ನು ನಿರ್ಲಕ್ಷಿಸಿದರು.

ಮೂರನೆಯ ಮೋಹ ಮೀಸಲಾತಿಯ ಮೋಹ. ನಾನು ಮೊದಲೇ ಸ್ಪಷ್ಟ ಪಡಿಸಿಬಿಡುವೆ: ನಾನು ಜಾತಿ ಆಧಾರಿತ–ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಬಂಧಪಟ್ಟಂತೆ–ಮೀಸಲಾತಿಯ ಸಮರ್ಥಕ. ಅದು ಅನಿವಾರ್ಯ, ನಮ್ಮ ಸಮಾಜದಲ್ಲಿ ಅದು ಈವರೆಗೆ ರಚನಾತ್ಮಕ ಪಾತ್ರ ವಹಿಸಿದೆ, ಮುಂದೆಯೂ ಅದನ್ನು ಮುಂದುವರೆಸಬೇಕು ಎಂದು ಹೇಳುವವನು ನಾನು. ಆದರೆ ಇದೊಂದೇ ಸಾಮಾಜಿಕ ನ್ಯಾಯದ ಸಾಧನ ಎಂದು ನಂಬಲು, ನಂಬಿಸಲು ನಾನು ಬಯಸುವುದಿಲ್ಲ. ಅದು ಮತ್ತೆ ಸಾಮಾಜಿಕ ನ್ಯಾಯ ಕಲ್ಪನೆಯನ್ನು ಕುಬ್ಜಗೊಳಿಸಿ ನಾಶ ಮಾಡುವಂತಹ ರಾಜಕಾರಣವಾಗುತ್ತದೆ. ನಾಲ್ಕನೆಯ ಮೋಹ, ಪ್ರಮಾಣಾನುಸಾರ ಪ್ರಾತಿನಿಧ್ಯದ ಮೋಹ. ಅಂದರೆ ಜನಸಂಖ್ಯಾ ಪ್ರಮಾಣಾನುಸಾರ ಅಧಿಕಾರ ಮತ್ತು ಸೌಲಭ್ಯಗಳ ವಿತರಣೆ. ಉದಾಹರಣೆಗೆ, ಹಿಂದುಳಿದ ವರ್ಗದವರು ಜನಸಂಖ್ಯೆಯ ಶೇ.೫೨ ಇದ್ದಾರೆ;ಹಾಗಾಗಿ ಅವರಿಗೆ ಶೇ.೫೨ ಮೀಸಲಾತಿ ಕೊಡಬೇಕು ಎನ್ನುವುದು! ಮುಖ ನೋಡಿ ಮಣೆ ಹಾಕುವ ಇಂತಹ ವಿತರಣೆಯನ್ನು ಹಿಂದಿಯಲ್ಲಿ ಕೋತಿ ನ್ಯಾಯ ಎಂದು ಕರೆಯಲಾಗುತ್ತದೆ. ಸದಾ ಪ್ರಮಾಣದ ಉಲ್ಲಂಘನೆಯಾಗುತ್ತಿರುವ ಸಮಾಜದಲ್ಲಿ ಇದನ್ನು ಸಾಮಾಜಿಕ ನ್ಯಾಯ ಎಂದು ಯಾವ ಅರ್ಥದಲ್ಲೂ, ಸಂದರ್ಭದಲ್ಲೂ ಕರೆಯಲಾಗದು.

ಐದನೆಯ ಮೋಹ ಎಂದರೆ ಸಾಮಾಜಿಕ ನ್ಯಾಯದ ವ್ಯಾಪ್ತಿಯನ್ನು ಸದಾ ವಿಸ್ತಾರಗೊಳಿಸುತ್ತಾ ಹೋಗುವ ಮೋಹ. ಪರಿಶಿಷ್ಟ ಜಾತಿಗಳ ಜೊತೆಗೆ ಪರಿಶಿಷ್ಟ ಪಂಗಡಗಳು, ನಂತರ ಇತರ ಹಿಂದುಳಿದ ಜಾತಿಗಳನ್ನು ಸೇರಿಸಿದ್ದಾಯಿತು. ಆನಂತರ ಆರ್ಥಿಕ ದುರ್ಬಲರು, ವಿಕಲ ಚೇತನರು ಹೀಗೆ ಸೇರಿಸುತ್ತಲೇ ಹೋಗಲು ಯತ್ನಿಸುವ ವ್ಯಸನ. ಸೇರಿಸು, ಸೇರಿಸು;ಯಾರನ್ನೂ ಹೊರದೂಡುವ ಬಾಬತ್ತೇ ಇಲ್ಲ! ಈ ಸಂಬಂಧವಾಗಿ ಕರ್ನಾಟಕದಲ್ಲಿ ನಡೆದಿರುವ ಬೆಳವಣಿಗೆಗಳ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲವಾದರೂ, ಸಾಮಾಜಿಕ ನ್ಯಾಯ ಪರಿಕಲ್ಪನೆಗೇ ಅನ್ಯಾಯ ಮಾಡುವಂತಹ ಹಲವು ಜಾತಿ ವರ್ಗಗಳು ಮೀಸಲಾತಿ ಪಟ್ಟಿಗೆ ಸೇರಿವೆ ಎಂದು ಕೇಳಿದ್ದೇನೆ. ಇದು ಕೇವಲ ಕರ್ನಾಟಕದ ಕಥೆಯಲ್ಲ. ಎಲ್ಲ ಕಡೆ ಹೀಗಾಗುತ್ತಿದೆ. ಉತ್ತರದ ಜಾಟರ ನಂತರ ಮಹಾರಾಷ್ಟ್ರದಲ್ಲಿ ಮರಾಠರನ್ನು ಸಾಮಾಜಿಕ ನ್ಯಾಯ ವ್ಯಾಪ್ತಿಗೆ ಸೇರಿಸುವ ಪ್ರಯತ್ನ ನಡೆದಿದೆ. ಇದು ಸಾಮಾಜಿಕ ನ್ಯಾಯದ ಕಲ್ಪನೆಯ ವಿಶ್ವಾಸಾರ್ಹತೆಯನೇ ನಾಶ ಮಾಡುತ್ತಿದೆ ಎಂಬ ಪರಿವೆಯೇ ಯಾರಿಗೂ ಇದ್ದಂತಿಲ್ಲ.

**ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣ ಲಲ್ಲೂ ಪ್ರಸಾದ್ ಯಾದವ್, ಮುಲಾಯಂ ಸಿಂಗ್ ಯಾದವ್, ರಾಮ್ ವಿಲಾಸ ಪಾಸ್ವಾನ್, ಮಾಯಾವತಿ, ಕರುಣಾನಿಧಿ ಇತ್ಯಾದಿ ಮುಖವಾಡಗಳನ್ನು ಸೃಷ್ಟಿಸುವಲ್ಲಿ ಕೊನೆಗೊಂಡಿದೆ ಇದು ಸಾಮಾಜಿಕ ನ್ಯಾಯದ ದುರಂತ. ಹಾಗಾಗಿ ನಮಗೆ ಬೇಕಾದದ್ದು, ಸಾಮಾಜಿಕ ನ್ಯಾಯ ಸಿದ್ಧಾಂತ ಮೂಲತಃ ಹೇಳುವ ಮತ್ತು ಅದರ ಕೇಂದ್ರ ಕಾಳಜಿಯಾದ ಸಮಾನ ಅವಕಾಶಗಳ ನೀತಿ ಮತ್ತು ರಾಜಕಾರಣ. ಇದನ್ನು ಬಳಸಿಕೊಂಡು ವ್ಯಕ್ತಿ ತನ್ನ ಕಾರ್ಯಕ್ಷಮತೆ, ಶ್ರದ್ಧೆ ಮತ್ತು ಪ್ರಯತ್ನಗಳ ಮೂಲಕ ಬೆಳೆಯಬೇಕು. ಅದು ಮಾತ್ರ ಅಸಮಾನತೆಯನ್ನು ತೊಡೆಯುವ ನಿಜವಾದ ಸಮಾಜವಾದಿ ರಾಜಕಾರಣ ಎನಿಸಿಕೊಳ್ಳುತ್ತದೆ.**

ಇಂತಹ ಪರಿಸ್ಥಿತಿಯಲ್ಲಿ ನಾವು ಏನು ಮಾಡಬಹುದು? ಈ ಸಂಬಂಧವಾಗಿ ನಾನು ನಾಲ್ಕು ಸೂತ್ರ ರೂಪದ ಕಾರ್ಯಕ್ರಮವನ್ನು ನಿಮ್ಮ ಮುಂದಿಡಬಯಸುತ್ತೇನೆ. ಇವು ನಿಮ್ಮೆಲ್ಲರಿಗೂ ಸಮ್ಮತವಾಗದಿರಬಹುದು. ನೀವು ಈ ಬಗ್ಗೆ ಬಲವಾದ ಭಿನ್ನಾಭಿಪ್ರಾಯಗಳನ್ನೇ ವ್ಯಕ್ತ ಪಡಿಸಬಹುದು. ಇನ್ನು ಕೆಲವರು ನನ್ನನ್ನು ಒಪ್ಪಲೂಬಹುದು. ನಾನು ನಿಜವಾದ ಲೋಹಿಯಾ ಪರಂಪರೆಯ ಅನುಯಾಯಿಯಾಗಿ ನಿಮ್ಮ ಮುಂದೆ ವಿವಾದಾಸ್ಪದವೇ ಅನ್ನಬಹುದಾದ ಪ್ರಶ್ನಾರ್ಹ, ಚರ್ಚಾರ್ಹ ವಿಷಯಗಳನ್ನು ಮಂಡಿಸಬಯಸುವೆ.

ಮೊದಲನೆಯದಾಗಿ ಈ ಸಾಮಾಜಿಕ ನ್ಯಾಯದ ಮೂಲ ಸಿದ್ಧಾಂತವೇನು ಎಂಬುದರ ಬಗ್ಗೆ ಪುನರಾಲೋಚನೆ ಮಾಡಬೇಕಿದೆ. ಈ ಸಂಬಂಧ ಈ ಮೊದಲು ನಾನು ಪ್ರಸ್ತಾಪಿಸಿದ ಜನಸಂಖ್ಯಾ ಪ್ರಮಾಣಾನುಸಾರ ರಾಜಕಾರಣವನ್ನು ತಿರಸ್ಕರಿಸಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಅತಿ ಕಡಿಮೆ ಪ್ರಮಾಣದ ಜನ ಸಮುದಾಯ ಬಹು ದೊಡ್ಡ ಪ್ರಮಾಣದ ಆಸ್ತಿ-ಅನುಕೂಲಗಳನ್ನು ಹೊಂದಿದ್ದಾರೆ. ಇದನ್ನು ಕಂಡು ಪ್ರಮಾಣಾನುಸಾರ ವಿತರಣೆಯ ಮೋಹ ನಮ್ಮನ್ನು ಆವರಿಸುವುದು ಸಹಜ. ಆದರೆ ಇದನ್ನು ಆಳದಲ್ಲಿ ನೋಡಿದಾಗ ಯಥಾಸ್ಥಿತಿವಾದಿ ನಿಲುವು ಎಂಬುದು ನಮ್ಮ ಅರಿವಿಗೆ ಬಂದೀತು. ಬದಲಾವಣೆಯ ಹಂಬಲವನ್ನು ಕಳೆದುಕೊಂಡ ಸಮಾಜದಿಂದ ಮಾತ್ರ ಬರಬಲ್ಲ ಇಂತಹ ಬೇಡಿಕೆಯ ಆಧಾರದ ಮೇಲೆ ಯಾವ ಪ್ರಗತಿಪರ ರಾಜಕಾರಣವನ್ನೂ ಮಾಡಲಾಗುವುದಿಲ್ಲ. ತನ್ನಲ್ಲಿನ ಮೌಲಿಕ ಸರಕನ್ನು ತತ್ಕಾಲೀನ ಸಂದರ್ಭದ ಒತ್ತಡದಲ್ಲಿ ಹೀಗೆ ಅವೈಚಾರಿಕವಾಗಿ ಹಂಚುವ ಯಾವ ಸಮಾಜವೂ ಉದ್ಧಾರವಾಗಲಾರದು. ಏಕೆಂದರೆ ಇಂತಹ ರಾಜಕಾರಣ ಕೇವಲ ಪ್ರಾತಿನಿಧ್ಯದ ಪ್ರಶ್ನೆಯನ್ನು ಬಗೆಹರಿಸಬಹುದೇ ಹೊರತು ಗುಣಾತ್ಮಕ ಸಾಮಾಜಿಕ ಬದಲಾವಣೆಯ ಪ್ರಶ್ನೆಯನ್ನು ಬಗೆಹರಿಸಲಾರದು. ದಲಿತರಿಗೆ ಪ್ರಾತಿನಿಧ್ಯ, ಹಿಂದುಳಿದವರಿಗೆ ಪ್ರಾತಿನಿಧ್ಯ, ಮುಸ್ಲಿಮರಿಗೆ ಪ್ರಾತಿನಿಧ್ಯ ಇತ್ಯಾದಿಗಳಿಂದ ನಮ್ಮ ರಾಜಕೀಯದಲ್ಲಿ ಏನು ಗುಣಾತ್ಮಕ ಬದಲಾವಣೆ ಆಗಿದೆ?

ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆ ಮಾಯಾವತಿ ಮುಖ್ಯ ಮಂತ್ರಿಯಾಗಿದ್ದಾರೆ. ಅಲ್ಲಿ ಏನಾಗಿದೆ? ದಲಿತ ಹೆಣ್ಣು ಮಗಳೊಬ್ಬಳು ಅಷ್ಟು ದೊಡ್ಡ ರಾಜ್ಯದ ಮುಖ್ಯ ಮಂತ್ರಿಯಾಗುವುದು ಸಾಮಾಜಿಕ ನ್ಯಾಯದ ಒಂದು ದೊಡ್ಡ ಸಾಧನೆಯೇ. ಆದರೆ ಆ ಸಾಮಾಜಿಕ ನ್ಯಾಯವೆಂಬುದು ಅಲ್ಲಿಗೇ ನಿಂತು, ಈ ಪ್ರಾತಿನಿಧ್ಯವೆಂಬುದು ಕೇವಲ ಚಹರೆಗಳನ್ನು ಅಥವಾ ಮುಖವಾಡಗಳನ್ನು ಮಾತ್ರ ಸೃಷ್ಟಿಸುತ್ತಾ ಅದು ಪ್ರತಿಪಾದಿಸುವ ಜೀವನ ಮೌಲ್ಯಗಳನ್ನು ಸೃಷ್ಟಿಸದೇ ಹೋಗುವಂತಾದರೆ ಏನು ಪ್ರಯೋಜನ? ಇದನ್ನೇ ನಾನು ಈ ಹಿಂದೆ ಹೇಳಿದ ಸಾಮಾಜಿಕ ನ್ಯಾಯ ರಾಜಕಾರಣದ ಸ್ಥಗಿತತೆಯ ಅವಸ್ಥೆ ಎಂದು ಗುರುತಿಸಿದ್ದು. ಈ ಅವಸ್ಥೆ ಹೊಸ ಪಟ್ಟಭದ್ರ ಹಿತಾಸಕ್ತಿಗಳನ್ನು ಮಾತ್ರ ಹುಟ್ಟುಹಾಕಬಲ್ಲುದು. ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣ ಲಲ್ಲೂ ಪ್ರಸಾದ್ ಯಾದವ್, ಮುಲಾಯಂ ಸಿಂಗ್ ಯಾದವ್, ರಾಮ್ ವಿಲಾಸ ಪಾಸ್ವಾನ್, ಮಾಯಾವತಿ, ಕರುಣಾನಿಧಿ ಇತ್ಯಾದಿ ಮುಖವಾಡಗಳನ್ನು ಸೃಷ್ಟಿಸುವಲ್ಲಿ ಕೊನೆಗೊಂಡಿದೆ ಇದು ಸಾಮಾಜಿಕ ನ್ಯಾಯದ ದುರಂತ. ಹಾಗಾಗಿ ನಮಗೆ ಬೇಕಾದದ್ದು, ಸಾಮಾಜಿಕ ನ್ಯಾಯ ಸಿದ್ಧಾಂತ ಮೂಲತಃ ಹೇಳುವ ಮತ್ತು ಅದರ ಕೇಂದ್ರ ಕಾಳಜಿಯಾದ ಸಮಾನ ಅವಕಾಶಗಳ ನೀತಿ ಮತ್ತು ರಾಜಕಾರಣ. ಇದನ್ನು ಬಳಸಿಕೊಂಡು ವ್ಯಕ್ತಿ ತನ್ನ ಕಾರ್ಯಕ್ಷಮತೆ, ಶ್ರದ್ಧೆ ಮತ್ತು ಪ್ರಯತ್ನಗಳ ಮೂಲಕ ಬೆಳೆಯಬೇಕು. ಅದು ಮಾತ್ರ ಅಸಮಾನತೆಯನ್ನು ತೊಡೆಯುವ ನಿಜವಾದ ಸಮಾಜವಾದಿ ರಾಜಕಾರಣ ಎನಿಸಿಕೊಳ್ಳುತ್ತದೆ.

ಎರಡನೆಯದು, ಸಾಮಾಜಿಕ ನ್ಯಾಯದ ತತ್ವವನ್ನು ಸರ್ಕಾರಿ ವಲಯದಲ್ಲಿ ಅದಿನ್ನೂ ಜಾರಿಯಾಗದ ಕ್ಷೇತ್ರಗಳಿಗೆ ವಿಸ್ತರಿಸುವುದು. ಉದಾಹರಣೆಗೆ ನ್ಯಾಯಾಂಗ ಮತ್ತು ಸೇನೆ. ಇಲ್ಲಿ ಸಾಮಾಜಿಕ ನ್ಯಾಯದ ತತ್ವವನ್ನು ಏಕೆ ಅನ್ವಯಿಸಲಾಗಿಲ್ಲವೋ ತಿಳಿಯದಾಗಿದೆ. ನ್ಯಾಯಾಂಗದ ಸಾಮಾಜಿಕ ಸ್ವರೂಪ ಕುರಿತ ಅಂಕಿ ಅಂಶಗಳನ್ನು ಗುಟ್ಟಾಗಿ ಇಡುವ ಪ್ರಯತ್ನ ಮಾಡಲಾಗುತ್ತಿದೆ. ಕೂಡಲೇ ಈ ಅಂಕಿ ಅಂಶಗಳನ್ನು ಬಹಿರಂಗಗೋಳಿಸಿ, ಈ ಕ್ಷೇತ್ರಗಳಲ್ಲಿ ಕೂಡಾ ಅಗತ್ಯ ಕಂಡರೆ ಸಾಮಾಜಿಕ ನ್ಯಾಯದ ತತ್ವ ಅಳವಡಿಸುವ ಬಗ್ಗೆ ಚರ್ಚೆಯನ್ನಾದರೂ ಶುರು ಮಾಡಬೇಕಿದೆ. ಇನ್ನು, ಸಾಮಾಜಿಕ ನ್ಯಾಯದ ನೀತಿ ಮತ್ತು ರಾಜಕಾರಣವನ್ನು ಸರ್ಕಾರಿ ವಲಯದಾಚೆಗೆ ವಿಸ್ತರಿಸುವ ಸಾಧ್ಯತೆಗಳನ್ನೂ ಪರಿಶೀಲಿಸಬೇಕು. ಕಳೆದ ಇಪ್ಪತ್ತು ವರ್ಷಗಳಲ್ಲಿ ಬಹಳಷ್ಟು ಒಳ್ಳೆಯ ಅವಕಾಶಗಳು ಸೃಷ್ಟಿಯಾಗಿರುವುದು ಖಾಸಗಿ ವಲಯದಲ್ಲಿ. ಅಂದ ಮಾತ್ರಕ್ಕೆ ನಾನು ಖಾಸಗಿ ವಲಯದಲ್ಲಿ ಸ್ಥಾನ ಮೀಸಲಾತಿ ಜಾರಿಗೆ ತರಬೇಕೆಂದುದು ಹೇಳುತ್ತಿಲ್ಲ. ಸಾಮಾಜಿಕ ನ್ಯಾಯ, ಮೀಸಲಾತಿ ಕಲ್ಪನೆಯಾಚೆಗೂ ಇರುವ ಸಾಧನಗಳನ್ನು ಕಂಡುಕೊಳ್ಳುವಲ್ಲಿ ತನ್ನನ್ನು ತಾನು ಗಂಭೀರವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

ಇದನ್ನು ಸ್ಪಷ್ಟಪಡಿಸಲು, ನಿಮಗೆ ಬಂಡವಾಳಶಾಹಿ ಆರ್ಥಿಕತೆ ಎಂದು ಹೇಳಲಾಗುವ ಅಮೇರಿಕಾದ ಉದಾಹರಣೆ ಕೊಡುತ್ತೇನೆ. ಆ ದೇಶದಲ್ಲಿ ಎಲ್ಲ ಕಂಪನಿಗಳೂ ಪ್ರತಿ ವರ್ಷದ ಕೊನೆಯಲ್ಲಿ ತನ್ನ ಸಾಮಾಜಿಕ ಸ್ವರೂಪದ ಮಾಹಿತಿ ನೀಡಬೇಕು. ಅಂದರೆ ತನ್ನ ಕಂಪನಿಯಲ್ಲೆ ಎಷ್ಟೆಷ್ಟು ಜನ ಬಿಳಿಯರು, ಕರಿಯರು ಮತ್ತು ಇತರರು ಇದ್ದಾರೆ ಎಂಬುದರ ಅಂಕಿ ಅಂಶಗಳನ್ನು ಘೋಷಿಸಬೇಕು. ಭಾರತದಲ್ಲೂ ಹೀಗೆ ಮಾಡಬಹುದು. ನಮ್ಮ ಖಾಸಗಿ ಕಂಪನಿಗಳು ಇಲ್ಲಿನ ನೆಲ-ಜಲ-ವಿವಿಧ ರೀತಿಯ ತೆರಿಗೆ ಇತ್ಯಾದಿ ಅನೇಕ ವಿಷಯಗಳಲ್ಲಿ ಸರ್ಕಾರಗಳಿಂದ ರಿಯಾಯ್ತಿ ಮತ್ತು ಸಹಾಯ ಪಡೆಯುತ್ತಿವೆ. ಇದಕ್ಕೆ ತಕ್ಕನಾಗಿ ಅವು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಎಲ್ಲ ಹಕ್ಕೂ ಸರ್ಕಾರಕ್ಕಿದೆ. ಅದನ್ನು ಬಳಸಿಕೊಂಡು ಸಾಮಾಜಿಕ ನ್ಯಾಯದ ಹೊಸ ರಾಜಕಾರಣ ಮಾಡಬಹುದು.

ಇನ್ನು ಸಾಮಾಜಿಕ ನೀತಿಯ ಗುರಿಗಾರಿಕೆ ಬಗ್ಗೆ ಹಲವು ಸಂದೇಹಗಳಿವೆ. ಉದಾಹರಣೆಗೆ, ಮೀಸಲಾತಿ ನಿಜವಾದ ಅರ್ಹರಿಗಿಂತ ಹೆಚ್ಚಾಗಿ ಅನರ್ಹರಿಗೆ ಅವಕಾಶ ಮಾಡಿಕೊಡಲಾರಂಭಿಸಿದೆ. ಎಂಬುದು. ಇದು ನಮ್ಮನ್ನು ಕೆನೆ ಪದರ ಕುರಿತ ಚರ್ಚೆಯತ್ತ ಒಯ್ಯುತ್ತದೆ. ಕೆನೆ ಪದರ ಎಂಬ ಶಬ್ದದ ಸಮರ್ಪಕತೆ ಬಗ್ಗೆ ನನ್ನ ಸಂದೇಹಗಳಿರುವವಾದರೂ, ಕೆನೆಪದರ ನೀತಿಯ ಜಾರಿಯ ಅವಶ್ಯಕತೆ ಬಗ್ಗೆ ನನಗಾವ ಸಂದೇಹವೂ ಇಲ್ಲ. ಆದರೆ ಇದರಲ್ಲಿ ಒಂದು ತಿದ್ದುಪಡಿ ಸೂಚಿಸಬಯಸುತ್ತೇನೆ. ಅದೆಂದರೆ ಕೆನೆ ಪದರದ ಅಭ್ಯರ್ಥಿಗಳನ್ನು

**ಹಾಗಾಗಿಯೇ, ಆ ಆಂದೋಲನ ಅಂದು ರೂಪಿಸಿದ ಹುಲಿಗಳು ಈಗ ದೆಹಲಿ ಮತ್ತು ಬೆಂಗಳೂರುಗಳಲ್ಲಿ ಸಿದ್ಧಮಾಡಲಾಗಿರುವ ದೊಡ್ಡ ದೊಡ್ಡ ವೈಭವೋಪೇತ ಬೋನುಗಳಲ್ಲಿ ಸಾಕಿದ ನಾಯಿಗಳಂತೆ, ಪಟ್ಟಭದ್ರ ಹಿತಾಸಕ್ತಿಗಳ ಮುದ್ದು ಪ್ರಾಣಿಗಳಂತೆ ನಮಗೆ ಕಾಣತೊಡಗಿದ್ದಾರೆ. ಇದನ್ನು ಗಮನಿಸಿಯಾದರೂ ನಾವು ಇಂದು ಸಾಮಾಜಿಕ ನ್ಯಾಯ ಕುರಿತು ಹೊಸ ಆಲೋಚನೆಗಳಿಗೆ ತೆರದುಕೊಳ್ಳಬೇಕಿದೆ.**

ಅವರಿಗೆ ಕೊನೆಯ ಫಲಾನುಭವದ-ಅಂದರೆ ಕೆನೆ ಪದರ ವ್ಯಾಪ್ತಿಗೆ ಒಳಪಡದ ಅರ್ಹ ಅಭ್ಯರ್ಥಿ ದೊರೆಯದಿದ್ದರೆ ಇವರನ್ನು ಪರಿಗಣಿಸುವ-ಸೌಲಭ್ಯ ನೀಡಬಹುದಾಗಿದೆ.

ಹಾಗೇ ಕೋಟಾದೊಳಗಿನ 'ಕೋಟಾದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೋಟಾದಲ್ಲಿ, ವಿಶ್ವಾಸಾರ್ಹ ಅಂಕಿ ಅಂಶಗಳ ಸಾಕ್ಷ್ಯ ದೊರಕಿದಲ್ಲಿ ಒಳ ಕೋಟಾವನ್ನು ಜಾರಿಗೆ ತರಬಹುದಾಗಿದೆ. ಆದರೆ ಹಿಂದುಳಿದ ವರ್ಗಗಳ ಕೋಟಾದಲ್ಲಿ ಅನ್ಯಾಯ ಎದ್ದು ಕಾಣುತ್ತಿದೆಯಾದ್ದರಿಂದ, ಇದರ ಕೋಟಾದಲ್ಲಿ ಬಹಳ ಹಿಂದುಳಿದ ಜಾತಿಗಳ ಕೋಟಾವೊಂದನ್ನು ಸೃಷ್ಟಿಸಲೇ ಬೇಕಾಗಿದೆ. ನಮ್ಮಲ್ಲಿ ನನ್ನದೇ ಜಾತಿಯಾದ ಯಾದವ್ ಅಥವಾ ಕುರ್ಮಿ ಇತ್ಯಾದಿ ಜಾತಿಗಳು ಮತ್ತು ನಿಮ್ಮಲ್ಲಿ ಲಿಂಗಾಯ್ತ, ಒಕ್ಕಲಿಗ ಇತ್ಯಾದಿ ಜಾತಿಗಳು ಈ ಮೀಸಲಾತಿಯ ಬಹುಪಾಲು ಲಾಭವನ್ನು ಪಡೆಯುತ್ತಿವೆ ಹಾಗಾಗಿ, ಇತರೆ ಹೆಚ್ಚು ಅರ್ಹ ಹಿಂದುಳಿದ ಜಾತಿಗಳನ್ನು ಈ ಅನ್ಯಾಯದಿಂದ ಪಾರು ಮಾಡಲು ತುರ್ತು ಮಾರ್ಗಗಳನ್ನು ಕಂಡು ಹಿಡಿಯಬೇಕಿದೆ. ಇದಕ್ಕಾಗಿ ಸಮೀಕ್ಷೆ, ಅಧ್ಯಯನಗಳಿಗಾಗಿ ಆಯೋಗಗಳ ರಚನೆಯಾಗಬೇಕಿದೆ.

ಮುಖ್ಯವಾಗಿ ನಾನು ಹೇಳುವುದೇನೆಂದರೆ, ಸಾಮಾಜಿಕ ನ್ಯಾಯ ಎಂದರೆ ಮೀಸಲಾತಿ ಎಂಬ ವ್ಯಸನದಿಂದ ನಾವು ಆದಷ್ಟು ಬೇಗ ಹೊರಬರಬೇಕಿದೆ. ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯವಿಲ್ಲವೆಂದ ಕೂಡಲೇ ಮೀಸಲಾತಿಯ ಮಾತನಾಡತೊಡಗುತ್ತೇವೆ. ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯವಿಲ್ಲದಾಗಿದೆ ಎಂದ ಕೂಡಲೇ ಮೀಸಲಾತಿಯ ಕೂಗು ಹಾಕುತ್ತೇವೆ. ಇದು ಸರಿಯಲ್ಲ. ಸಾಮಾಜಿಕ ನ್ಯಾಯದ ಇತರ ರೂಪ, ಸಾಧನ ಮತ್ತು ಮಾರ್ಗಗಳನ್ನು ನಾವು ಅನ್ವೇಷಿಸಬೇಕಿದೆ. ಅದರ ಪರಿಕಲ್ಪನೆಯನ್ನು ಬದಲಾದ ಕಾಲ ಸಂದರ್ಭಕ್ಕೆ ತಕ್ಕಂತೆ ವಿಸ್ತರಿಸಬೇಕಿದೆ, ಬದಲಿಸಬೇಕಿದೆ. ಆ ಮೂಲಕ ಮೀಸಲಾತಿ ನೀತಿ ಮತ್ತು ಮಾರ್ಗಗಳನ್ನು ಅವುಗಳ ಸಂಕುಚಿತತೆ ಮತ್ತು ದೌರ್ಬಲ್ಯಗಳಿಂದ ಪಾರು ಮಾಡಬೇಕಿದೆ. ಉದಾಹರಣೆಗೆ ನಾನು ಮತ್ತು ನನ್ನ ಸ್ನೇಹಿತ ಸತೀಶ್ ದೇಶಪಾಂಡೆ ಸೇರಿ *ಬಹು ಆಯಾಮಗಳ ಅನ್ಯಾಯ ಸೂಚ್ಯಂಕ*ವೊಂದನ್ನು ರೂಪಿಸುವ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ಜಾತಿ ಮಾತ್ರವಲ್ಲದೆ, ವರ್ಗ, ಲಿಂಗ, ಹಳ್ಳಿ, ಪಟ್ಟಣ, ಶಿಕ್ಷಣ ಮಾಧ್ಯಮ, ವೃತ್ತಿ, ಆದಾಯ, ಈವರೆಗಿನ ಮೀಸಲಾತಿ ಲಾಭ, ಇತ್ಯಾದಿಗಳನ್ನು ಅಂತರ್ಗತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ.

ಇದಕ್ಕೆ ಪೂರಕವಾಗಿ ಸರ್ಕಾರ ಕೂಡ ಸಾಮಾಜಿಕ ನ್ಯಾಯ ವಿತರಣೆಯ ಮೇಲ್ವಿಚಾರಣೆಗೆ ರಚಿಸಲಾಗಿರುವ ಸಂಸ್ಥೆಗಳ ಸ್ವರೂಪವನ್ನೂ ಬದಲಿಸಬೇಕಿದೆ. ಉದಾಹರಣೆಗೆ ನಾವು ಪರಿಶಿಷ್ಟ ಜಾತಿ ಪಂಗಡಗಳ ಆಯೋಗ, ಹಿಂದುಳಿದ ವರ್ಗಗಳ ಆಯೋಗ ಇವುಗಳಿಗೆ ಬದಲಾಗಿ *ಸಮಾನ ಅವಕಾಶಗಳ ಆಯೋಗ* ರಚಿಸುವಂತೆ ಒತ್ತಾಯಿಸಿದ್ದೇವೆ. ಇದೆಲ್ಲವೂ ಸೇರಿ ಸಾಮಾಜಿಕ ನ್ಯಾಯವೆಂದರೆ ಸಮತೆಯ ಸಾಧನೆ ಎಂಬ ಸರ್ವಸಮ್ಮತ ಪರಿಕಲ್ಪನೆಗೆ ದಾರಿ ಮಾಡಿಕೊಡಬಲ್ಲುದು. ಈ ಬಗ್ಗೆ ಚರ್ಚೆ ಆಗಲಿ. ಭಿನ್ನಾಭಿಪ್ರಾಯಗಳು ಹೊರ ಹೊಮ್ಮಲಿ. ಆ ಮೂಲಕ ಸಾಮಾಜಿಕ ನ್ಯಾಯದ ಪ್ರತಿಪಾದಕರು ಯೋಚನೆ ಮಾಡಲಾದರೂ ಸಾಧ್ಯವಾಗಲಿ. ಸಾಮಾಜಿಕ ನ್ಯಾಯದ ಸದ್ಯದ ದೊಡ್ಡ ತೊಂದರೆ ಎಂದರೆ ಇಲ್ಲಿ ಆಲೋಚನೆ ಎಂಬುದೇ ನಿಂತು ಹೋಗಿದೆ. ಇದು ಸಮತೆಯ ಹೊಸ ಕಲ್ಪನೆ ನೀಡಿದ ಲೋಹಿಯಾ ಪರಂಪರೆಗೆ ಮಾಡುವ ಅನ್ಯಾಯ ಮತ್ತು ಅವಮಾನ. ನಮ್ಮಲ್ಲಿ ಕೆಲವರು ಲೋಹಿಯಾ ಅವರೇ ನಮಗಾಗಿ ನಲವತ್ತು ವರ್ಷಗಳ ಹಿಂದೆಯೇ ಎಲ್ಲ ಆಲೋಚನೆ ಮಾಡಿ ಹೋಗಿದ್ದಾರೆ ಎಂದು ನಂಬಿ ಆಲೋಚನೆ ಮಾಡುವುದನ್ನೇ ನಿಲ್ಲಿಸಿ ಬಿಟ್ಟಿದ್ದಾರೆ!

ಹಾಗಾಗಿಯೇ, ಆ ಆಂದೋಲನ ಅಂದು ರೂಪಿಸಿದ ಹುಲಿಗಳು ಈಗ ದೆಹಲಿ ಮತ್ತು ಬೆಂಗಳೂರುಗಳಲ್ಲಿ ಸಿದ್ಧಮಾಡಲಾಗಿರುವ ದೊಡ್ಡ ದೊಡ್ಡ ವೈಭವೋಪೇತ ಬೋನುಗಳಲ್ಲಿ ಸಾಕಿದ ನಾಯಿಗಳಂತೆ, ಪಟ್ಟಭದ್ರ ಹಿತಾಸಕ್ತಿಗಳ ಮುದ್ದು ಪ್ರಾಣಿಗಳಂತೆ ನಮಗೆ ಕಾಣತೊಡಗಿದ್ದಾರೆ. ಇದನ್ನು ಗಮನಿಸಿಯಾದರೂ ನಾವು ಇಂದು ಸಾಮಾಜಿಕ ನ್ಯಾಯ ಕುರಿತು ಹೊಸ ಆಲೋಚನೆಗಳಿಗೆ ತೆರದುಕೊಳ್ಳಬೇಕಿದೆ. ಹೊಸ ಚರ್ಚೆಗಳನ್ನು ಹುಟ್ಟು ಹಾಕಬೇಕಿದೆ. ಇಂತಹ ಸಂಕಲ್ಪ ಇಲ್ಲಿ, ಈ ಜಾತಿ ವಿರೋಧಿ ಹಾಗೂ ಅಂತರ್ಜಾತಿ ವಿವಾಹಿತರ ಸಮ್ಮೇಳನದ ಸಂದರ್ಭದಲ್ಲಿ ಆಗುವುದಾದರೆ ಅದಕ್ಕಿಂತ ಹೆಚ್ಚಿನ ಗೌರವ ಲೋಹಿಯಾ ನೆನಪಿಗೆ ಸಲ್ಲಲಾರದು. ಏಕೆಂದರೆ ಅಂತರ್ಜಾತಿ ವಿವಾಹದ ಹಿಂದೆ ರಮ್ಯ ಪ್ರೇಮ ಮಾತ್ರವಿರದೆ-ಅದು ಇದ್ದೇ ಇರುತ್ತದೆ-ಜಾತಿ ಗಡಿ ದಾಟುವ ಧೈರ್ಯವೂ ಇರುತ್ತದೆ. ಈ ಪ್ರೇಮ ಮತ್ತು ಧೈರ್ಯ ನಮ್ಮಲ್ಲಿ ಜಾತಿ ವ್ಯವಸ್ಥೆ ಯಾವುದರ ದ್ಯೋತಕವಾಗಿದೆಯೋ ಆ ಅಸಮಾನತೆ, ಅನ್ಯಾಯಗಳ ಎಲ್ಲ ರೂಪಗಳನ್ನೂ ತೊಡೆದು ಹಾಕುವ ಸಂಕಲ್ಪವನ್ನು ನಮ್ಮಲ್ಲಿ ಹುಟ್ಟು ಹಾಕುವಂತಾಗಬೇಕು. ಆ ಮೂಲಕ ಐವತ್ತು-ಅರವತ್ತು ವರ್ಷಗಳ ಹಿಂದೆ ಆರಂಭವಾದ ಸಾಮಾಜಿಕ ನ್ಯಾಯದ ಆಂದೋಲನ ಹುಟ್ಟು ಹಾಕಿದ ಹೊಸ ಸಾಮಾಜಿಕ ಚೈತನ್ಯ ಪುನಶ್ಚೇತನಗೊಂಡು ಸಮತೆಯ ಹೊಸ ಆಯಾಮಗಳ ಅನ್ವೇಷಣೆಗೆ ತೊಡಗುವಂತಾಗಲಿ. ಆಗ ಮಾತ್ರ ಈ ಲೋಹಿಯಾ ಜನ್ಮ ಶತಾಬ್ಧಿ ಸಂದರ್ಭದಲ್ಲಿ ನಡೆಯುತ್ತಿರುವ ಲೋಹಿಯಾ ಹೆಸರಿನ ಪತನದಿಂದ ದೂರ ಸರಿದು ಲೋಹಿಯಾ ಹೇಳಿದ್ದ ಕೆಲಸವನ್ನು ಮಾಡಿದ ಕೀರ್ತಿಗೆ ನೀವು ಭಾಜನರಾಗುತ್ತೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ. *

**(ಧ್ವನಿ ಮುದ್ರಣದಿಂದ ಅಕ್ಷರ ರೂಪ ಮತ್ತು ಅನುವಾದ: ಡಿಎಸ್ನೆನ್)**

## ದಾಖಲೆ ನಕ್ಸಲೀಯ ಹುಡುಗ ಲೋಹಿಯಾವಾದಿಯಾದ (ಒಂದು ಹಳೆಯ) ಕಥೆ!

ಭಾರತದ ವಿದ್ವದ್ವಲಯದಲ್ಲಿ ಸುಪರಿಚಿತವಾದ *ಎಕಾನಿಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ*ಯು ತನ್ನ ೨೦೧೦ರ ಅಕ್ಟೋಬರ್ ೨ರ ಸಂಚಿಕೆಯಲ್ಲಿ ಸಮಾಜವಾದಿ ಚಿಂತಕ ಹಾಗೂ ರಾಜಕಾರಣಿ ಡಾ.ರಾಮಮನೋಹರ ಲೋಹಿಯಾ ಕುರಿತಂತೆ(ಬಹುಶಃ ಇವರ ಶತಮಾನೋತ್ಸವ ಸಂದರ್ಭದಲ್ಲಿ) ಹಲವು ವಿಶೇಷ ಲೇಖನಗಳನ್ನೊಳಗೊಂಡ ವಿಭಾಗವೊಂದನ್ನು ಪ್ರಕಟಿಸಿದೆ. ಈ ವಿಶೇಷ ಪುಟಗಳ ಸಂಪಾದಕರು ಯೋಗೇಂದ್ರ ಯಾದವ್. ಇವರು ಲೋಹಿಯೋತ್ತರ ತಲೆಮಾರಿಗೆ ಸೇರಿದ

ಸಮಾಜವಾದಿ ಚಿಂತಕರು. ಅವರು ಸಂಪಾದಕರ ಟಿಪ್ಪಣಿಗಳ ರೂಪದಲ್ಲಿರುವ ತಮ್ಮ ಒಂದು ಲೇಖನದಲ್ಲಿ ಲೋಹಿಯಾ ಅವರು ತಮ್ಮ ಜೀವಿತ ಕಾಲದಲ್ಲಿ ಮಾತ್ರವಲ್ಲದೆ, ಅವರು ನಿಧನರಾದ ಹಲವು ವರ್ಷಗಳ ನಂತರವೂ ಹೇಗೆ ನಮ್ಮ ವಿದ್ವವಲಯದ ಅವಜ್ಞೆಗೆ ಗುರಿಯಾಗಿದ್ದರು ಮತ್ತು ಏಕೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಹಾಗೇ, ಮುಕ್ತ ಮಾರುಕಟ್ಟೆಯ ಜಾಗತೀಕರಣದ ರಾಜಕಾರಣ ಆರಂಭವಾದ ನಂತರ, ಅದನ್ನು ಈ ವಿದ್ವವಲಯ ನಂಬಿದ್ದ ಸಿದ್ಧಾಂತಗಳು ಮತ್ತು ಕಾರ್ಯಕ್ರಮಗಳು ಅದನ್ನು ವಿವರಿಸಲು ಮತ್ತು ಎದುರಿಸಲು ಅಪೂರ್ಣವೆನಿಸಿ ವಿಫಲವಾಗುತ್ತಿರುವಾಗ, ಲೋಹಿಯಾ ಶತಮಾನೋತ್ಸವ ಹುಟ್ಟಿಸಿದ ಉತ್ಸಾಹವೇ ಒಂದು ನೆಪವಾದಂತೆ, ಈಗ ಹೇಗೆ ಲೋಹಿಯಾ ವಿಚಾರ ಮತ್ತು ಕಾರ್ಯಕ್ರಮಗಳ ಬಗ್ಗೆ ದೇಶದ ರಾಕೀಯ ಮತ್ತು ಆರ್ಥಿಕ ಚಿಂತಕರು ಮತ್ತು ತಾತ್ವಿಕರು ಆಸಕ್ತಿ ತಳೆದು ಅವುಗಳ ಮರು ಓದಿಗೆ, ಮರುಪರಿಶೀಲನೆಗೆ ತೊಡಗಿದ್ದಾರೆ ಎಂಬುದನ್ನೂ ಯಾದವ್ ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ.

ಅಷ್ಟೇ ಅಲ್ಲ, ರಾಜಕೀಯ ಮತ್ತು ಆರ್ಥಿಕ ಚಿಂತಕರಲ್ಲದೆ, ಆಧುನಿಕೋತ್ತರವಾದಿ ಸಂಸ್ಕೃತಿ ಚಿಂತಕರೂ ಸೈದ್, ಫ್ಯುಕೋ ಮುಂತಾದ ವಿದ್ವಾಂಸರ ಇತ್ತೀಚಿನ ಚಿಂತನೆಗಳ ಬೀಜ ರೂಪಗಳು ಲೋಹಿಯಾರ ಜಾಗತಿಕ ರಾಜಕಾರಣ ಕುರಿತ ಚಿಂತನೆಗಳಲ್ಲೇ ಇದ್ದುದನ್ನು ಈಗ ಗುರುತಿಸಲರಂಭಿಸಿದ್ದಾರೆ ಎಂಬ ಸೂಚನೆಯನ್ನೂ ನೀಡಿದ್ದಾರೆ. ಉದಾಹರಣೆಗೆ ಖ್ಯಾತ ಸಂಸ್ಕೃತಿ ಚಿಂತಕ ರುಸ್ತುಂ ಭರೂಚ ಮತ್ತು ಜಗದ್ವಿಖ್ಯಾತ ಚಿತ್ರ ಕಲಾವಿದ ಎಂ.ಎಫ್. ಹುಸೇನ್ ಲೋಹಿಯಾರ ಚಿಂತನೆ ಮತ್ತು ರಾಜಕಾರಣಗಳಲ್ಲಿ ಕಂಡ ಅಪರೂಪದ ಮತ್ತು ಅನನ್ಯ ಸಾಂಸ್ಕೃತಿಕ ಒಳನೋಟಗಳನ್ನು ಕುರಿತ ಬರಹಗಳು ಈಗ ಮತ್ತೆ ಕಾಣಿಸತೊಡಗಿವೆ ಎಂಬುದನ್ನೂ ಯಾದವ್ ನಮ್ಮ ಗಮನಕ್ಕೆ ತಂದಿದ್ದಾರೆ.

ಒಟ್ಟಿನಲ್ಲಿ ನೆಹರೂ ರಾಜಕಾರಣದ ವಿವಶತೆ ಮತ್ತು ಮಾರ್ಕ್ಸ್‌ವಾದಿ ಚಿಂತನೆಗಳ ಕ್ರಾಂತಿಕಾರಕತೆಯ ವಿಜೃಂಭಣೆಯ ಆ ದಿಗಳಲ್ಲಿ ಲೋಹಿಯಾರ ಕಟು ನೆಹ್ರೂ ವಿರೋಧಿ ರಾಜಕಾರಣವನ್ನೇ ನೆಪವಾಗಿಟ್ಟುಕೊಂಡು ಅವರ ವ್ಯಕ್ತಿತ್ವದ ಬೇರೆ ಆಯಾಮಗಳನ್ನೂ, ಸೃಜನಶೀಲ ಬೌದ್ಧಿಕ ಕೊಡುಗೆಗಳನ್ನು ನಿರ್ಲಕ್ಷಿಸಿದ್ದ ನಮ್ಮ ಬುದ್ಧಿಜೀವಿ ವರ್ಗದ ಮುಖ್ಯ ವಾಹಿನಿ ಈಗಲಾದರೂ ಈ ಬಗ್ಗೆ ಗಮನ ಹರಿಸಿರುವುದು ಸಂತೋಷದ ವಿಷಯ. ಹಾಗೆ ನೋಡಿದರೆ, ಈ ವಿದ್ವದ್ವಲಯದ ಎಡಪಂಥೀಯ ಚಿಂತಕರಗಿಂತ ಮೊದಲೇ, ಮಾವೋವಾದಿಗಳೂ ಸೇರಿದಂತೆ ಹಲವು ಜನಪರ ಹೋರಾಟಗಳ ಗುಂಪುಗಳು ಲೋಹಿಯಾ ವಿಚಾರಗಳಲ್ಲಿ ಆಸಕ್ತಿ ತಾಳಿದ್ದವು ಎಂಬುದನ್ನೂ ನಾವು ಗಮನಿಸಬೇಕು. ಉದಾಹರಣೆಗೆ, ನೇಪಾಳದ ಮಾವೋವಾದಿ ನಾಯಕ ಪ್ರಚಂಡ ಇತ್ತೀಚೆಗೆ ಲೋಹಿಯಾರಿಂದಲೂ ನಾವು ಕಲಿಯುವುದು ಬಹಳವಿದೆ ಎಂದು ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ.

ಇದರೆಂದೇನೂ ಯಾರೂ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ, ಆಕಸ್ಮಿಕವಾಗಿಯಾದರೂ ಲೋಹಿಯಾ ವಿಚಾರಗಳ ಸಂಪರ್ಕಕಕ್ಕೆ ಬಂದ ಮಾರ್ಕ್ಸ್‌ವಾದಿ 'ಕ್ರಾಂತಿಕಾರಿ'ಗಳು ಲೋಹಿಯಾ ಸಮಾಜವಾದದೆಡೆಗೆ ಹೆಜ್ಜೆ ಹಾಕಿದ ಹಲವು ಉದಾಹರಣೆಗಳನ್ನು ನಾವು ಬಹು ಹಿಂದಿನಿಂದ ನೋಡುತ್ತಾ ಬರುತ್ತಿದ್ದೇವೆ. ಅಂತಹ ಒಂದು ಉದಾಹರಣಯನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಇದು ನಾನು ಮುವ್ವತ್ತು ವರ್ಷಗಳ ಹಿಂದೆ ಸ್ವಲ್ಪ ಕಾಲ ಸಂಪಾದಿಸಿದ ಸಮಾಜವಾದಿ ಮಾಸ ಪತ್ರಿಕೆ 'ಮಾನವ'ದ ೧೯೭೯ರ ನವೆಂಬರ್ ಸಂಚಿಕೆಯಿಂದ ಆಯ್ದ ಸಂದರ್ಶನ. ನಾನು ಆಗ *ಲೋಹಿಯಾ ವಿಚಾರ ಮಂಚದ* ಸಭೆಯೊಂದಕ್ಕಾಗಿ ಹೈದರಾಬಾದ್‌ಗೆ ಹೋಗಿದ್ದಾಗ ಕರ್ನಾಟಕದಿಂದ ಬಂದಿದ್ದ ಪ್ರತಿನಿಧಿಗಳ ಆತಿಥ್ಯಕ್ಕಾಗಿ ಸಂಘಟಕರಿಂದ ನೇಮಕವಾಗಿದ್ದ ಇಂದ್ರಾ ರೆಡ್ಡಿ ಎಂಬ ಯುವಕನೊಡನೆ ನಡೆಸಿದ ಸಂದರ್ಶನವಿದು. ಮುಂದೆ ಈ ಯುವಕ ಆಂಧ್ರದ ಆಗಿನ ಹಲವು ಸಮಾಜವಾದಿಗಳಂತೆಯೇ, ಎನ್.ಟಿ.ರಾಮರಾವ್ ಆರಂಭಿಸಿದ 'ತೆಲುಗು ದೇಸಂ' ಪಕ್ಷ ಸೇರಿ ಅಲ್ಲಿ ದೊಡ್ಡ ನಾಯಕನಾಗಿ ಬೆಳೆದ. ವಿವಿಧ ಖಾತೆಗಳ ಸಚಿವನಾಗಿ ದಕ್ಷತೆಯಿಂದ ಜನಪರವಾದ ಕೆಲಸ ಮಾಡಿದನೆಂದೂ, ಆನಂತರ ಅಕಾಲಿಕ ಮರಣಕ್ಕೆ ತುತ್ತಾದನೆಂದೂ ಕೇಳಿರುವೆ. ಆ ಸಂದರ್ಶನದ ಪೂರ್ಣ ಪಾಠ ಇಂತಿದೆ:

**ಇಂದ್ರಾ ರೆಡ್ಡಿ ಎಂಬ ಹೆಸರು ಆಧ್ರದ ಯುವಜನತೆಯ ಬಂಡಾಯದ ಸಂಕೇತ ಇಪ್ಪತ್ತನಾಲ್ಕು–ಇಪ್ಪತ್ತೈದರ ಈ ತರುಣ ಈಗ ಹೈದರಾಬಾದ್ ನಲ್ಲಿ ಪ್ರೊ.ಕೇಶವರಾವ್ ಜಾಧವ್ ನೇತೃತ್ವದಲ್ಲಿ 'ಲೋಹಿಯಾ ವಿಚಾರ ವೇದಿಕೆ'ಯ ಅಡಿಯಲ್ಲಿ ಯುವಜನರ ಸಂಘಟನೆಯಲ್ಲಿ ತೊಡಗಿದ್ದಾರೆ. ನಕ್ಸಲೀಯ ಚಳುವಳಿಯಿಂದ ಆಕರ್ಷಿತರಾಗಿ ಆಂಧ್ರದಲ್ಲಿ ಆ ಚಳುವಳಿಯ ಪ್ರಮುಖ ಕ್ರಿಯಾಶಕ್ತಿಗಳಲ್ಲಿ ಒಬ್ಬರಾಗಿ ಹೋರಾಡಿ ತುರ್ತು ಪರಿಸ್ಥಿತಿ ಅವಧಿಯಲ್ಲಿ ಪೋಲೀಸರ ಕೈಗೆ ಸಿಕ್ಕಿ ಚಿತ್ರಹಿಂಸೆ ಅನುಭವಿಸಿದ ಈ ಧೀಮಂತ ಯುವಕ ಈಗ ಹೇಳುತ್ತಾರೆ:'ಈ ದೇಶವನ್ನು ಸಮರ್ಪಕವಾಗಿ ಅರ್ಥ ಮಾಡಿಕೊಂಡವರು ಲೋಹಿಯಾ ಒಬ್ಬರೇ ಎಂದು ನನಗನ್ನಿಸುತ್ತಿದೆ ಈಗ' ಮಾನವ ಇತ್ತೀಚೆಗೆ ಹೈದರಾಬಾದ್ ನಲ್ಲಿ ಇಂದ್ರಾ ರೆಡ್ಡಿಯವರನ್ನು ಮಾತನಾಡಿಸಿತು. ಈ ಮಾತುಕತೆಯ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ:**

**ಮಾನವ:** ನೀವು ನಕ್ಸಲೀಯ ಚಳುವಳಿಗೆ ಧುಮುಕಿದ್ದು ಹೇಗೆ?

**ಇಂದ್ರಾ ರೆಡ್ಡಿ:** ನನ್ನ ಶಾಲಾ ದಿನಗಳಲ್ಲಿ ನಡೆದ ಪರಿಶಿಷ್ಟರ ಹಾಸ್ಟೆಲುಗಳಲ್ಲಿ ಕಂಡುಬರುವ ಅನ್ಯಾಯಗಳ ವಿರುದ್ಧದ ಮುಷ್ಕರವೊಂದರಲ್ಲಿ ನಾನು ಭಾಗವಹಿಸಿವುದರೊಂದಿಗೆ ನನ್ನ ಈ ಚಟುವಟಿಕೆಗಳು ಆರಂಭವಾದವು. ಜತೆಗೆ ನನ್ನ ಗೆಳೆಯನೊಬ್ಬ ನಕ್ಸಲೀಯ ಗುಂಪುಗಳಲ್ಲಿ ಒಂದಾಗಿದ್ದ ಚಂದ್ರಪುಲ್ಲಾ ರೆಡ್ಡಿ ಗುಂಪಿನ 'ಕೆಂಪು ವೈಭವ' ಎಂಬ ಪುಸ್ತಕವೊಂದನ್ನು ಓದಲೆಂದು ಕೊಟ್ಟ. ಈ ಪುಸ್ತಕ ನನ್ನನ್ನು ಈ ಚಟುವಟಿಕೆಗಳಲ್ಲಿ ಮುಂದುವರೆಯಲು ಪ್ರೇರೇಪಿಸಿತು ಜೊತೆಗೆ ನಮ್ಮ ಮುಷ್ಕರ ಯಶಸ್ವಿಯಾಗಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸೌಲಭ್ಯಗಳು ಹೆಚ್ಚಾದ ಅಂಶವೂ ಇದಕ್ಕೆ ಉತ್ತೇಜನ ನೀಡಿತು.

**ಮಾ:** ನೀವು ನಕ್ಸಲೀಯ ಚಳುವಳಿಯಲ್ಲಿ ಪಾಲ್ಗೊಂಡಿದ್ದಾಗ, ಈ ಚಳುವಳಿಯ ಯಶಸ್ಸಿನ ಬಗ್ಗೆ ಸಂಪೂರ್ಣ ಭರವಸೆ ಇತ್ತಾ?

**ಇಂ:** ಇದರ ಹಿಂದೆ ನಕ್ಸಲೀಯ ಶಕ್ತಿಗಳಿವೆಯೆಂದು ಕ್ರಮೇಣ ಗೊತ್ತಾಗತೊಡಗಿತಷ್ಟೆ..ನಕ್ಸಲೀಯ ನಾಯಕರು ಸೈದ್ಧಾಂತಿಕ ಶಿಕ್ಷಣದ ಅಂಗವಾಗಿ ಬೋಧಿಸುತ್ತಿದ್ದ ದ್ವಂದ್ವಮಾನ ಭೌತವಾದ, ಮಾನವ ಚರಿತ್ರೆಯ ನಿರೂಪಣೆ, ರಷ್ಯನ್ ಮತ್ತು ಚೀನಾ ಕ್ರಾಂತಿಯ ಪಾಠಗಳು ಇವೆಲ್ಲ ನನ್ನನ್ನು ರೋಮಾಂಚನಗೊಳಿಸುತ್ತಿದ್ದವು. ಆದ್ದರಿಂದ ಆಗ ಏನೋ ದೊಡ್ಡ ಕೆಲಸ ಮಾಡಬೇಕು. ಸಾಧಿಸಬೇಕು ಎಂಬ ಉತ್ಸಾಹ ಇದ್ದಿತು ಎಂದು ಮಾತ್ರ ಹೇಳಬಲ್ಲೆ ಯಶಸ್ಸಿನ ಬಗ್ಗೆ ನಾನೆಂದೂ ಯೋಚನೆ ಮಾಡಿದ ಹಾಗೆ ನೆನಪಿಲ್ಲ.

**ಮಾ:** ಈ ಚಳುವಳಿಯ ಬಗ್ಗೆ ನಿಮ್ಮ ಭ್ರಮನಿರಸನ ಎಂದು ಆರಂಭವಾಯಿತು?

**ಇಂ:** ಭ್ರಮನಿರಸನ ಎಂದೇನೂ ಹೇಳಲಾರೆ. ಈ ಚಳುವಳಿ ಚಂದ್ರಪುಲ್ಲಾ ರೆಡ್ಡಿ ಗುಂಪು, ನಾಗಿರೆಡ್ಡಿ ಗುಂಪು, ಚಾರು ಮಜುಂದಾರ್ ಗುಂಪು, ಲಿನ್ ಷಿಯಾವೋ ಗುಂಪು ಹೀಗೆ ಹತ್ತಾರು ಗುಂಪುಗಳಾಗಿ ಒಡೆಯಲಾರಂಭಿಸಿದ್ದು ನನ್ನನ್ನು ಕಂಗೆಡಿಸಿತು. ಇದೆಲ್ಲ ಮೂಲತಃ ಕೆಲವರ ಬೌದ್ಧಿಕ ತೀಟೆ

ಮಾತ್ರವೇನೋ ಎಂಬ ಅನುಮಾನ ಎದ್ದಿತು. ಶ್ರೀಕಾಕುಲಂ ದಂಗೆ ಇದಕ್ಕೊಂದು ಸಾಕ್ಷಿ. ಪೋಲೀಸರ ಬೇಟೆಗೆ ಸಿಕ್ಕಿದವರು, ನಾಯಕರನ್ನು ನಂಬಿ ಬಂಡೆದ್ದ ಬಡ ರೈತ ಕಾರ್ಮಿಕರು, ಹೆಂಗಸರು ಮತ್ತು ಮಕ್ಕಳು ಮಾತ್ರ. ಪೋಲೀಸರು ತಮ್ಮ ಬಂದೂಕಿನ ತುದಿಯಿಂದ ಬಸುರಿಯರ ಹೊಟ್ಟೆ ಸೀಳಿದ ಚಿತ್ರ ಇನ್ನೂ ನನ್ನ ಕಣ್ಮುಂದೆ ಕುಣಿಯುತ್ತಿದೆ. ಆಗ ಈ ನಾಯಕರು ಅರಣ್ಯಗಳಿಂದ ಕಣ್ಮರೆಯಾಗಿಬಿಟ್ಟರು. ಇಂತಹ ಘಟನೆಗಳು ಯಾರನ್ನು ತಾನೆ ಅಲುಗಡಿಸುವುದಿಲ್ಲ?

**ಮಾ:** ನೀವು ಲೋಹಿಯಾ ತತ್ವಗಳ ಹತ್ತಿರ ಬಂದದ್ದು ಹೇಗೆ?

**ಇಂ:** ತುರ್ತು ಪರಿಸ್ಥಿತಿಯಲ್ಲಿ ನನ್ನನ್ನು ಚಿತ್ರಹಿಂಸೆಗೆ ಒಳಪಡಿಸಿ ನನ್ನಿಂದೇನೂ ರಹಸ್ಯ ಮಾಹಿತಿ ಪಡೆಯಲಾಗದ ಪೋಲೀಸರು ಕೊನೆಗೆ ಇತರ ರಾಜಕೀಯ ಬಂದಿಗಳ ಜತೆ ನನ್ನನ್ನು ದೂಡಿದರು. ಅಲ್ಲಿ ಲೋಹಿಯಾವಾದಿ ಸತ್ಯನಾರಾಯಣ ರೆಡ್ಡಿ ಅವರ ಪರಿಚಯವಾಯಿತು. ಅವರು ಅಲ್ಲಿನ ರಾಜಕೀಯ ಬಂದಿಗಳಿಗೆ ಲೋಹಿಯಾ ಸಿದ್ಧಾಂತಗಳ ಬಗ್ಗೆ ಪ್ರಾಥಮಿಕ ಪಾಠಗಳನ್ನು ಮಾಡುತ್ತಿದ್ದರು. ಲೋಹಿಯಾ ಅವರ 'ಇತಿಹಾಸ ಚಕ್ರ'ದ ಕಲ್ಪನೆ ನನ್ನನ್ನು ಚಿಂತೆಗೆ ಹಚ್ಚಿತು. ನಾನು ಹಿಂದೆ ಕಲಿತ ಮಾರ್ಕ್ಸ್‌ವಾದಿ ಪಾಠಗಳನ್ನೂ ಇದನ್ನೂ ತೂಗಿ ನೋಡತೊಡಗಿದೆ. ಲೋಹಿಯಾ ವಾಸ್ತವ ವಸ್ತುಸ್ಥಿಗೆ ಹತ್ತಿರವಾಗಿದ್ದರು. ರಷ್ಯಾದಲ್ಲಿ ಲೆನಿನ್ ಮಾರ್ಗದರ್ಶನದಲ್ಲಿ ಕಮ್ಯೂನಿಸಂ ಹೊಸ ರೂಪ ಪಡೆದಂತೆ, ಇಂಡಿಯಾದ ಸಂದರ್ಭಕ್ಕೆ ತಕ್ಕಂತೆ ಕಮ್ಯೂನಿಸಂ ಲೋಹಿಯಾ ಚಿಂತನೆಯಲ್ಲಿ ಹೊಸ ರೂಪ ಪಡೆದಿದೆ. ನಿಜವಾದ ಅರ್ಥದಲ್ಲಿ ಲೋಹಿಯಾ ಒಬ್ಬರೇ ಇಂಡಿಯಾದ ಕಮ್ಯೂನಿಸ್ಟ್ ನಾಯಕ ಎಂಬ ಭಾವ ಅವರನ್ನು ಓದುತ್ತಾ ಹೋದಂತೆಲ್ಲ ನನ್ನಲ್ಲಿ ಮೂಡತೊಡಗಿತು

**ಮಾ:** ಕಮ್ಯೂನಿಸ್ಟ್ ಚಳುವಳಿ ಇಲ್ಲಿ ಯಶಸ್ವಿಯಾಗುವುದಿಲ್ಲವೇ?

**ಇ:** ಇದು ಈ ಚಳುವಳಿ ಮುಂದೆ ಕಲಿಯಬಹುದಾದ ಪಾಠಗಳನ್ನು ಅವಲಂಬಿಸಿದೆ. ಜಾತಿಯ ವಾಸ್ತವವನ್ನು, ಅಧಿಕಾರ ವಿಕೇಂದ್ರೀಕರಣದ ಅಗತ್ಯವನ್ನು, ಸೈದ್ಧಾಂತಿಕ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳದ ಹೊರತು, ಕಮ್ಯೂನಿಸ್ಟ್ ಚಳುವಳಿ ಈ ದೇಶದಲ್ಲಿ ಯಶಸ್ವಿಯಾಗಲಾರದು. ಈ ಚಳುವಳಿಗೆ ಮೂಲಭೂತ ಬದಲಾವಣೆಗಳಲ್ಲಿ ನಂಬಿಕೆ ಇದ್ದರೆ, ಅದು ತಾನೆದುರಿಸುವ ಸನ್ನಿವೇಶಗಳಿಂದ ಪಾಠ ಕಲಿಯುತ್ತಾ ಹೋಗುತ್ತದೆ. ಆಗ ಸಹಜವಾಗಿ ಅದು ಲೋಹಿಯಾ ರಾಜಕೀಯ ಪ್ರಣಾಳಿಕೆಯ ಹತ್ತಿರ ಬರತೊಡುಗುತ್ತದೆ. ಆದರೆ ಈ ಚಳುವಳಿಯ ನಾಯಕರು ಅದಕ್ಕೆ ಅವಕಾಶ ಕೊಡುವರಾ ಎಂಬುದು ಮುಖ್ಯ ಪ್ರಶ್ನೆ. ಆದರೆ ಆ ನಾಯಕರೆಲ್ಲಾ ಸಿದ್ಧಾಂತಗಳಲ್ಲಿ ಮುಳುಗಿ ಹೋಗಿದ್ದಾರೆ.

(ಸಂದರ್ಶನ: ಡಿಎಸ್ಸೆನ್) *

## ರಾಜ್ಯ ರಾಜಕೀಯ ಚಿತ್ರ ಪೂರ್ಣಗೊಳಿಸಿದದ ನಮ್ಮ ಅನಂತಮೂರ್ತಿಯವರು!

ವಿರೋಧ ಪಕ್ಷದ ಮುಖಂಡರಾದ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿ ಯಡಿಯೂರಪ್ಪನವರು ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಮಾಡಿದ್ದಾರೆಂದು ದಾಖಲೆಗಳನ್ನು ಬಿಡುಗಡೆ ಮಾಡಿದರು. ಜನ ಬೆಚ್ಚಿ ಬಿದ್ದರು. ನಂತರದಲ್ಲೇ ಕುಮಾರಸ್ವಾಮಿಯವರ ಕುಟುಂಬದವರು ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಮಾಡಿದ್ದಾರೆಂದು ಬಿಜೆಪಿ ಮುಖಂಡರು ಕಿರು ಹೊತ್ತಿಗೆ ಬಿಡುಗಡೆ ಮಾಡಿದರು. ಜನ ಮತ್ತೆ ಬೆಚ್ಚಿಬಿದ್ದರು.

ಇದರಿಂದ ಹೌಹಾರಿದ ಕುಮಾರಸ್ವಾಮಿಯವರು ಪ್ರತಿಭಟಿಸಿ, ಸಿಬಿಐ ತನಿಖೆಗಾಗಿ ಒತ್ತಾಯಿಸಿದರು. ಸರ್ಕಾರದ ಮನ ಕರಗದಿದ್ದಾಗ, ತಮಗೆ ಮಧುಮೇಹ ಇತ್ಯಾದಿ ಇತ್ಯಾದಿ ದೈಹಿಕ ಬೇನೆಗಳಿದ್ದರೂ ಅಮರಣಾಂತ ಉಪವಾಸ ಕೂರುವುದಾಗಿ ಎಚ್ಚರಿಸಿದರು. ಇದಕ್ಕೂ ಸರ್ಕಾರದ ಮನ ಕರಗದಿದ್ದಾಗ ಸಕಲ ಪ್ರಚಾರ ವೈಭವಗಳೊಂದಿಗೆ ಉಪವಾಸ ಕೂತೇಬಿಟ್ಟರು. ಆದರೆ ಈ ಉಪವಾಸ ಒಂದು ದಿನ ದಾಟುತ್ತಿದ್ದಂತೆಯೇ, ಕುಮಾರಸ್ವಾಮಿಯವರ ಆರೋಗ್ಯ ಬಿಗಡಾಯಿಸುತ್ತಿದೆ ಎಂಬ ಸುದ್ದಿ ಮತ್ತು ಅದರ ಪರಿಣಾಮಗಳನ್ನು ಊಹಿಸಿ ಚಿಂತಿತರಾದ ಬಿಜೆಪಿ ಮುಖಂಡರ ಮನ ಕರಗಿತು. ಅವರು ಓಡೋಡಿ ಬಂದು, ರಾಜಕೀಯದಲ್ಲಿ ಈ ಆಪಾದನೆ–ಪ್ರತಿ ಆಪಾದನೆ ಮಾಮೂಲು, ಉಪವಾಸದಿಂದ ಎದ್ದೇಳಿ ಎಂದು ಮನವಿ ಮಾಡಿದರು. ಒಂದು ದಿನದ ದೀರ್ಘ ಉಪವಾಸದಿಂದ ಮತ್ತು ತಮ್ಮ ಪಕ್ಷದ ಮುಖಂಡರ ಹಾಗೂ ಕಾರ್ಯಕರ್ತರ ಮನವಿಗಳ ಒತ್ತಡಕ್ಕೆ ಸಿಕ್ಕಿ ಬಳಲಿದ್ದ ಕುಮಾರಸ್ವಾಮಿಯವರೂ ಇದಕ್ಕೆ ಸ್ಪಂದಿಸಲು ಸಿದ್ಧರಾದರು. ಜನ ಮೂರ್ಛೆ ಹೋಗುವುದೊಂದೇ ಬಾಕಿ!

ಇದನ್ನೆಲ್ಲ ನೋಡುತ್ತಿದ್ದ ರಾಜ್ಯದ ಸಾರ್ವಜನಿಕ ಬುದ್ಧಿಜೀವಿಗಳ ಮುಖಂಡರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಯು.ಆರ್. ಅನಂತಮೂರ್ತಿಯವರು ಜಾಗೃತರಾದರು. ರಾಜ್ಯದ ಜನ ಮೂರ್ಛೆ ಹೋದರೆ ಗತಿಯೇನು ಎಂದು ಚಿಂತಿತರಾಗಿ ತಮ್ಮ ಸಾರ್ವಜನಿಕ ಜವಾಬ್ದಾರಿ ನಿರ್ವಹಿಸಲು ಅವರೂ ಓಡೋಡಿ ಬಂದರು. ಕುಮಾರಸ್ವಾಮಿಯವರಲ್ಲಿ ತಾವು ಇತ್ತೀಚಿನ ದಿನಗಳಲ್ಲಿ ಕಂಡುಕೊಂಡ ನಾಯಕತ್ವದ ಗುಣಗಳ ವಿಶ್ಲೇಷಣೆಯೊಂದನ್ನು ಮಂಡಿಸಿ, ಅವರನ್ನೂ, ಅವರ ಅಭಿಮಾನಿಗಳನ್ನೂ ಸಾಂತ್ವನಗೊಳಿಸಿದರು. ಉಪವಾಸ ಮುಕ್ತಾಯದ ಸಂಕೇತವಾಗಿ ಹಣ್ಣಿನ ರಸ ನೀಡಿದರು. ತಕ್ಷಣವೇ ಅನಂತಮೂರ್ತಿಯವರಲ್ಲಿ ಪಿತೃಸಮಾನರನ್ನು ಕಂಡುಕೊಂಡ ಕುಮಾರಸ್ವಾಮಿಯವರು ಪಿತೃವಾತ್ಸಲ್ಯದಿಂದ ಅದನ್ನು ಗುಟಕರಿಸಿ, ವಿಶ್ರಾಂತಿಗಾಗಿ ತಮ್ಮ ಖಾಸಗಿ ಅತಿಥಿ ಗೃಹಕ್ಕೆ(ಮನೆಗೆ ಅಲ್ಲ!) ತೆರಳಿದರು.

ಇಲ್ಲಿಗೆ ಎಲ್ಲವೂ ಶಾಂತವಾಯಿತು. ಜೊತೆಗೇ, ಕರ್ನಾಟಕ ರಾಜಕೀಯ ಚಿತ್ರ ಪೂರ್ಣವಾದಂತಾಯಿತು. ಜನತೆಗೂ, ಈ ರಾಜ್ಯ ಸದ್ಯಕ್ಕೆ ಭ್ರಷ್ಟ ರಾಜಕಾರಣದಿಂದ ಏಕೆ ಮುಕ್ತವಾಗಲಾರದೆಂಬುದೂ ಸ್ಪಷ್ಟವಾಯಿತು. ಎಲ್ಲವೂ ಈಗ ನಿಸೂರು! ಇನ್ನು ಏನೂ ಗೊಂದಲವಿಲ್ಲ! ಜನ ಇನ್ನು ಬೆಚ್ಚಿ ಬೀಳುವುದಿಲ್ಲ! ಮೂರ್ಛೆ ಹೋಗುವುದಂತೂ ದೂರದ ಮಾತು!! *

**–ಡಿ.ಎಸ್.ನಾಗಭೂಷಣ**

**ಇತ್ತೀಚೆಗೆ ನಿಧನರಾದ ಹಿರಿಯ ಸಮಾಜವಾದಿ ಹೋರಾಟಗಾರ ಹಾಗೂ ಮಾಜಿ ಶಾಸಕ ಹುಬ್ಬಳ್ಳಿಯ ವಕೀಲ ನೀಲಗಂಗಯ್ಯ ಪೂಜಾರರ ನೆನಪಿಗೆ *ನವ ಮಾನವ ಮಾಸಿಕ*ದ ಬಳಗ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.**

## ಆದಿವಾಸಿ ಬದುಕು: ಮುಗ್ಧ ಸೋಲಿಗರ ಲೋಕಕ್ಕೆ (ಅ)ನಾಗರಿಕರ ದಾಳಿ...

*ಅಪೂರ್ವ ಡಿ'ಸಿಲ್ವ, ಚಾಮರಾಜ ನಗರ

***ಕಕ್ಕೆ ಹೂವಿಗೆ ಒಲಿದ***
***ಕವಲು ನಾಮಕೆ ಒಲಿದ***
***ಸೋಲಿಗರ ಬಾಲೆಗೆ ಒಲಿದ ರಂಗಭಾವ***

...ಹೀಗೆ ಜಾತಿಯನ್ನು ಮೀರಿ ಸೋಲಿಗರ ಬಾಲೆಗೆ ಮನಸೋತ ಬಿಳಿಗಿರಿ ರಂಗಪ್ಪ ಸೋಲಿಗರಿಗೆ ರಂಗಭಾವನಾದ. ಪ್ರೀತಿಸಿ ಮದುವೆಯಾದ ರಂಗಭಾವನ ನೆನಪಿನಲ್ಲಿಯೋ, ಹರೆಯದ ಉತ್ಸಾಹದಲ್ಲಿಯೋ, ಈಗಲೂ ತಮ್ಮ ರೊಟ್ಟಿ ಹಬ್ಬದಲ್ಲಿ ಪ್ರಾಯದ ಯುವಕರು ಗೊರು ಗೊರಕನ ಹಾಡು ಹೇಳುತ್ತಾ, ಕುಣಿಯುತ್ತಾ, ಸೋಲಿಗ ಹುಡುಗಿಯನ್ನು ಪ್ರೀತಿಯ ಕಣ್ಣುಗಳಲ್ಲಿ ನೋಡುತ್ತಾರೆ. ಅವಳೂ ಒಲಿದು ಕಣ್ಣವೆಗಳಲ್ಲಿ ಸನ್ನೆ ಮಾಡಿಬಿಟ್ಟರೆ ಇಬ್ಬರೂ ಆ ರಾತ್ರಿಯಲ್ಲಿ, ಕಾಡ ಕಣಿವೆಯಲ್ಲಿ ಮರೆಯಾಗುತ್ತಾರೆ. ಚಾಮರಾಜನಗರದ ಬಿಳಿರಿರಂಗನ ಬೆಟ್ಟದ ಸುತ್ತಮುತ್ತಲೂ ಇಂಥ ಸೋಲಿಗರ ಮುಗ್ಧಲೋಕ, ಸುಮಾರು ಅರವತ್ತು ಪೋಡುಗಳನ್ನು ಹೊಂದಿದೆ. ಸೀಗೆಬೆಟ್ಟ ಪೋಡು, ಎರಕನ ಗದ್ದೆ ಪೋಡು, ಪುರಾಣಿ ಪೋಡು, ಮುತ್ತಗದ ಗದ್ದೆ ಪೋಡು, ಗೊಂಬೆಗಲ್ಲು ಪೋಡು ಇತ್ಯಾದಿ. ಇವರುಗಳು ಕುಲಗಳ ಮೂಲಕ ವಿಂಗಡಣೆಯಾಗಿದ್ದಾರೆ. ಇದಕ್ಕೆ ಎಲ್ಲೆಗಳಿವೆ. ಬಳೆಯರ ಕುಲ, ಬೆಳ್ಳಿಯರ ಕುಲ, ಹಾಲರ ಕುಲ, ಸೆಳಕಿರು ಕುಲ, ಸೂರಿರು ಕುಲ, ತೆನಿಯರ ಕುಲ. ಈ ಕುಲಗಳಿಗೆ ಹಬ್ಬಿ, ಮಾರಮ್ಮ, ವೀರು, ಕಲ್ಲುಡಿ, ಕ್ಯಾತೆರಾಯ, ನೀರ್ದುರ್ಗಿ ಹೀಗೆ ಬೇರೆ ಬೇರೆ ದೇವರುಗಳಿವೆ. ಅರಣ್ಯದೊಳಗೆ ೪೦೦ಕ್ಕೂ ಮಿಕ್ಕೀ ಇವರ ಪವಿತ್ರ ಸ್ಥಳಗಳಿವೆ, ಇವರಲ್ಲಿ ಈಗಲೂ ತಮ್ಮಲ್ಲೇ ಕೂರಿಸಿ ಹೆರಿಗೆ ಮಾಡಿ ಕೊಳ್ಳುವ ಪದ್ದತಿ ಇದ್ದು, ಸಾವಿರಾರು ಹೆರಿಗೆ ಮಾಡಿಸಿದ ಕಣ್ಣೇರಿ ಕಾಲೋನಿಯ ಕೇತಮ್ಮನಿಗೆ ಈ ಬಾರಿಯ ಸ್ಫೂರ್ತಿಧಾಮದ ಬೋಧಿವರ್ಧನ ಪ್ರಶಸ್ತಿ ಲಭಿಸಿತ್ತು. ಈ ಕೇತಮ್ಮನಂತಹ ವಯಸ್ಸಾದ ಮಹಿಳೆಯರು ಜನಪದ ರಾಶಿಯನ್ನೇ ತಮ್ಮ ಗಂಟಲಲ್ಲಿ ತುಂಬಿಕೊಂಡಿದ್ದಾರೆ. ಹಾಡುಕೆಗಳೆಂದು ಇಡೀ ದಿನ ಬೇಕಾದರೂ ಹಾಡುತ್ತಾರೆ.

ಬೋಧಿವರ್ಧನ ಪ್ರಶಸ್ತಿ ಸ್ವೀಕರಿಸಿದ ಕೇತಮ್ಮನಿಗೆ ತಾನು ಮಾಡಿದ ಸಾವಿರಾರು ಹೆರಿಗೆಗೆ ಈ ಪ್ರಶಸ್ತಿ ಲಭಿಸಿದೆ ಎಂದರೆ ಅವರಿಗೆ ಇದೆಲ್ಲಾ ಸೋಜಿಗವಾಗಿ ಕಾಣುತ್ತದೆ. ಬರಿಗಾಲಲ್ಲಿ ಮಾಸಲೂ ಸೀರೆಯಲ್ಲೇ ಪ್ರಶಸ್ತಿ ಸ್ವೀಕರಿಸಲು ಬಂದ ಕೇತಮ್ಮನನ್ನು ನೋಡಿ ಯು.ಆರ್. ಅನಂತಮೂರ್ತಿಯವರು ಈ ಪ್ರಶಸ್ತಿ ಅರ್ಹವಾದವರಿಗೆ ಸಿಕ್ಕಿದೆ ಎಂದು ಸಂತಸಗೊಂಡಿದ್ದರು. ಇತ್ತೀಚೆಗೆ ನಾನು ಕನ್ನೇರಿ ಕಾಲೋನಿಗೆ ಹೋದಾಗ ಕೇತಮ್ಮ ನಾಲ್ಕು ಅಡಿಯ ಪುಟ್ಟ ಗುಡಿಸಲಲ್ಲಿ ಬೆಂಕಿ ಕಾಯಿಸುತ್ತಾ ಕೂತಿತ್ತು. "ಅಜ್ಜಿ, ಪ್ರಶಸ್ತಿ ಬಂದಿದ್ದ ದುಡ್ಡು ಏನ್ಮಾಡಿದ್ರಿ ಖುಷಿ ಆಯ್ತ?" ಅಂತೆಲ್ಲಾ ಕೇಳಿದೆ. ಅಜ್ಜಿ ಮಾತ್ರ ಮೌನವಾಗಿತ್ತು. ಅಲ್ಲಿ ಕಾಡಲ್ಲಿ ಬೆಳೆದಿದ್ದ ಕರಿಬೇವಿನ ಸಸಿ ಕೊಡಿ ಎಂದು ಅವರ ಸೊಸೆಗೆ ಕೇಳಿದೆ. ಆಗ ಅಜ್ಜಿ "ಕಿತ್ತುಕೊಡು" ಎಂದು ಮೊದಲ ಸಲ ಮಾತನಾಡಿತು. 'ಬರ್ತೀನಿ' ಅಜ್ಜಿ ಎಂದಾಗಲೊಮ್ಮೆ "ಹೋಗಿ ಬನ್ನಿ ನಮಸ್ಕಾರ" ಎಂದು ಎರಡನೇ ಸಲ ಮಾತನಾಡಿತು. ಒಂದು



ಕಾಲಕ್ಕೆ ವೀರಪ್ಪನ್ ಉಪಟಳಕ್ಕೆ ಎಸ್.ಟಿ.ಎಫ್. ದೌರ್ಜನ್ಯಕ್ಕೆ ಒಳಗಾದ ಸೋಲಿಗರು ಪೊಲೀಸರೆಂದರೆ, ಪಟ್ಟಣದವರೆಂದರೆ ಈಗಲೂ ಹೆದರುತ್ತಾರೆ. ಆದರೆ ಇಲ್ಲಿನ ಯುವಕರಿಗೆ ಟಿ.ವಿ. ಮಾಧ್ಯಮ ಯಾವ ರೀತಿ ಹಾಳು ಮಾಡಿದೆ ಎಂದರೆ ಪಟ್ಟಣದವರೆಂದರೆ ಸುಖ-ಭೋಗಗಳ ಜೀವನ; ಅದನ್ನು ನಾವು ಅನುಸರಿಸಬೇಕು ಎಂಬ ನಿಲುವಿಗೆ ಬಂದು ಬಿಟ್ಟಿದ್ದಾರೆ. ದಿನವೆಲ್ಲಾ ಕುಡಿದು ತೂರಾಡುತ್ತಿರುತ್ತಾರೆ. ಲೈಂಗಿಕತೆಗಿದ್ದ ಎಲ್ಲೆ ಹಾದಿ ತಪ್ಪಿಬಿಟ್ಟಿದೆ, ಬರಿ ಟಿ.ವಿ.ಯೇ ಯುವಕರಲ್ಲಿ ಇಷ್ಟು ಬದಲಾವಣೆ ಮಾಡಿದರೆ, ಇನ್ನೂ ಇವರನ್ನು ಕಾಡಿನಿಂದ ದೂಕಿ ನಾಡಿಗೆ ದೂಡಿದರೆ ಇವರ ಮನಸ್ಸು ಇದ್ದಷ್ಟೂ ಒಡೆದು ಹೋಗುತ್ತದೆ.

ಪೂರ್ಣಚಂದ್ರ ತೇಜಸ್ವಿಯವರ 'ವಿಸ್ಮಯ ವಿಶ್ವ'ದಲ್ಲಿ ಫೆಸಿಫಿಕ್ ಸಾಗರ ಮಧ್ಯದ ನೌರು ದ್ವೀಪ ಹೇಗೆ ನಾಗರೀಕತೆಗೆ ಬಲಿಯಾಯಿತೆಂಬ ಕಥೆಯಿದೆ. ನೌರು ದ್ವೀಪದಲ್ಲಿ ಸೋಲಿಗರಂತೆ ಅಮಾಯಕ ಆದಿವಾಸಿಗಳು ತಮ್ಮ ಪಾಡಿಗೆ ನೆಮ್ಮದಿಯಿಂದ ಇರುತ್ತಾರೆ. ಆದರೆ ಅಲ್ಲಿ ವಿಜ್ಞಾನಿಯೊಬ್ಬನಿಗೆ ಪಾಸ್ಪೇಟ್ ಅಗಾಧ ಪ್ರಮಾಣದಲ್ಲಿ ಸಿಗುತ್ತದೆ ಎಂದು ತಿಳಿದುಬರುತ್ತದೆ. ಸಾವಿರಾರು ಕೋಟಿಗಳಲ್ಲಿ ಆಸ್ಟ್ರೇಲಿಯ, ಜಪಾನ್ ಮುಂತಾದ ದೇಶಗಳು ಅದಕ್ಕೆ ಮುಗಿಬೀಳುತ್ತದೆ. ಕಡೆಗೆ ನೌರು ದ್ವೀಪದಲ್ಲಿ ಸ್ವತಂತ್ರ ಸರ್ಕಾರ ರಚನೆಯಾಗಿ ಅದು ಈ ಫಾಸ್ಪೇಟ್‌ನ್ನು ರಫ್ತು ಮಾಡಿ ಸಾವಿರಾರು ಕೋಟಿ ಆದಾಯ ಗಳಿಸಲು ಪ್ರಾರಂಭಿಸುತ್ತದೆ. ಅದು ಈ ಹಣದಿಂದ ಪ್ರಜೆಗಳಿಗೆ ಆಹಾರ ವಸತಿ ಮೂಲಭೂತ ಅಗತ್ಯಗಳಿಗೆಂದು ಸಬ್ಸಿಡಿ ನೀಡಲಾರಂಭಿಸುತ್ತದೆ. ದುಡಿದು ಕಟ್ಟುಮಸ್ತಾಗಿ ನೆಮ್ಮದಿಯಾಗಿದ್ದ ಆದಿವಾಸಿಗಳು ಕೆಲವೇ ವರ್ಷಗಳಲ್ಲಿ ನಾಗರೀಕರಾಗಿ ಸೋಮಾರಿಗಳಾಗುತ್ತಾರೆ. ಚಿಕ್ಕವಯಸ್ಸಿಗೆ ಸಕ್ಕರೆ ಖಾಯಿಲೆ, ಬೊಜ್ಜು ಇತ್ಯಾದಿ ಹೊಸ ಹೊಸ ರೋಗಗಳು ಬಾಧಿಸಲು ಪ್ರಾರಂಭಿಸುತ್ತವೆ. ಸರ್ಕಾರಕ್ಕೆ ಆರ್ಥಿಕ ಯೋಜನೆಗಳ ತಿಳುವಳಿಕೆ ಇಲ್ಲದ್ದರಿಂದ, ಪಾಸ್ಪೇಟ್ ನಿಕ್ಷೇಪ ಬರಿದಾಗುತ್ತಿದ್ದಂತೆ ಅದು ದಿವಾಳಿಯೇಳತೊಡಗುತ್ತದೆ.

ಒಟ್ಟಿನಲ್ಲಿ ಆಧುನಿಕತೆ ಎಂಬುದು ಸುಖ ಭೋಗವಾಗಿ ನಾಶಕ್ಕೆ ಕಾರಣವಾಗುತ್ತದೆಂಬುದಕ್ಕೆ ನೌರು ದ್ವೀಪವೇ ಉದಾಹರಣೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಇತ್ತೀಚಿನ ತಲೆಮಾರು ಶಿಕ್ಷಣಕ್ಕೆ

ಒತ್ತುಕೊಟ್ಟು ಮಕ್ಕಳನ್ನು ಓದಿಸುತ್ತಿದೆ. ಅವರು ಸಹಜವಾಗಿ ಕಾಡಿನಿಂದ ನಾಡಿಗೆ ಬರುವುದಾದರೆ, ಅದಕ್ಕೆ ಯಾರ ಅಡ್ಡಿಯೂ ಇಲ್ಲ. ಬದಲಾವಣೆ ಸಹಜ ಧರ್ಮ.ಈಗ ಇವರ ನಂಬಿಕೆಗೆ, ಆಚಾರ ವಿಚಾರಗಳಿಗೆ, ಔಷಧಿ ಜ್ಞಾನಕ್ಕೆ, ಹಾಡುಕೆಗಳಿಗೆ, ಪ್ರಾಣಿ ಪಕ್ಷಿಗಳ, ಕಾಡುಮರಗಳ ಜ್ಞಾನಕ್ಕೆ ನಾಗರೀಕರೆನಿಸಿಕೊಂಡ ಅನಾಗರೀಕರು ಬೆಂಕಿಯಿಡಲು ಹೋಗುತ್ತಿದ್ದಾರೆ. ಹುಲಿ ಯೋಜನೆಯ ನೆಪದಲ್ಲಿ ಕಾಡಿನಿಂದ ಹೊರಹಾಕಲು ಹುನ್ನಾರ ನಡೆಸಿದ್ದಾರೆ. ಹುಲಿ ಯೋಜನೆಗೆ ಈಗಾಗಲೇ ಸರ್ಕಾರದಿಂದ ನೋಟಿಫಿಕೇಷನ್ ಆಗಿದೆ ಆದ್ದರಿಂದ ಕಾಡಿನಿಂದ ಎಲ್ಲಿ ನಮಗೆ ದೂರ ಒಗೆದು ಹೊರದೂಡಿಬಿಡುತ್ತಾರೋ ಎಂದು ತಲ್ಲಣಗೊಂಡಿದ್ದಾರೆ. ಹುಲಿ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರದ ಮಟ್ಟದಲ್ಲಿ *ನ್ಯಾಷನಲ್ ಟೈಗರ್ ಕನ್ಸರ್ವೇಷನ್ ಅಥಾರಿಟಿ* ಇದೆ. ಅಲ್ಲಿರುವ ಸದಸ್ಯರಲ್ಲೇ ಕೆಲವರಿಗೆ ಹುಲಿ ಯೋಜನೆಗೆ ಒಪ್ಪಿಗೆ ಇರಲಿಲ್ಲ, ಆದರೂ ಕೆಲವು ಎ.ಸಿ. ರೂಮಿನ ಪರಿಸರವಾದಿಗಳಿಂದ ಇದಕ್ಕೆ ಅನುಮೋದನೆ ಸಿಕ್ಕಿದೆ. ಈ ಯೋಜನೆಗೆ ಸೋಲಿಗರ ವಿರೋಧ ಇದೆಯಾದರೂ, ತಮ್ಮನ್ನು ಕಾಡೆಂಬ ಕರುಳು ಬಳ್ಳಿಯಿಂದ ಬೇರ್ಪಡಿಸಿಬಿಡುತ್ತಾರೆ ಎಂಬ ಕಾರಣಕ್ಕೆ, ಈಗ ಕೋರ್ಟ್‌ಗಳು ಹುಲಿ ಯೋಜನೆಯ ಪರವಾಗಿಯೇ ಇರುವುದರಿಂದ, ಅಲ್ಲಿ ಮೊರೆ ಹೋಗುವುದು ದುಸ್ಸಾಹಸ ಎಂದು ತಿಳಿದಿದ್ದಾರೆ. ಈಗ 'ನಮ್ಮನ್ನು ಹುಲಿಯೋಜನೆಯ ಭಾಗವಾಗಿ ತೆಗೆದುಕೊಳ್ಳಿ. ಹುಲಿಗಳ ರಕ್ಷಣೆಗೆ ನಾವೂ ಬದ್ಧ. ಆದರೆ ಕಾಡಿನಿಂದ ಹೊರ ದೂಡಬೇಡಿ' ಎಂಬ ನಿಲುವಿಗೆ ಬಂದಿದ್ದಾರೆ. ಈ ನಿಟ್ಟಿನಲ್ಲಿ ಸಮುದಾಯ ಆಧಾರಿತ ಅರಣ್ಯ ಯೋಜನೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಸಂಘಟಿತರಾಗಿದ್ದಾರೆ.

ಯಾವುದೇ ಯೋಜನೆ ಕಾರ್ಯಗತಗೊಳಿಸಬೇಕಾದರೂ ಮೊದಲು *ಗ್ರಾಮಸಭೆ* ನಡೆಸಬೇಕು. ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರ ಗಮನಕ್ಕೆ ತರಬೇಕು ಎಂಬ ತಿಳುವಳಿಕೆಯೇ ಸರ್ಕಾರಗಳಿಗಿಲ್ಲ. ವಿಕೇಂದ್ರೀಕೃತ ವ್ಯವಸ್ಥೆ, ಗಾಂಧೀಜಿಯ ಗ್ರಾಮ ಸ್ವರಾಜ್ಯ, ಇವೆಲ್ಲಾ ಪ್ರಭುತ್ವಕ್ಕೆ ಸವಕಲು ಪದಗಳಂತೆ ಕಾಣುತ್ತಿವೆ. ಬಿಳಿಗಿರಿರಂಗನ ಬೆಟ್ಟದ ಕಾಡುಗಳಲ್ಲಿ ನಕ್ಸಲ್‌ಬಾರಿ ಚಳುವಳಿ ಇಲ್ಲ. ಆದರೆ ಬಡ ಸೋಲಿಗರನ್ನು ಎತ್ತಂಗಡಿ ಮಾಡುವ ಮೂಲಕ ಸರ್ಕಾರವೇ ಪರೋಕ್ಷವಾಗಿ ಇಂಥ ಚಳುವಳಿಯನ್ನು ಬರಮಾಡಿಕೊಳ್ಳುತ್ತಿದೆ. ಆದರೆ ಒತ್ತಾಯಪೂರ್ವಕವಾಗಿ ಅವರನ್ನು ಕಾಡಿನಿಂದ ಹೊರ ಹಾಕಿದರೆ ವಯಸ್ಸಾದ ಸೋಲಿಗರ ಗತಿಯೇನು? ಹಣದ ಉಳಿತಾಯ ಮಾಡುವ ಆರ್ಥಿಕ ನಾಡಿನ ತಿಳಿವಳಿಕೆ ಇನ್ನೂ ಸೋಲಿಗರಿಗೆ ಬಂದಿಲ್ಲ. ಇತ್ತೀಚೆಗೆ ಆಗುತ್ತಿರುವ ಕೃತಕ ಬದಲಾವಣೆಗಳಲ್ಲಿ ಕಾಡಿನಲ್ಲೂ ಅನೇಕ ವ್ಯತ್ಯಾಸಗಳು ಆಗುತ್ತಿವೆ. ಹುಲ್ಲುಗಾವಲುಗಳು ನಶಿಸಿ ಹೋಗುತ್ತಿವೆ. ಲಾಂಟನಾ ವ್ಯಾಪಕವಾಗಿ ಬೆಳೆಯುತ್ತಿದೆ. ಸುತ್ತಮುತ್ತಲ ಪ್ರದೇಶಗಳಲ್ಲಿ ಗಣಿಗಾರಿಕೆ, ಅರಣ್ಯದೊಳಗೇ ಮರಳು ಗಣಿಗಾರಿಗೆ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಜಿಂಕೆಗಳು ಇರಲು ಸಾಧ್ಯವೆ? ಜಿಂಕೆಗಳು ಇಲ್ಲದ ಮೇಲೆ ಹುಲಿಗಳು ಇರಲು ಸಾಧ್ಯವೇ?

ಸರ್ಕಾರದ ಮಟ್ಟದಲ್ಲಿ ಅರಣ್ಯ ಸಂಶೋಧನಾ ಕೇಂದ್ರಗಳಿದ್ದು ಅವುಗಳಿಂದ ಜನತೆಗೆ ಯಾವ ಮಟ್ಟಿನ ಉಪಯೋಗವಾಗಿದೆ ಎಂಬುದೇ ತಿಳಿಯುತ್ತಿಲ್ಲ. ಸೋಲಿಗರ ಮಕ್ಕಳಿಗಾಗಿ ಆಶ್ರಮ ಶಾಲೆ, ವಸತಿ ಶಾಲೆ ಇದ್ದರೂ ಸಾಕಷ್ಟು ಉಪಾಧ್ಯಾಯರಿಲ್ಲ. ಉಪಾಧ್ಯಾಯರಲ್ಲಿ ಬಹಳಷ್ಟು ಮಂದಿಗೆ ಶೈಕ್ಷಣಿಕ ಅರ್ಹತೆಗಳೇ ಇಲ್ಲ. ಸರ್ಕಾರದ ಇಂಥ ಬಹಳಷ್ಟು ಲೋಪಗಳಿದ್ದು; ಇದನ್ನೆಲ್ಲ ಸರಿಪಡಿಸುವುದು ಬಿಟ್ಟು, ಇದ್ದಕ್ಕಿದ್ದಂತೆ ಕಾಡಿನಿಂದ ಹೊರಹೋಗಿ ನಾಗರೀಕರಾಗಿ ಬಾಳಿ ಎಂದು ಹೇಳುವುದು ಅನಾಗರೀಕ ವರ್ತನೆಯಲ್ಲವೇ? ಇಂಥವರ ಲೋಕವನ್ನು ನಾಗರೀಕವೆನ್ನಬಹುದೇ? ಅಥವಾ ಕಾಡು ಸೋಲಿಗರಿಂದ ನಾವೂ ಕಲಿಯುವುದಿದೆ;ಮೇಲು ಕೀಳೆನ್ನದ, ಭಿನ್ನ ಭೇದವಿಲ್ಲದ ಸೋಲಿಗ ಸಂಸ್ಕೃತಿ ನಿಜವಾದ ನಾಗರೀಕ ಲೋಕ ಎಂದು ಹೇಳುವ ವಿನಯ ನಮಗಿದೆಯೇ? *

# ಲೋಹಿಯಾ ತತ್ವ ಚಿಂತನೆಯ ವಾಸ್ತುಶಿಲ್ಪ

*ಡಾ.ರಾಜಾರಾಂ ತೋಳ್ಪಾಡಿ



**ರಾ**ಮಮನೋಹರ ಲೋಹಿಯಾ ನಿಸ್ಸಂದೇಹವಾಗಿ ಆಧುನಿಕ ಭಾರತ ಸೃಷ್ಟಿಸಿದ ಸೃಷ್ಟಿಶೀಲ ಚಿಂತಕರಲ್ಲಿ ಒಬ್ಬರು. ಭಾರತದ ರಾಷ್ಟ್ರೀಯ ಹೋರಾಟದ ಕ್ರಿಯಾಶೀಲ ನಾಯಕರಾಗಿ ಹಾಗೂ ಸಮಾಜವಾದಿ ಆಂದೋಲನದ ಪ್ರಮುಖ ಚಿಂತಕರಾಗಿ ಅವರ ಸ್ಥಾನ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದು. ತಮ್ಮ ೫೭ ವರುಷಗಳ ಘಟನಾ ನಿಬಿಡ ರಾಜಕೀಯ ಬದುಕಿನಲ್ಲಿ ಅವರು ಭಾರತ ಒಂದು ಸಮಾಜವಾಗಿ ಹಾಗೂ ಸಾಂಸ್ಕೃತಿಕ ಅಸ್ಮಿತೆಯಾಗಿ ಎದುರಿಸಿದ ಬಹುತೇಕ ಸಮಸ್ಯೆಗಳಿಗೆ ಅತ್ಯಂತ ಕ್ರಿಯಾಶೀಲರಾಗಿ ಪ್ರತಿಸ್ಪಂದಿಸಿದ್ದಾರೆ.

ವಸಾಹತುಶಾಹಿ ಆಳ್ವಿಕೆಯ ಸಾಂಸ್ಕೃತಿಕ ಹಾಗೂ ಬೌದ್ಧಿಕ ಯಜಮಾನಿಕೆಯಂತಹ ನಿರ್ದಿಷ್ಟ ಸಮಸ್ಯೆಯಿಂದ ಪ್ರಾರಂಭಿಸಿ ಆಧುನಿಕತೆ ನಿರ್ಮಿಸಿದ ಜ್ಞಾನವಿನ್ಯಾಸಗಳ ವ್ಯಾಪಕ ಸಮಸ್ಯೆಯ ತನಕ ಅವರ ಚಿಂತನೆಯ ವಿವಿಧ ಆಯಾಮಗಳು ಹರಡಿಕೊಂಡಿವೆ. ಚರಿತ್ರೆ, ಅರ್ಥಶಾಸ್ತ್ರ, ರಾಜಕೀಯ ಸಿದ್ಧಾಂತ,

ಭಾರತದ ಚರಿತ್ರೆ, ಸಂಸ್ಕೃತಿ ಹಾಗೂ ನಾಗರಿಕತೆಗಳಲ್ಲಿ ನೆಲೆಯೂರಿಸುವ ಹಂಬಲ, ಸ್ವವಿಮರ್ಶೆ ಹಾಗೂ ಅನ್ವಯವನ್ನು ಸಂಸ್ಕೃತಿ ಜಿಜ್ಞಾಸೆ, ಪರಿಸರ ಚಿಂತನೆ, ಸೌಂದರ್ಯ ಮೀಮಾಂಸೆ, ಕಲೆ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅವರ ಪ್ರೌಢ, ಪಾಂಡಿತ್ಯಪೂರ್ಣ ಹಾಗೂ ಸೃಜನಶೀಲ ಪ್ರತಿಫಲನಗಳು ಅವರ ಚಿಂತನೆಯ ಸ್ವರೂಪಕ್ಕೆ ವ್ಯಾಪಕತೆ ಹಾಗೂ ಆಳವನ್ನು ಒದಗಿಸಿವೆ. ತಮ್ಮ ವಿಮರ್ಶಾತ್ಮಕ ರಾಷ್ಟ್ರೀಯ ದೃಷ್ಟಿ, ಮೂಲಜಿಜ್ಞಾಸಿಕ ಪ್ರಜಾಪ್ರಭುತ್ವೀಯ ಧೋರಣೆ ಹಾಗೂ ಸಂಸ್ಕೃತಿ ನಿಷ್ಠ ಸಮಾಜವಾದದ ಪರಿಕಲ್ಪನೆಗಳಿಂದ ಲೋಹಿಯಾ ಆಧುನಿಕ ಭಾರತದ ಬೌದ್ಧಿಕ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಲೋಹಿಯಾ ಇಪ್ಪತ್ತನೆಯ ಶತಮಾನದ ಭಾರತದಲ್ಲಿ ಸಂಭವಿಸಿದ ಎರಡು ಪ್ರಮುಖ ವಿದ್ಯಮಾನಗಳ ಉತ್ಪತ್ತಿ. ಭಾರತದಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ರಾಷ್ಟ್ರೀಯ ಹೋರಾಟ ಹಾಗೂ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿಕಸನ ಹೊಂದಿದ ಹೊಸ ಜಗತ್ತು ಹಾಗೂ ಹೊಸ ಸಮಾಜಗಳ ಆಕಾಂಕ್ಷೆಗಳನ್ನು ಪ್ರತಿಪಾದಿಸಿದ ಸಮಾಜವಾದಿ ಆಂದೋಲನ, ಇವುಲೋಹಿಯಾರನ್ನು ನಿರಂತರವಾಗಿ ಪ್ರಚೋದಿಸಿದ, ಪ್ರಭಾವಿಸಿದ ಹಾಗೂ ನಿರ್ದೇಶಿಸಿದ ವಿದ್ಯಮಾನಗಳು. ತಮ್ಮ ಕ್ರಿಯಾಶೀಲ ಬದುಕಿನಲ್ಲಿ ಲೋಹಿಯಾ ತಳೆದ ಎಲ್ಲಾ ನಿಲುವುಗಳು, ತೋರಿಸಿದ ಎಲ್ಲಾ ಒಲವುಗಳು, ಹಾಕಿಕೊಂಡ ಎಲ್ಲಾ ಕಾರ್ಯಕ್ರಮಗಳು ಹಾಗೂ ನಡೆಸಿದ ಎಲ್ಲಾ ಹೋರಾಟಗಳು ನೇರವಾಗಿ ಅಥವಾ ಪರೋಕ್ಷವಾಗಿ ಗಾಂಧೀಜಿಯವರ ನೇತೃತ್ವದ ರಾಷ್ಟ್ರೀಯ ಹೋರಾಟ ಹಾಗೂ ಕನಸುಗಾರಿಕೆಯ ಸಮಾಜವಾದಿ ಆಂದೋಲನಗಳ ದ್ವಂದ್ವಾತ್ಮಕ ಕರ್ಷಣೆಯಿಂದ ಹೊರಹೊಮ್ಮುತ್ತವೆ. ಭಾರತದಲ್ಲಿ ಕಾಂಗ್ರೆಸ್‌ನಿಂದ ಭಿನ್ನವಾಗಿ ಹಾಗೂಮಾರ್ಕ್ಸ್‌ವಾದಕ್ಕಿಂತ ಬೇರೆಯಾಗಿ ಸಮಾಜವಾದವನ್ನು ಕಟ್ಟಬೇಕು, ಭಾರತದ ಸಮಾಜವಾದ ಗಾಂಧಿಚಿಂತನೆಯ ಮರುವ್ಯಾಖ್ಯಾನದಲ್ಲಿ ಪುನರ್ ನಿರೂಪಿತವಾಗಬೇಕು, ಸಮಾಜವಾದ ಜನರ ನೈತಿಕ ಸಂಘರ್ಷದ ನೆಲೆಯಿಂದ ಮೂಡಿ ಬರಬೇಕು ಹಾಗೂ

ಸಮಾಜವಾದಕ್ಕೆ ಚಾರಿತ್ರಿಕ ನಿರ್ದಿಷ್ಟತೆ ಹಾಗೂ ಸಾಂಸ್ಕೃತಿಕ ಅನನ್ಯತೆ ಲಭ್ಯವಾಗಬೇಕು ಎಂದು ಪ್ರತಿಪಾದಿಸಿದ ಲೋಹಿಯಾ, ತಮ್ಮ ಜೀವನದುದ್ದಕ್ಕೂ ಈ ಪ್ರತಿಪಾದನೆಯ ವಿವಿಧ ಆಯಾಮಗಳನ್ನು ಅನ್ವೇಷಿಸುತ್ತಾ, ಗುರುತಿಸುತ್ತಾ ಹಾಗೂ ನಿರೂಪಿಸುತ್ತಾ ಮುನ್ನಡೆದರು. ತಮ್ಮ ಸಂಸ್ಕೃತಿ ನಿಷ್ಠ ಚರಿತ್ರಬದ್ಧ ಸಮಾಜವಾದದ ರೂಪುರೇಷೆಗಳನ್ನು ವಿಷದೀಕರಿಸುವ ಪ್ರಯತ್ನದಲ್ಲಿ ಅವರು ಸಾಧಾರಣವಾಗಿ ರಾಜಕೀಯ ಮುತ್ಸದ್ದಿಯೊಬ್ಬ ಗಮನಿಸದೆ ಇರುವ ಅನೇಕ ಸಂಗತಿಗಳನ್ನು ಗಮನಿಸಿ ಹಾಗೂ ಅವುಗಳ ಕುರಿತು ತನ್ನ ಸಂವೇದನಾಶೀಲ ನಿಲುವನ್ನು ಪ್ರಸ್ತುತಪಡಿಸಿದರು. ಹಾಗಾಗಿ ಸಮಾಜವಾದದ 'ಯೋಜನೆ' ಲೋಹಿಯಾರವರಿಗೆ ಕೇವಲ ಒಂದು ರಾಜಕೀಯ ಕಾರ್ಯಕ್ರಮವಾಗಿರದೆ ಒಂದು ವ್ಯಾಪಕವಾದ ಸಾಂಸ್ಕೃತಿಕ ಹುಡುಕಾಟವಾಗಿತ್ತು. ಆದ್ದರಿಂದಲೇ ಅವರು ಚರಿತ್ರೆ, ಪುರಾಣ, ಭಾಷೆ, ಸಂಸ್ಕೃತಿ, ಸಾಹಿತ್ಯ ಹಾಗೂ ಸೌಂದರ್ಯ ಮೀಮಾಂಸೆಗಳ ಅನೇಕಾನೇಕ ವಿಷಯಗಳಿಗೆ ತಮ್ಮನ್ನು ತೆರೆದಿಟ್ಟುಕೊಂಡು ಅವುಗಳ ಕುರಿತು ತಮ್ಮ ವ್ಯಾಖ್ಯಾನಗಳನ್ನು ಮುಂದಿಡುತ್ತಾ ಬಂದಿದ್ದಾರೆ. ತಮ್ಮ ಬಿಡುವಿಲ್ಲದ ರಾಜಕೀಯ ಪರಿಶ್ರಮದ ನಡುವೆ ಈ ವಿಷಯಗಳ ಕುರಿತು ಚಿಂತನೆ ನಡೆಸಿದ್ದಾರೆ. ಹಾಗಾಗಿಯೇ ಅವರ ಸಮಾಜವಾದದ ಕನಸುಗಾರಿಕೆಯಲ್ಲಿ ರಾಜಕೀಯ ಸಿದ್ಧಾಂತಗಳ ವಿಮರ್ಶೆ, ಚರಿತ್ರಾ ತತ್ವಗಳ ಜಿಜ್ಞಾಸೆ, ಪೌರಾಣಿಕ ಕಲ್ಪನೆಗಳ ವಿಮರ್ಶೆ, ಕಲೆ ಹಾಗೂ ಸಾಹಿತ್ಯಗಳ ಕುರಿತು ಚಿಂತನ – ಮಂಥನ ನಿರಂತರವಾಗಿ ನಡೆದಿದೆ. ಆಳವಾದ 'ಸ್ವ'ದ ಪರಿಕಲ್ಪನೆ, ಸ್ವವನ್ನು ಒಳಗೊಳ್ಳುವ ಪ್ರಯತ್ನ, ಇವೆಲ್ಲವೂ ಲೋಹಿಯಾರ ರಾಜಕೀಯ ಚಿಂತನೆಯಲ್ಲಿ ಹಾಗೂ ಅವರ ಸಮಾಜವಾದದ ಕನಸುಗಾರಿಕೆಯಲ್ಲಿ ದಟ್ಟವಾಗಿ ಕಾಣಸಿಗುತ್ತವೆ.

ಆದರೆ ಸ್ವಾತಂತ್ರ್ಯನಂತರದ ಭಾರತದ ಸಾಂಸ್ಥಿಕ–ಬೌದ್ಧಿಕ ವಲಯ ಲೋಹಿಯಾರನ್ನು ಹಾಗೂ ಅವರು ಇಂದಿನ ನಮ್ಮ ಅನೇಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸಿದ ವೈಖರಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿದಂತೆ ಕಾಣುತ್ತದೆ. ಲೋಹಿಯಾ ತಮ್ಮ ಸ್ವತಂತ್ರ ಧೋರಣೆಯ ಚಿಂತನೆ ಮತ್ತು ಕಾರ್ಯಕ್ರಮಗಳ ಮೂಲಕ ಇಂದಿಗೂ ಸಮಕಾಲೀನವಾಗಿ ಉಳಿದರೂ, ಅನೇಕ ಮಹತ್ವದ ಸಮಸ್ಯೆಗಳಿಗೆ ಹಾಗೂ ಪ್ರಶ್ನೆಗಳಿಗೆ ಎದುರಾಗಿ ಮೂಲ ಜಿಜ್ಞಾಸಿಕ ಚಿಂತನೆಯನ್ನು ನಡೆಸಿದರೂ, ಅವರ ವಿಚಾರಗಳು ನಮ್ಮ ದೇಶದ ಬೌದ್ಧಿಕ ಮುಖ್ಯಧಾರೆಯಲ್ಲಿ ಯಾವ ಸ್ಥಾನವನ್ನು ಪಡೆದುಕೊಂಡಿಲ್ಲ. ಒಂದು ರೀತಿಯಲ್ಲಿ ನೋಡಿದರೆ ಲೋಹಿಯಾರ ಬಗ್ಗೆ ಎರಡು ವಿಪರೀತದ ಧೋರಣೆಗಳು ನಮಗೆ ಕಾಣಸಿಗುತ್ತವೆ. ಭಾರತದ ಸಮಾಜವಾದಿ ಆಂದೋಲನದ ನೆನಪುಗಳನ್ನು ತನ್ನೊಡನೆ ಪೋಷಿಸಿಕೊಂಡು ಬಂದ ಲೋಹಿಯಾ ಆರಾಧಕರ ಗುಂಪು ಒಂದು ಕಡೆಯಾದರೆ, ಲೋಹಿಯಾರವರ ರಾಜಕೀಯ ಕಾರ್ಯಾಚರಣೆಯನ್ನಷ್ಟೇ ಗಮನಿಸಿ ಅವರ ವಿಚಾರಗಳ ಮಹತ್ವವನ್ನು ಅಲ್ಲಗಳೆಯುವ ಗುಂಪು ಇನ್ನೊಂದು ಕಡೆ. ಈ ಎರಡು ಗುಂಪುಗಳು ಲೋಹಿಯಾರ ಬರವಣಿಗೆಗಳನ್ನು ಗಂಭೀರವಾಗಿ ಪರಿಗಣಿಸಿ ಅವರು ನಡೆಸಿದ ಚಿಂತನೆ ಹಾಗೂ ಕಾರ್ಯಾಚರಣೆಗಳನ್ನು ಒಂದು ವ್ಯಾಪಕ ಪರಿಪ್ರೇಕ್ಷದಲ್ಲಿಟ್ಟು ವಿಮರ್ಶಿಸುವ ಕೆಲಸವನ್ನು ಮಾಡುವುದಿಲ್ಲ. ಲೋಹಿಯಾರನ್ನು ಸರಿಸಾಟಿಯಿಲ್ಲದ ಅಪ್ರತಿಮ ಚಿಂತಕನೆಂದು ಲೋಹಿಯಾ ಆರಾಧಕರ ಗುಂಪು ಭಾವಿಸಿದರೆ, ಆತ ಸಮಾಜವಾದಿ ಆಂದೋಲನವನ್ನು ಒಡೆದು ಹಾಕಿದ ಒಬ್ಬ ವಿಕ್ಷಿಪ್ತ ಮನೋಭಾವದ ಜಗಳಗಂಟ ನಾಯಕನೆಂದು ಇನ್ನೊಂದು ಗುಂಪು ಆರೋಪಿಸುತ್ತದೆ. ಈ ಎರಡು ದೃಷ್ಟಿಕೋನಗಳು ಒಂದನ್ನೊಂದು ಸಂಧಿಸುವ ಅಥವಾ ಒಂದರ ಜೊತೆ ಇನ್ನೊಂದು ಸಂವಾದಿಸುವ ಬದಲಾಗಿ ಪರಸ್ಪರ ಢಿಕ್ಕಿ ಹೊಡೆದು ತಮ್ಮ ಮೂಗಿನ ನೇರದ ಸತ್ಯವನ್ನಷ್ಟೇ ಕಾಣಬಯಸುತ್ತವೆ. ಇದೆಲ್ಲದರ ಒಟ್ಟು ಪರಿಣಾಮವೆಂದರೆ ಲೋಹಿಯಾರ ಬರಹಗಳ ಹಾಗೂ ಈ ಬರಹಗಳಲ್ಲಿ ಕಂಡುಬರುವ ವಿಚಾರಗಳ ಸಂವೇದನಾಶೀಲ ಜಿಜ್ಞಾಸೆಯ ಸಂಪೂರ್ಣ ಗೈರುಹಾಜರಿ. ಇದು ಒಂದು ಅತ್ಯಂತ ದುರದೃಷ್ಟಕರವಾದ ಸಂಗತಿ. ಈ ಕಾರಣದಿಂದಲೇ ತನ್ನ ಕಾಲದ ಅತ್ಯಂತ ಮಹತ್ವದ ಪ್ರಶ್ನೆಗಳನ್ನು ಎತ್ತಿದ ಲೋಹಿಯಾ ನಮ್ಮ ಇಂದಿನ ಕಾಲಕ್ಕೆ ಎಲ್ಲಿ? ಎಷ್ಟು? ಮತ್ತು ಹೇಗೆ? ಪ್ರಸ್ತುತರಾಗುತ್ತಾರೆ ಎನ್ನುವ ಜಿಜ್ಞಾಸೆಯನ್ನು ನಡೆಸಲು ಬೇಕಾದ ಲೋಹಿಯಾ ಪಾಂಡಿತ್ಯದ ಕೊರತೆ ಎದ್ದು ಕಾಣಿಸುತ್ತದೆ. ಇಂದು ನಮ್ಮನ್ನು ಬಾಧಿಸುತ್ತಿರುವ ಅನೇಕ ಬಹುಮುಖ್ಯವಾದ ಸಮಸ್ಯೆಗಳ ಸಂಕೀರ್ಣ ಸೆಲೆಗಳನ್ನು ಲೋಹಿಯಾ ತಮ್ಮ ಕಾಲದ ಪರಿಮಿತಿಯಲ್ಲಿ ಸಾಕಷ್ಟು ಸೂಕ್ಷ್ಮತೆಯಲ್ಲಿ ಮನಗಂಡಿದ್ದರು ಎನ್ನುವ ಸಂಗತಿ ನಮ್ಮ ಅರಿವಿನಲ್ಲಿ ಇರುವಂತೆ ಕಾಣುವುದಿಲ್ಲ. ಇಂದಿನ ಭಾರತದ ಪ್ರಜಾತಂತ್ರ, ಅಭಿವೃದ್ಧಿ, ಪರಿಸರ, ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಲೋಹಿಯಾ ತುಂಬಾ ಎಚ್ಚರದಿಂದ, ಪ್ರೌಢಿಮೆಯಿಂದ ಹಾಗೂ ಸಂಯಮದಿಂದ ಪ್ರತಿಕ್ರಿಯಿಸಿದರು ಎನ್ನುವ ಸಂಗತಿ ಈ ದೇಶದಲ್ಲಿ ನಡೆಯುತ್ತಿರುವ ಯಾವುದೇ ಬೌದ್ಧಿಕ ಚರ್ಚೆಯಲ್ಲಿ ಸಾಂದರ್ಭಿಕವಾಗಿಯೂ ಪ್ರಸ್ತಾಪಿಸಲ್ಪಡುವುದಿಲ್ಲ. ಹಾಗಾಗಿ

**ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಭಾರತದ ರಾಜಕಾರಣದ ಪರಿಪ್ರೇಕ್ಷದಲ್ಲಿ ಭಾರತದ ಸಮಾಜವನ್ನು ಅಮೂಲಾಗ್ರವಾಗಿ ಪರಿವರ್ತಿಸಿ ಸಮಾನತೆಯ ನೆಲೆಯ ಹೊಸ ಸಮಾಜದ ಕನಸನ್ನು ಕಂಡ ಚಿಂತಕರ ಒಂದು ಪರಂಪರೆಯೇ ಲೋಹಿಯಾರ ಜೊತೆಗಿದೆ. ಸ್ವತ: ಲೋಹಿಯಾ ಭಾರತದ ಸಮಾಜವಾದಿ ಆಂದೋಲನದ ಅನೇಕ ನಾಯಕರುಗಳಲ್ಲಿ ಒಬ್ಬರಾಗಿದ್ದರು. ತಾವು ಕಟ್ಟಿ ಬೆಳೆಸಿದ ಸಮಾಜವಾದಿ ಆಂದೋಲನದ ಇತರ ಅನೇಕ ನಾಯಕರುಗಳ ಜೊತೆಗೆ ಅವರಿಗೆ ಸಹಮತ ಹಾಗೂ ಭಿನ್ನ ಮತಗಳಿದ್ದವು. ತಮ್ಮ ಸಮಕಾಲೀನ ಚಿಂತಕ ಗೆಳೆಯರೊಂದಿಗೆ ಲೋಹಿಯಾರ ಬೌದ್ಧಿಕ ಸಂವಾದ ಯಾವ ರೀತಿಯದ್ದಾಗಿತ್ತು ಹಾಗೂ ಈ ಸಂವಾದ– ಸಮಾಲೋಚನೆಗಳು ಹೇಗೆ ಲೋಹಿಯಾರ ಚಿಂತನೆಯನ್ನು ರೂಪಿಸಿದವು ಎನ್ನುವುದರ ಕುರಿತು ನಾವು ಗಮನ ಹರಿಸಬೇಕಾಗುತ್ತದೆ.**

ಲೋಹಿಯಾರ ಬಗ್ಗೆ ನಾವು ತಳೆದಿರುವ ನಿರ್ಲಕ್ಷ್ಯ ನಮ್ಮ ಬೌದ್ಧಿಕ ಅಡಿಯಾಳುತನದ ಅಥವಾ ದಿವಾಳಿಕೋರತನದ ಸಂಕೇತವಾಗಿದೆ. ಲೋಹಿಯಾರನ್ನು ದೇವತ್ವಕ್ಕೆ ಏರಿಸುವ ಅವರ ಅನುಯಾಯಿಗಳು ಈ ಬೌದ್ಧಿಕ ದಿವಾಳಿಕೋರತನದಿಂದ ಹೊರತಾಗಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಚಿಂತಕರ ಹಾಗೂ ಚಿಂತನ ಪರಂಪರೆಗಳ ವಿಮರ್ಶೆಯ ಬೌದ್ಧಿಕ ಕ್ರಿಯೆಯಲ್ಲಿ ಎರಡು ಪ್ರಮುಖವಾದ ಅಂಶಗಳು ನಮ್ಮ ಗಮನದಲ್ಲಿ ಸದಾ ಇರಬೇಕಾದದ್ದು. ಯಾವನೇ ಒಬ್ಬ ಚಿಂತಕ ತನ್ನ ದೇಶ–ಕಾಲಗಳ ನಿರ್ದಿಷ್ಟ ಸನ್ನಿವೇಶದಲ್ಲಿ ವ್ಯವಹರಿಸುತ್ತಿರುತ್ತಾನೆ. ಹಾಗಾಗಿ ದೇಶ–ಕಾಲಗಳ ನಿರ್ದಿಷ್ಟ ಒತ್ತಾಯಗಳು ಹಾಗೂ ಪರಿಮಿತಿಗಳು ಆತನ ಚಿಂತನೆ ಹಾಗೂ ಕಾರ್ಯ ಪ್ರಪಂಚವನ್ನು ರೂಪಿಸುತ್ತವೆ. ಆದ್ದರಿಂದ ತನ್ನ ದೇಶ–ಕಾಲಗಳ ಆಕಾಂಕ್ಷೆ ಹಾಗೂ ಆತಂಕಗಳನ್ನು ಆತ ತನ್ನ ಚಿಂತನೆಯಲ್ಲಿ ಎಷ್ಟು ಸಮರ್ಪಕವಾಗಿ ಪರಿಭಾವಿಸಿದ್ದಾನೆ ಮತ್ತು ಅವುಗಳಿಗೆ ಎಷ್ಟು ಕ್ರಿಯಾತ್ಮಕವಾಗಿ ಪ್ರತಿಸ್ಪಂದಿಸಿದ್ದಾನೆ ಎನ್ನುವುದು ಮುಖ್ಯವಾಗುತ್ತದೆ. ಜೊತೆಯಲ್ಲಿಯೇ ಆತನ ಚಿಂತನೆ ಹಾಗೂ ಸಾಧನೆಗಳು ಒಂದು ಸಾರ್ವಕಾಲಿಕ ಅಥವಾ ಸಾರ್ವತ್ರಿಕ ಪರಿಪ್ರೇಕ್ಷದಲ್ಲಿ ಯಾವ ಸ್ಥಾನಮಾನಗಳನ್ನು ಪಡೆದುಕೊಳ್ಳುತ್ತವೆ ಎನ್ನುವುದು ಮುಖ್ಯವಾಗುತ್ತದೆ. ಲೋಹಿಯಾ ಕುರಿತಾದ ನಮ್ಮ ಈ ಸದ್ಯದ ಜಿಜ್ಞಾಸೆಯಲ್ಲಿ ಈ ಎರಡೂ ಅಂಶಗಳಿಗೆ ಎಚ್ಚರವಾಗಿರಬೇಕಾದ ಅವಶ್ಯಕತೆಯಿದೆ. ಇಲ್ಲವಾದಲ್ಲಿ ಲೋಹಿಯಾರನ್ನು ಒಬ್ಬ ಚಿಂತಕರಾಗಿ ಹಾಗೂ ರಾಜಕೀಯ ಮುತ್ಸದ್ದಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಮತ್ತು ಒಂದು ಸಮಂಜಸವಾದ ತಾತ್ವಿಕ ಚೌಕಟ್ಟಿನಲ್ಲಿ ಅವರ ವಿಚಾರಗಳನ್ನು ಹಾಗೂ ಅವುಗಳ ಪರಿಣಾಮಗಳನ್ನು ಇಟ್ಟುನೋಡುವಲ್ಲಿ ನಾವು ಅಸಮರ್ಥರಾಗುತ್ತೇವೆ. ಹಾಗಾಗಿ ಇಂದಿನ ನಮ್ಮ ಬದಲಾದ ಸಂದರ್ಭದಲ್ಲಿ ಲೋಹಿಯಾ ಕುರಿತಾದ ಜಿಜ್ಞಾಸೆ ಈ ಕೆಳಗಿನ ಅಂಶಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.

ಮೊದಲನೆಯದಾಗಿ, ಲೋಹಿಯಾರವರ ವೈಯಕ್ತಿಕ ಬದುಕಿನ ನಿರ್ದಿಷ್ಟ ಘಟನೆಗಳು ಹಾಗೂ ಸನ್ನಿವೇಶಗಳ ಆಧಾರದಲ್ಲಿ ಅವರ ವ್ಯಕ್ತಿತ್ವದ ರೂಪುಗೊಳ್ಳುವಿಕೆಯಲ್ಲಿ ಪ್ರಧಾನವಾದ ಪಾತ್ರಗಳನ್ನು ವಹಿಸಿದ ತಾತ್ವಿಕ ಪ್ರೇರಣೆಗಳು ಹಾಗೂ ಧಾರ್ಮಿಕ ನೆಲೆಗಳ ಒಂದು ಅವಲೋಕನ ಅಥವಾ ಲೋಹಿಯಾರ ಒಂದು ಸಂಕ್ಷಿಪ್ತ ಬೌದ್ಧಿಕ ಜೀವನ ವೃತ್ತಾಂತ ನಮ್ಮ ಅರಿವಿನಲ್ಲಿರಬೇಕಾಗುತ್ತದೆ. ಇಲ್ಲವಾದಲ್ಲಿ ಲೋಹಿಯಾರನ್ನು ಗಾಂಧಿ ಮತ್ತು ಮಾರ್ಕ್ಸ್‌ರಿಂದ ಮಾತ್ರ ಪ್ರಭಾವವನ್ನು ಪಡೆದ ಒಬ್ಬ ಚಿಂತಕನೆಂದು ನಾವು ಒರಟಾಗಿ ಗ್ರಹಿಸುವ ಸಾಧ್ಯತೆಯಿದೆ. ಅವರ ಅತ್ಯಂತ ಭಾವಪೂರ್ಣ ಜೀವನ ವೃತ್ತಾಂತದಲ್ಲಿ ಅವರು ತಮ್ಮ ತಂದೆಯಿಂದ ಪಡೆದುಕೊಂಡ ಭಾವನಾತ್ಮಕ ರಾಷ್ಟ್ರೀಯತೆ, ತಮ್ಮ ಜರ್ಮನಿ ವಾಸದಲ್ಲಿ ಗಳಿಸಿಕೊಂಡ ನಾಗರಿಕ ಹಕ್ಕುಗಳ ಕಲ್ಪನೆಯ ನೆಲೆಯಿಂದ ಹೊರಹೊಮ್ಮುವ ಕ್ರಾಂತಿಕಾರಿ ಪ್ರಜಾಪ್ರಭುತದ ಕಲ್ಪನೆ ಹಾಗೂ ಪೆರಿಯಾರ್ ಮತ್ತು ಅಂಬೇಡ್ಕರ್‌ರ ಜೊತೆಗಿನ ಅವರ ಸಂವಾದದಲ್ಲಿ ಅವರು ಕಂಡುಕೊಂಡ ಸಮಾಜ ಪರಿವರ್ತನೆಯದೃಷ್ಟಿಕೋನ ನಮ್ಮ ಗಮನಕ್ಕೆ ಬಾರದೇ ಹೋಗುವ ಸಂಭವವಿದೆ.

ಎರಡನೆಯದಾಗಿ, ಲೋಹಿಯಾ ಭಾರತದ ರಾಜಕಾರಣವನ್ನು ಪ್ರವೇಶಿಸಿದ ಕಾಲಘಟ್ಟ ಹಾಗೂ ಒಂದು ಕಾಲಾವಧಿಯಲ್ಲಿ ಅವರು ಭಾರತದ ರಾಜಕಾರಣದಲ್ಲಿ ಸಾಧಿಸಲು ಯತ್ನಿಸಿದ ಮಧ್ಯಪ್ರವೇಶಿಕೆಯ ತಾತ್ವಿಕ ರಾಜಕೀಯ ಸನ್ನಿವೇಶದ ವಿವಿಧ ಮಗ್ಗುಲುಗಳ ಅರಿವು ನಮಗೆ ಇರಬೇಕಾಗುತ್ತದೆ. ಅದಿಲ್ಲವಾದಲ್ಲಿ ಲೋಹಿಯಾರವರ ಯಾವುದೋ ಒಂದು ಸಾಂದರ್ಭಿಕ ನಿಲುವನ್ನು ಅಥವಾ ರಾಜಕೀಯ ನಡೆ–ನುಡಿಯನ್ನು ನಾವು ಅವರ ಖಡಾಖಂಡಿತವಾದ ತಾತ್ವಿಕ ದೃಷ್ಟಿಯೆಂದು ಪರಿಭಾವಿಸಿ ಅದನ್ನು ಅದರ ಪ್ರತ್ಯೇಕತೆಯಲ್ಲಿ ಮಾತ್ರ ಗ್ರಹಿಸುವ ಸಾಧ್ಯತೆಯಿದೆ. ರಾಜಕೀಯ ತುರ್ತು ಹಾಗೂ ಸಾಂದರ್ಭಿಕತೆಯ ನಿರ್ದಿಷ್ಟತೆಯಲ್ಲಿ ವ್ಯಸ್ತರಾದ ಲೋಹಿಯಾರ ಚಿಂತನೆಯ ವಿವಿಧ ಆಯಾಮಗಳ ಸಹ–ಸಂಬಂಧಗಳನ್ನು ಗುರುತಿಸಿ ಆ ವಿಚಾರಗಳನ್ನು ಅವುಗಳ ಸಾಂದರ್ಭಿಕತೆ ಹಾಗೂ ಸಾರ್ವಕಾಲಿಕತೆಯ ನೆಲೆಯಲ್ಲಿ ಒಟ್ಟಾಗಿ ನೋಡಿದಾಗ ಮಾತ್ರ ಅವರ ಚಿಂತನೆ ಹಾಗೂ ಕಾರ್ಯಪ್ರಪಂಚದ ಸಮಗ್ರ ಪರಿಚಯ ನಮಗಾಗಲು ಸಾಧ್ಯ. ಹಾಗಾಗಿ ಲೋಹಿಯಾರ ಸಾರ್ವಜನಿಕ ಬದುಕಿನ ನಿರ್ದಿಷ್ಟ ಕಾಲಘಟ್ಟಗಳಲ್ಲಿ ಅವರ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಅಭಿವೃದ್ಧಿ, ಸಾಮಾಜಿಕ ಪರಿವರ್ತನೆ ಹಾಗೂ ಸಮಾನತೆಗಳ ಕುರಿತು ನಡೆಸಿದ ಚಿಂತನೆಗಳನ್ನು ಇಡಿಯಾಗಿ ಹಾಗೂ ಸಹ–ಸಂಬಂಧಗಳಲ್ಲಿ ನೋಡಬೇಕಾಗಿದೆ. ಅವರು ಒಂದು ನಿರ್ದಿಷ್ಟ ಸ್ವರೂಪದ ಭಾವನಾತ್ಮಕ ರಾಷ್ಟ್ರೀಯತೆ, ಕ್ರಾಂತಿಕಾರಿ ಪ್ರಜಾಪ್ರಭುತ್ವ ಹಾಗೂ ಸಂಸ್ಕೃತಿ ಬದ್ಧ ಸಮಾಜವಾದದ ಕಲ್ಪನೆಗಳನ್ನು ಯಾವ ಬಗೆಯಾದ ತಾತ್ವಿಕ ಜೋಡಣೆಯಲ್ಲಿ ಪರಿಭಾವಿಸಿದರು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಗಾಂಧಿ ನಾಯಕತ್ವದ ಸ್ವಾತಂತ್ರ್ಯ ಹೋರಾಟ, ನಾಗರಿಕ ಸ್ವಾತಂತ್ರ್ಯದ ನೆಲೆಯ ಪ್ರಜಾಪ್ರಭುತ್ವ ಹಾಗೂ ಸ್ವಾಭಿವ್ಯಕ್ತಿಯ ನೆಲೆಯ ಸಮಾಜವಾದ ಇವುಗಳ ಸಂಯೋಜನೆ ಅವರ ಚಿಂತನೆಯಲ್ಲಿ ಹೇಗೆ ನಡೆದಿದೆ ಮತ್ತು ಅವುಗಳು ಯಾವ ಬಗೆಯಾದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ನಿಲುವುಗಳನ್ನು ಪ್ರತಿನಿಧಿಸುತ್ತವೆ ಎನ್ನುವುದನ್ನು ತಿಳಿಯಬೇಕಾಗಿದೆ. ಒಂದು ಅರ್ಥದಲ್ಲಿ ದಾರ್ಶನಿಕ ಲೋಹಿಯಾ ಮತ್ತು ರಾಜಕಾರಣಿ ಲೋಹಿಯಾರ ನಡುವಿನ ವ್ಯತ್ಯಾಸಗಳನ್ನು ಹಾಗೂ ಸಂಬಂಧಗಳನ್ನು ಅರಿಯಬೇಕಾಗಿದೆ.

ಕೊನೆಯದಾಗಿ, ಭಾರತದಲ್ಲಿ ಮೂಲ ಜಿಜ್ಞಾಸಿಕ ಸ್ವರೂಪದ ಸಾಮಾಜಿಕ ಹಾಗೂ ರಾಜಕೀಯ ಚಿಂತನೆಯನ್ನು ನಡೆಸಿದ ಅನೇಕರಲ್ಲಿ ಲೋಹಿಯಾ ಒಬ್ಬರು ಎನ್ನುವ ಪರಿಜ್ಞಾನ ನಮಗೆ ಇರಬೇಕಾಗಿದೆ. ಅಂದರೆ ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಭಾರತದ ರಾಜಕಾರಣದ ಪರಿಪ್ರೇಕ್ಷದಲ್ಲಿ ಭಾರತದ ಸಮಾಜವನ್ನು ಅಮೂಲಾಗ್ರವಾಗಿ ಪರಿವರ್ತಿಸಿ ಸಮಾನತೆಯ ನೆಲೆಯ ಹೊಸ ಸಮಾಜದ ಕನಸನ್ನು ಕಂಡ ಚಿಂತಕರ ಒಂದು

ಪರಂಪರೆಯೇ ಲೋಹಿಯಾರ ಜೊತೆಗಿದೆ. ಸ್ವತ: ಲೋಹಿಯಾ ಭಾರತದ ಸಮಾಜವಾದಿ ಆಂದೋಲನದ ಅನೇಕ ನಾಯಕರುಗಳಲ್ಲಿ ಒಬ್ಬರಾಗಿದ್ದರು. ತಾವು ಕಟ್ಟಿ ಬೆಳೆಸಿದ ಸಮಾಜವಾದಿ ಆಂದೋಲನದ ಇತರ ಅನೇಕ ನಾಯಕರುಗಳ ಜೊತೆಗೆ ಅವರಿಗೆ ಸಹಮತ ಹಾಗೂ ಭಿನ್ನ ಮತಗಳಿದ್ದವು. ತಮ್ಮ ಸಮಕಾಲೀನ ಚಿಂತಕ ಗೆಳೆಯರೊಂದಿಗೆ ಲೋಹಿಯಾರ ಬೌದ್ಧಿಕ ಸಂವಾದ ಯಾವ ರೀತಿಯದ್ದಾಗಿತ್ತು ಹಾಗೂ ಈ ಸಂವಾದ–ಸಮಾಲೋಚನೆಗಳು ಹೇಗೆ ಲೋಹಿಯಾರ ಚಿಂತನೆಯನ್ನು ರೂಪಿಸಿದವು ಎನ್ನುವುದರ ಕುರಿತು ನಾವು ಗಮನ ಹರಿಸಬೇಕಾಗುತ್ತದೆ. ಉದಾಹರಣೆಗೆ, ತಮ್ಮ ಸಮಾಜವಾದಿ ಗೆಳೆಯರಾದ ಜಯಪ್ರಕಾಶ್ ನಾರಾಯಣ್, ಆಚಾರ್ಯ ನರೇಂದ್ರದೇವ ಮತ್ತು ಅಚ್ಯುತ ಪಟವರ್ಧನರಂತವರ ಜೊತೆಗೆ ಲೋಹಿಯಾರ ಬೌದ್ಧಿಕ ಪ್ರತಿಸ್ಪಂದನಗಳು ಯಾವ ಸ್ವರೂಪದ್ದಾಗಿದ್ದವು ಹಾಗೂ ಈ ಪ್ರತಿಸ್ಪಂದನಗಳು ರಾಜಕೀಯವಾಗಿ ಲೋಹಿಯಾರನ್ನು ಈ ಗೆಳೆಯರ ಹತ್ತಿರ ಅಥವಾ ದೂರ ಹೇಗೆ ಕರೆದುಕೊಂಡು ಹೋದವು ಎನ್ನುವ ಸಂಗತಿಗಳು ನಮ್ಮ ಗಮನದಲ್ಲಿಲ್ಲದಿದ್ದ ಪಕ್ಷದಲ್ಲಿ ಲೋಹಿಯಾರ ಚಿಂತನೆಯ ಬಗ್ಗೆ ನಾವು ಕೊಡುವ ವಿವರಣೆಗಳು ಅಥವಾ ಮಾಡುವ ಅರ್ಥ ನಿರೂಪಣೆಗಳು ಆಂಶಿಕವಾಗಿ ಉಳಿದುಹೋಗುವ ಸಾಧ್ಯತೆಯಿದೆ. ಲೋಹಿಯಾರ ಸಮಾಜವಾದಿ ದೃಷ್ಟಿಕೋನಕ್ಕೆ ಸ್ಪಷ್ಟತೆ ಹಾಗೂ ಮೊನಚನ್ನು ತಂದುಕೊಡುವಲ್ಲಿ ಅವರ ಸಮಾಜವಾದಿ ಪಕ್ಷದ ಅನೇಕ ಗೆಳೆಯರ ಸಹವಾಸ ಮುಖ್ಯವಾದದ್ದು. ಹಾಗಾಗಿ, ಲೋಹಿಯಾರ ಚಿಂತನೆಯ ವಿಮರ್ಶೆ ಅವರು ಪ್ರತಿನಿಧಿಸಿದ ಭಾರತದ ಸಮಾಜವಾದಿ ಚಿಂತನ ಪರಂಪರೆಯ ಬೌದ್ಧಿಕ ಪರಿಪ್ರೇಕ್ಷದ ವ್ಯಾಪಕತೆಯಲ್ಲಿ ನಡೆಯಬೇಕಾಗಿದೆ. ಜೊತೆಯಲ್ಲಿಯೇ ಭಾರತದ ಸಮಾಜವಾದಿ ಆಂದೋಲನದ ಆಚೆಗಿದ್ದು ಲೋಹಿಯಾರ ಚಿಂತನೆಯನ್ನು ತಾತ್ವಿಕವಾಗಿ ಮೊನಚುಗೊಳಿಸಿದ ಮತ್ತು ರಾಜಕೀಯವಾಗಿ ಹದಗೊಳಿಸಿದ ಅಂಬೇಡ್ಕರ್ ಹಾಗೂ ಪೆರಿಯಾರ್ ಮೊದಲಾದ ಚಿಂತಕರ ಪ್ರಭಾವವನ್ನು ಲೋಹಿಯಾ ಕುರಿತ ವಿಮರ್ಶೆ ಒಳಗೊಳ್ಳಬೇಕಾಗಿದೆ.

ಒಟ್ಟಿನಲ್ಲಿ ನಿರಂತರವಾಗಿ ಬದಲಾಗುತ್ತಿರುವ ಭಾರತ ಹಾಗೂ ಜಾಗತಿಕ ಪರಿಪ್ರೇಕ್ಷದಲ್ಲಿ ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಭಾರತದ ರಾಜಕಾರಣವನ್ನು ಪ್ರಭಾವಿಸಿದ ಚಿಂತಕನೊಬ್ಬನ ತಾತ್ವಿಕ–ರಾಜಕೀಯ ನಡುಪ್ರವೇಶದ ಸ್ವರೂಪವನ್ನು ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ಸೂಕ್ಷ್ಮತೆಯಿಂದ ಗ್ರಹಿಸುವ ಚಾರಿತ್ರಿಕ ಕಾಲಘಟ್ಟದಲ್ಲಿ ನಾವಿದ್ದೇವೆ. ಈ ಜಿಜ್ಞಾಸೆಯಲ್ಲಿ ಲೋಹಿಯಾ ಚಿಂತನೆಯಲ್ಲಿ ಸವೆದು ಹೋದಂತವುಗಳು ಯಾವುವು ಹಾಗೂ ಇನ್ನೂ ಊರ್ಜಿತದಲ್ಲಿರುವಂತವುಗಳು ಯಾವುವು ಎನ್ನುವ ಮೌಲಿಕ ನಿಷ್ಕರ್ಷೆ ನಡೆಯಬೇಕಾಗಿದೆ. ಲೋಹಿಯಾ ಕಣ್ಮರೆಯಾಗಿ ನಾಲ್ಕು ದಶಕಗಳ ನಂತರದಲ್ಲಿ ಅವರ ಚಿಂತನೆ ಹಾಗೂ ಕಾರ್ಯಸೂಚಿಯ ಇಂದಿನ ಅರ್ಥವೇನು? ಅವುಗಳನ್ನು ನಾವು ಹೇಗೆ ಮರುಸಂಘಟಿಸಬಹುದು? ಲೋಹಿಯಾ ಪರಿಭಾವಿಸಿದ ಸಮಾಜವಾದಕ್ಕೆ ಭವಿಷ್ಯವಿದೆಯೇ? ಅಥವಾ ಭವಿಷ್ಯದ ಸಮಾಜವಾದದ ರೂಪುರೇಷೆಗಳೇನು? ಎಂಬಿತ್ಯಾದಿ ಪ್ರಶ್ನೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಲೋಹಿಯಾರ ಚಿಂತನೆ ಹಾಗೂ ಕ್ರಿಯಾಪ್ರಪಂಚದ ಮರುಭೇಟಿಯನ್ನು ಮಾಡುವ ಪ್ರಯತ್ನವನ್ನು ಈ ಪುಸ್ತಕ ಮಾಡುತ್ತದೆ.

**(ಇದು ಡಾ. ರಾಜಾರಾಂ ತೋಳ್ಪಾಡಿ ಅವರು ಲೋಹಿಯಾ ಕುರಿತು *'ಮತ್ತೆ ಮತ್ತೆ ಮತ್ತೆ ಲೋಹಿಯಾ'* ಶೀರ್ಷಿಕೆಯಲ್ಲಿ ಬರೆದಿರುವ ಪುಸ್ತಕದ ಪ್ರಸ್ತಾವನೆಯ ಮಾತುಗಳು. ಪ್ರ: *ಅಹಿರ್ನಿಶಿ,* ಶಿವಮೊಗ್ಗ)**

ಚರ್ಚೆಗಾಗಿ ಒಂದು ಪತ್ರ

# ಜನ ಲೋಕಪಾಲ ಆಂದೋಲನ: ಅನಗತ್ಯ ಟೀಕೆ, ಆತಂಕ, ಅಡ್ಡಿ ಬೇಡ

ಪ್ರಿಯಶ್ರೀ ದಿನೇಶ್ ಅಮೀನ್‌ಮಟ್ಟು ಅವರಲ್ಲಿ,

ಇಂದಿನ(೧೩.೬.೨೦೧೧) 'ಪ್ರಜಾವಾಣಿ'ಯ ನಿಮ್ಮ ಅಂಕಣದಲ್ಲಿ ಜನಲೋಕಪಾಲ ಮಸೂದೆಯ ಕರಡನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ನಾಗರಿಕ ಸಮಾಜದ ರೂಪದಲ್ಲಿ ಸಂವಿಧಾನೇತರ ಶಕ್ತಿಗಳ ಕೈವಾಡ ಹೆಚ್ಚುತ್ತಿದೆ ಎಂದು ಆತಂಕ ವ್ಯಕ್ತಪಡಿಸಿ ನೀವು ಬರೆದದ್ದನ್ನು ಓದಿದೆ. ನಿಮ್ಮ ವಾದ ಒಂದು ಆದರ್ಶ ಅಥವಾ ಪ್ರಬುದ್ಧ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಸರಿಯೆನಿಸೀತೇನೋ! ನಿಮ್ಮ ಬರಹದ ಕೊನೆಯಲ್ಲಿ ಹಾಕಿರುವ, 'ಇದರಿಂದ ಸಂಸದೀಯ ಪ್ರಜಾಪ್ರಭುತ್ವ ದುರ್ಬಲಗೊಳ್ಳುವುದಿಲ್ಲವೇ?' ಎಂಬ ಪ್ರಶ್ನೆಯನ್ನು ನಿಮ್ಮ ಬರಹದ ಆರಂಭದಲ್ಲೇ ಹಾಕಿಕೊಂಡು, ಇಂದಿನ ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಮುಟ್ಟಿರುವ ಸ್ಥಿತಿಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದರೆ ಬಹುಶಃ ನೀವು ಹೀಗೆ ವಾದ ಮಾಡುತ್ತಿರಲಿಲ್ಲ!

ಪ್ರಜಾಪ್ರಭುತ್ವ ಇಂದು ದುರ್ಬಲಗೊಂಡಾಗಿದೆಯಲ್ಲವೇ? ಅದರಿಂದಾಗಿಯೇ ಇಷ್ಟೆಲ್ಲ ಗೊಂದಲಗಳಲ್ಲವೇ, ಸಾಂವಿಧಾನಿಕ–ಅಸಂವಿಧಾನಿಕ ಶಕ್ತಿಗಳನ್ನು ಕುರಿತ ಚರ್ಚೆಗಳಲ್ಲವೇ? ಪ್ರಜಾಪ್ರಭುತ್ವ ಇಂದು ದುರ್ಬಲಗೊಂಡಿರುವುದು, ಯಾವುದನ್ನು ನೀವು ಇವು ಮಾತ್ರ–ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ– ಸಾಂವಿಧಾನಿಕ ಶಕ್ತಿಗಳು ಎಂದು ಮಾನ್ಯತೆ ನೀಡಿರುವಿರೋ, ಅವುಗಳ ವೈಫಲ್ಯಗಳಿಂದಲೇ ಅಲ್ಲವೇ? ಸಭ್ಯ ಸಾಮಾನ್ಯ ನಾಗರಿಕರಾರೂ ಚುನಾವಣೆಗಳಿಗೆ ನಿಂತು ನೀವು ಚೌಕಟ್ಟು ಹಾಕಿರುವಂತಹ ಸಂವಿಧಾನಿಕ ಶಕ್ತಿಗಳಾಗಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಯನ್ನು ಇವು ಮೂರೂ ಸೇರಿ ಉಂಟು ಮಾಡಿರುವಾಗ ನೀವು ಯಾವ ತೆರೆನ ಸಾಂವಿಧಾನಿಕ ಶಕ್ತಿಯ ಬಗ್ಗೆ ಮಾತನಾಡುತ್ತಿರುವಿರೋ ತಿಳಿಯದಾಗಿದೆ!

ನಾಗರಿಕ ಸಮುದಾಯವೂ, ತನಗೆ ದತ್ತವಾಗಿರುವ 'ಪ್ರಜೆತನ'ದಿಂದಾಗಿ ಸಾಂವಿಧಾನಿಕ ಶಕ್ತಿಯ ಒಂದು ಭಾಗವೇ ಆಗಿದೆ.(ಇದನ್ನು ಬೇಕಾದರೆ ಸುಪ್ತ ಸಾಂವಿಧಾನಿಕ ಶಕ್ತಿಯೆಂದು ಕರೆಯಬಹುದು.) ನೀವು ಹೇಳುವ ಸಾಂವಿಧಾನಿಕ ಶಕ್ತಿ(ಇದನ್ನು ಕ್ರಿಯಾತ್ಮಕ ಸಾಂವಿಧಾನಿಕ ಶಕ್ತೆಂದು ಕರೆಯಬಹುದು.), ಇದರ ಪ್ರಾತಿನಿಧಿಕ ರೂಪವಷ್ಟೇ. ಹಾಗಾಗಿ ಈ ಪ್ರಾತಿನಿಧಿಕ ಶಕ್ತಿ ರೂಪ, ಯಾವುದರ ಬಲದಿಂದ ತಾನು ಮೂಡಲು ಸಾಧ್ಯವಾಗಿದೆಯೋ ಆ ಸಂವಿಧಾನದ ಮೂಲ ಉದ್ದೇಶಗಳನ್ನೇ, ಅದರ ಪ್ರಕ್ರಿಯೆಗಳನ್ನೇ ಬುಡಮೇಲು ಮಾಡಬಲ್ಲಷ್ಟು ರಾಕ್ಷಸವಾದಾಗ, ಅದರ ಮೂಲಾಧಾರವಾದ ಪ್ರಜಾಶಕ್ತಿಯ ರೂಪದಲ್ಲಿರುವ (ಸುಪ್ತ)ಸಾಂವಿಧಾನಿಕ ಶಕ್ತಿಯು ಎಚ್ಚರಗೊಳ್ಳುವುದೂ ಒಂದು ಸಾಂವಿಧಾನಿಕ ಪ್ರಕ್ರಿಯೆಯೇ ಎಂದು ನಾನು ಭಾವಿಸಿದ್ದೇನೆ. ನೀವು ಸಂವಿಧಾನೇತರವೆಂದು ಗುರುತಿಸುವ ಈ ಶಕ್ತಿಗಳೂ ಜನತೆಯ ಸಾಮೂಹಿಕ ಬೆಂಬಲ ಪಡೆದಿರುವುದರಿಂದಲೇ ಅವು ಸರ್ಕಾರದ ಮೇಲೆ ಒತ್ತಡ ಉಂಟು ಮಾಡಲು ಸಾಧ್ಯವಾಗಿರುವುದು ಅಲ್ಲವೇ? ಅವಕ್ಕೆ ಜನ ಬೆಂಬಲ ಇಲ್ಲವಾದ

ಕೂಡಲೇ–ಈಗ ಬಾಬಾ ರಾಂದೇವ್‌ಗೆ ಆಗುತ್ತಿರುವಂತೆ–ಅವುಗಳ ಪರಿಣಾಮವೂ ಕುಂದುತ್ತಾ ಹೋಗುತ್ತದೆ.

ನೀವು ನಿಮ್ಮ ವಾದದ ಭಾಗವಾಗಿ ಪ್ರಸ್ತಾಪಿಸುವ ಆರೆಸ್ಸೆಸ್ ಅಥವಾ ಇನ್ನಿತರ ಫ್ಯಾಸಿಸ್ಟ್ ಶಕ್ತಿಗಳ ಕೈವಾಡವನ್ನು ಜನತಾ ಶಕ್ತಿಯೇ ನಿರ್ವಹಿಸಬಲ್ಲುದಾಗಿದೆ ಮತ್ತು ಜನತಾ ಶಕ್ತಿ ಮಾತ್ರ ನಿರ್ವಹಿಸಬೇಕಾಗಿದೆ. ಆ ದಿಕ್ಕಿನಲ್ಲಿ ಜನತೆಯನ್ನು ಎಚ್ಚರಿಸುವ ಕೆಲಸವನ್ನು(ಈಗ ಬಾಬಾ ರಾಂದೇವ್ ಅವರ ಆಂದೋಲನದ ಬಗ್ಗೆ ಮಾಡಿದಂತೆ)ಮಾಡುವುದು ಪ್ರಜ್ಞಾವಂತಿಕೆಯ ಕೆಲಸವಾದೀತೇ ಹೊರತು, ಸಾರಾ ಸಗಟಾಗಿ ಜನತಾ ಶಕ್ತಿಯ ಒಂದು ಅಭಿವ್ಯಕ್ತಿ ಕ್ರಮವನ್ನು ಇಂತಹ ಕಾರಣಗಳಿಂದಾಗಿ(ಮತ್ತು ಕೆಲವು ಸಾಮಾಜಿಕ ನ್ಯಾಯವಾದಿಗಳು ನಮ್ಮ ಪ್ರಜಾಪ್ರಭುತ್ವದ ಆಧಾರಗಳನ್ನೇ ಬುಡಮೇಲುಗೊಳಿಸಲು ಹೊರಟಿರುವ ಇಂದಿನ ಬೃಹತ್ ಭ್ರಷಾಚಾರದ ಬಗ್ಗೆ ಈಗ ಎಚ್ಚೆತ್ತುಕೊಂಡವರಂತೆ,ಈ ಸಮಿತಿಯಲ್ಲಿ ಹಿಂದುಳಿದವರಿಲ್ಲ, ಅಲ್ಪಸಂಖ್ಯಾತರಿಲ್ಲ, ದಲಿತರಿಲ್ಲ, ಮಹಿಳೆಯರಿಲ್ಲ ಎಂದು ಹಾಕುತ್ತಿರುವ ಬೊಬ್ಬೆಯ ಕಾರಣದಿಂದಾಗಿ) ಅಸಂವಿಧಾನಿಕ ಎಂದು ಗುರುತಿಸುವುದು ಸಂಸದೀಯ ಪ್ರಜಾಪ್ರಭುತ್ವವನ್ನು ಕೇವಲ ತಾಂತ್ರಿಕ ಚೌಕಟ್ಟಿನೊಳಕ್ಕೆ ತುರುಕಿ ಉಸಿರುಗಟ್ಟಿಸುವ ಅಪಾಯಕಾರೀ ಕೆಲಸವಾದೀತೆಂದು ನನ್ನ ಭಾವನೆ. ನಿಮ್ಮ ವಾದವೇ ಸರಿಯಿದ್ದರೆ, ಎಪ್ಪತ್ತರ ದಶಕದ ಜೆಪಿ ಆಂದೋಲನವೇ ಸಾಧ್ಯವಾಗುತ್ತಿರಲಿಲ್ಲ. ಅಂದು ಈ ಆಂದೋಲನದ ಬಗ್ಗೆಯೂ ಸರಿ ಸುಮಾರು ಇಂತಹುದೇ ಆಕ್ಷೇಪಣೆಗಳನ್ನು ಎತ್ತಲಾಯಿತು.(ಅವನ್ನು ಪುನರುಚ್ಚರಿಸುವ ಜನ ಈಗಲೂ ಇದ್ದಾರೆ ಎಂಬುದು ಬೇರೆ ವಿಷಯ.) ಆದರೆ ಜೆಪಿ ಆಂದೋಲನ ನಡೆಯದಿದ್ದರೆ, ಯಾವ ಸಾಂವಿಧಾನಿಕ ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಯ ಕಳಕಳಿಯನ್ನು ನೀವು ಇಂದು ತೋರಿಸುತ್ತಿದ್ದೀರೋ ಆ ಪ್ರಜಾಪ್ರಭುತ್ವ ಖಂಡಿತ ನಮ್ಮ ಪಾಲಿಗೆ ಹೀಗಂತೂ ಇರುತ್ತಿರಲಿಲ್ಲ.

ಇನ್ನು ನೀವು ಪ್ರಸ್ತಾಪಿಸಿರುವ ಸೋನಿಯಾ ಗಾಂಧಿ–ರಾಷ್ಟ್ರೀಯ ಸಲಹಾ ಮಂಡಳಿ(ಎನ್.ಎ.ಸಿ.)–ಮನಮೋಹನ ಸಿಂಗ್ ಅವರ ನಡುವಣ ಸಾಂವಿಧಾನಿಕ ಸಂಬಂಧಗಳು ಮತ್ತು ಇವುಗಳ ಹಿನ್ನೆಲೆಯಲ್ಲಿ ಇಂದಿನ ಈ ಪರಿಸ್ಥಿತಿಯಲ್ಲಿ ಜನತಾ ಶಕ್ತಿಯ ಆತ್ಯಂತಿಕ ರೂಪವಾಗಿರುವ ಪ್ರಧಾನಿ ಸ್ಥಾನ ಅ–ಪ್ರಧಾನವಾಗುತ್ತಿರುವ ಆತಂಕದ ಬಗ್ಗೆ ಹೇಳುವುದಾದರೆ, ಮೊದಲಾಗಿ ಮನಮೋಹನ ಸಿಂಗರು ಯಾವ ಜನತಾ ಶಕ್ತಿಯ, ಎಂತಹ ಪ್ರತಿನಿಧಿಯೆಂದು ಮೊದಲು ಯೋಚಿಸಬೇಕಾಗುತ್ತದೆ. ಅಣ್ಣಾ ಹಜಾರೆ ಮತ್ತವರ ಸಹವರ್ತಿಗಳೋ ಅಥವಾ ಬಾಬಾ ರಾಂದೇವ್‌ರೋ ಆರೆಸ್ಸೆಸ್ ಕೈಗೊಂಬೆಗಳೇ ಆಗಿದ್ದಾರೆಂದು ಹೇಳುವುದಾದರೆ, ಈ ಮನಮೋಹನ ಸಿಂಗ್ ಮೂಲತಃ ಯಾರ ಕೈಗೊಂಬೆ ಎಂದು ಕೇಳಬಹುದಲ್ಲವೇ? ಇವರು ಮೊದಲು ಸುಳ್ಳು ವಿಳಾಸ ನೀಡಿ ಸಂವಿಧಾನದ ನಿಯಮವನ್ನೇ ಉಲ್ಲಂಘಿಸಿ ಸಂಸತ್ತನ್ನು ಪ್ರವೇಶಿಸಿ, ಸಚಿವರೂ ಆದರು. ನಂತರ ಜನತೆಯ ಆದೇಶವಿಲ್ಲದೆಯೇ ದೇಶದ ಅಭಿವೃದ್ಧಿಯ ಆದ್ಯತೆ ಮತ್ತು ಸ್ವರೂಪಗಳನ್ನೇ ಮೂಲಭೂತವಾಗಿ ಬದಲಿಸಿದ ಈ ಮನಮೋಹನ ಸಿಂಗರು, ಈಗ ನಮ್ಮ ಸಂವಿಧಾನ ನಿರ್ಮಾತೃಗಳು ಬಹುಶಃ ತುರ್ತು ಸಂದರ್ಭಗಳಿಗಿರಲೆಂದು ಮಾಡಿಕೊಟ್ಟ ರಾಜ್ಯಸಭಾ ಸದಸ್ಯರೂ ಪ್ರಧಾನ ಮಂತ್ರಿಗಳಾಗಬಹುದೆಂಬ ಅವಕಾಶವನ್ನು ಬಳಸಿಕೊಂಡು ಎರಡನೇ ಬಾರಿಗೆ ಪ್ರಧಾನ ಮಂತ್ರಿಯಾಗಿರುವವರು! ಇವರು ಪ್ರಧಾನ ಮಂತ್ರಿಯಾಗಿರುವುದೇ ಸೋನಿಯಾ ಅವರ ಕೃಪೆಯಿಂದ ಎಂಬುದು ಸಾರ್ವಜನಿಕವಾಗಿ ಬಹಿರಂಗವಾದ ವಿಚಾರ. ಹೀಗಿರುವಾಗ ಇವರು ಎಂತಹ ರಾಜಕೀಯ ಅಧಿಕಾರಕ್ಕೆ ಬಾಧ್ಯಸ್ಥರಾಗಬಲ್ಲರು? ಹಾಗೆ ಇವರು ಬಾಧ್ಯಸ್ಥರಾಗಿಲ್ಲದಿರುವುದರಿಂದಲೇ, ಸೋನಿಯಾ ಗಾಂಧಿಯವರು ರಾಷ್ಟ್ರೀಯ ಸಲಹಾ ಮಂಡಳಿ ಎಂಬ ಸಮಾನಾಂತರ ಅಧಿಕಾರ ಪ್ರಾಧಿಕಾರವೊಂದನ್ನು ರಚಿಸಿ ಆಡಳಿತ ನೀತಿ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ಪರಿಣಿತಿಯನ್ನು 'ಹೊರಗುತ್ತಿಗೆ'ಯ ಮೂಲಕ ಪಡೆಯುವ ಅನಿವಾರ್ಯತೆಗೆ ಸಿಕ್ಕಿರುವುದು ಅಲ್ಲವೇ? ಅಂದಹಾಗೆ ಈ 'ಹೊರ ಗುತ್ತಿಗೆ' ಪದ್ಧತಿ ಯಾರ ಕೊಡುಗೆ? ಹಾಗೆ ನೋಡಿದರೆ, ಇಂದಿನ ಎಲ್ಲ ರಾಜಕೀಯ ಬಿಕ್ಕಟ್ಟುಗಳಿಗೆ ರಾಜ್ಯಸಭಾ ಸದಸ್ಯರೊಬ್ಬರು ದೀರ್ಘಕಾಲಿಕವಾಗಿ ಪ್ರಧಾನ ಮಂತ್ರಿಯಾಗಿರುವುದೇ ಕಾರಣವೆಂದು ನಾನು ಭಾವಿಸುತ್ತೇನೆ.

ಹೀಗೆ ಪ್ರಜಾಪ್ರಭುತ್ವವೆಂಬುದೇ ಮೂಲಾಧಾರಗಳನ್ನು ಕಳಚಿಕೊಂಡು, ಹೊಸ ಸಂದರ್ಭಕ್ಕೆ ತನ್ನನ್ನು ತಾನು ಅಳವಡಿಕೊಳ್ಳುತ್ತಿರುವ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಆದರ್ಶ ಪ್ರಜಾಪ್ರಭುತ್ವದ ಆದರ್ಶಗಳ ಪಾಲನೆಯ ಮಾತಾಡುವುದು, ರೋಗ ಲಕ್ಷಣಗಳನ್ನೇ ರೋಗವೆಂದು ಗುರುತಿಸಿ ಆತಂಕಗೊಳ್ಳುವ ಕೆಲಸವಾಗುತ್ತದೆ. ನೀವು ಸಂವಿಧಾನೇತರ ಶಕ್ತಿಗಳು ಎಂದು ಕರೆಯುವ ಈ ನಾಗರಿಕ ಸಮಿತಿಗಳು ನೀವು ಹೇಳಿದಂತೆ ಅಂತಿಮ ಶಾಸನ ರಚಿಸುವ ಕೆಲಸವನ್ನೇನೂ ಮಾಡುತ್ತಿಲ್ಲ. ಅವರದೇನಿದ್ದರೂ, ಸರ್ಕಾರದೊಂದಿಗೆ ಅನುಸಂಧಾನಿಸುತ್ತಾ(ಈಗ ಅದೂ ವಿಫಲವಾಗಿ, ನೇರವಾಗಿ ಜನತೆಯೊಂದಿಗೆ ಅನುಸಂಧಾನಿಸುತ್ತಾ) ಕರಡು ಮಸೂದೆಯನ್ನೋ ನೀತಿ ನಿರೂಪಣೆಯನ್ನೋ ಸಿದ್ಧಪಡಿಸುವುದಷ್ಟೆ. ಅದರ ಮೇಲೆ, ಸಚಿವ ಸಂಪುಟವಿದೆ, ಸಂಸತ್ತಿದೆ, ಅದರದೇ ಆದ ಅಂಗ ಸಂಸ್ಥೆಗಳಿವೆ, ಅವನ್ನು ಅಂತಿಮವಾಗಿ ಒಪ್ಪಲು ಅಥವಾ ಬಿಡಲು.

ಆದುದರಿಂದ ನೀವು ಹೇಳುವಂತಹ ಸಂವಿಧಾನೇತರ ಶಕ್ತಿಗಳು ಸಂವೈಧಾನಿಕವಾಗಿ ನಿರ್ಣಾಯಕವೆನ್ನಬಹುದಾದ ಕೆಲಸಗಳಲ್ಲೇನೂ ತೊಡಗಿಲ್ಲ. ನಮ್ಮ ಸಂವಿಧಾನದ ಕ್ರಿಯಾತ್ಮಕ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಹಾಗೂ ನಾಲ್ಕನೇ ಅನೌಪಚಾರಿಕ ಅಂಗವೆನಿಸಿದ ಮಾಧ್ಯಮ ರಂಗ ನಿಧಾನವಾಗಿ ಭ್ರಷ್ಟತೆಯ ಗಂಭೀರ ಆರೋಪಗಳನ್ನು ಎದುರಿಸುವಂತಾಗಿ, ಇವುಗಳನ್ನಾಧರಿಸಿದ ಪ್ರಜಾಪ್ರಭುತ್ವವೇ ಅರ್ಥಹೀನವೆನ್ನಿಸತೊಡಗಿ ಅಪಾಯಕ್ಕೆ ಸಿಕ್ಕಿರುವ ಸಂದರ್ಭವಿದು. ಇಂತಹ ಸಂದರ್ಭದಲ್ಲಿ, ಸಂವಿಧಾನದ ಸುಪ್ತ ಶಕ್ತಿಯೆನಿಸಿರುವ ಜನತಾ ಶಕ್ತಿಯ ಪ್ರತಿನಿಧಿಯಾಗಿ ನಾಗರಿಕ ಸಮಿತಿಗಳು ಕ್ರಿಯಾಶೀಲವಾಗತೊಡಗುವುದು ನಮಗೆ ಭರವಸೆಯ ಬೆಳಕಾಗಿ ಕಾಣಬೇಕೇ ಹೊರತು, ಕೆಡುಕಿನ ಸೂಚನೆಯಾಗಿ ಅಲ್ಲ. ಜನತಾ ಶಕ್ತಿ ಪ್ರಜಾಪ್ರಭುತ್ವಕ್ಕೆ ಉಂಟಾಗಿರುವ ಅಪಾಯದ ಬಗ್ಗೆ ಎಷ್ಟು ಸೂಕ್ಷ್ಮ ಹಾಗೂ ಕ್ರಿಯಾಶೀಲವಾಗಿರುತ್ತದೋ ಅಷ್ಟು ಮಾತ್ರ ಈ ನಾಗರೀಕ ಸಮಿತಿಗಳು ಸೂಕ್ಷ್ಮ ಹಾಗೂ ಕ್ರಿಯಾಶೀಲವಾಗಿರಬಲ್ಲವು. ಹಾಗಾಗಿ ಈ ನಾಗರಿಕ ಸಮಿತಿಗಳ ಮಿತಿಗಳು ಮತ್ತು ಅತಿಗಳ ಬಗ್ಗೆ ದೂರುತ್ತಾ ಕೂರುವುದಕ್ಕಿಂತ, ಜನತಾ ಶಕ್ತಿಯನ್ನು ಹೆಚ್ಚು ಸೂಕ್ಷ್ಮ ಹಾಗೂ ಕ್ರಿಯಾಶೀಲಗೊಳಿಸುವತ್ತ ಗಮನ ಹರಿಸುವುದು ಪ್ರಜ್ಞಾವಂತರ ಕೆಲಸವಾಗಬೇಕು.

ನಿಮ್ಮ ಪತ್ರಿಕೆಯಲ್ಲಿ ಯಾವುದಾವುದೋ ತಾಂತ್ರಿಕ ಕಾರಣಗಳ ಮೇಲೆ ಓದುಗರಿಗೆ ದೀರ್ಘ ಪ್ರತಿಕ್ರಿಯೆ ಹಾಗೂ ಸಂವಾದಕ್ಕೆ ಅವಕಾಶವಿಲ್ಲದಿರುವುದರಿಂದ ನಿಮಗೆ ನೇರವಾಗಿ ಬರೆದಿರುವೆ. ನೀವು ಗಮನಿಸಿದ ಮೇಲೆ ಇದನ್ನು ನನ್ನ ಇತರ ಕೆಲವು ಗೆಳೆಯರಿಗೆ ತಲುಪಿಸುವ ಇರಾದೆ ನನ್ನದು.

–ಡಿ.ಎಸ್.ನಾಗಭೂಷಣ

**ಸೂಚನೆ:** ಈ ಪತ್ರಿಕೆಗೆ ಸದ್ಯಕ್ಕೆ ಚಂದಾ ಇಲ್ಲ. ಹಾಗಾಗಿ, ಪತ್ರಿಕೆ ಉಳಿದು ಬೆಳೆಯಬೇಕೆಂದು ಬಯಸುವವರು ಪತ್ರಿಕೆಯ ಪೋಷಕ ನಿಧಿಗೆ ತಮ್ಮ ಶಕ್ತ್ಯಾನುಸಾರ ದೇಣಿಗೆ ಕಳಿಸಿ(ಸಂಪಾದಕರ ವಿಳಾಸಕ್ಕೆ) ಪತ್ರಿಕೆಯ ಮುದ್ರಿತ ಪ್ರತಿಯನ್ನು ಅಂಚೆ ಮೂಲಕ ಪಡೆಯಬಹುದು- **ಸಂ.** **(94492 42284)**